ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 28

ಜುಲೈ 13 2008

ಕನ್ನಡ ವಾರಪತ್ರಿಕೆ

www.janashakthi.org

ರೂ. 5/-



ಅಣು ಒಪ್ಪಂದ: ಒತ್ತಡ ಎಲ್ಲಿಂದ?



ಕೃಷಿ ಬಿಕ್ಕಟ್ಟು: ಚರ್ಚೆಯೆಂಬ ಒಣ ಪ್ರಹಸನ



ಜಮ್ಮು: ಕೋಮು ದೃವೀಕರಣದ ಹೊಸ ಆಟ

ಆಗಸ್ಟ್ 20: ರಾಷ್ಟ್ರವ್ಯಾಪಿ ಮುಷ್ಕರಕ್ಕೆ ದುಡಿವ ವರ್ಗದ ಪಣ

ಗೊಂದಲದ ಗೂಡು ಅಂಗವಿಕಲರ ಶಿಕ್ಷಣ

ಇದ್ದದ್ದು ಇದ್ದಾಂಗ...

ಆದ್ಯತೆ....... ಸಂಸ್ಕೃತ ವಿ.ವಿ.

"ದೇಶದ 12 ರಾಜ್ಯಗಳಲ್ಲಿ ಸಂಸ್ಕೃತ ವಿಶ್ವವಿದ್ಯಾಲಯಗಳಿವೆ. ಕರ್ನಾಟಕದಲ್ಲಿ ಇಲ್ಲ. ರಾಜ್ಯದಲ್ಲಿರುವ 10-12 ಸಂಸ್ಕೃತ ಪಾಠ ಶಾಲೆಗಳನ್ನು ವಿ.ವಿ.ವ್ಯಾಪ್ತಿಗೆ ತರಲಾಗುವುದು. ಈ ಸಂಬಂಧ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲಾಗುತ್ತಿದ್ದು, ಬರುವ ಆಯವ್ಯಯದಲ್ಲಿ ಪ್ರಕಟಿಸುವ ನಿರೀಕ್ಷೆ ಇದೆ"

– ಅರವಿಂದ ಲಿಂಬಾವಳಿ
ರಾಜ್ಯ ಉನ್ನತ ಶಿಕ್ಷಣ ಸಚಿವರು

ಒಡೆಯುತ್ತೇವೆ.....?

"ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳನ್ನು ನಾವು ಒಡೆಯದೇ ಬಿಡುವುದಿಲ್ಲ"

-ಕೆ.ಎಸ್.ಈಶ್ವರಪ್ಪ,
ರಾಜ್ಯ ಇಂಧನ ಸಚಿವ

ಅಸಮಾನತೆಗೆ ದಾರಿ

"ಶೈಕ್ಷಣಿಕ ಅಸಮಾನತೆಗೆ ಅವಕಾಶ ಮಾಡಿಕೊಡುವಂತಹ ತೀರ್ಪು ಇದಾಗಿದೆ. ಮಕ್ಕಳಲ್ಲಿ ತಾರತಮ್ಯ ಮಾಡುವಂತಹದ್ದಾಗಿದೆ. ರಾಜ್ಯ ಸರ್ಕಾರ ಈ ತೀರ್ಪು ಜಾರಿ ಆಗದಂತೆ ಸುಪ್ರೀಂಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತರಬೇಕು"

-ಪ್ರೊ: ಬರಗೂರು ರಾಮಚಂದ್ರಪ್ಪ
ಬಂಡಾಯ ಸಾಹಿತಿಗಳು, ಶಿಕ್ಷಣ ಮಾಧ್ಯಮದ ಕುರಿತ
ರಾಜ್ಯ ಹೈಕೋರ್ಟ್ ತೀರ್ಪಿನ ಬಗ್ಗೆ

ತೋಟದ ಹಣ್ಣು

"ತೋಟದ ಮರಗಳಲ್ಲಿ ಹಣ್ಣು ಬಿಟ್ಟಿರುತ್ತದೆ. ನಮಗೆ ಯಾವುದು ಬೇಕೋ ಅದನ್ನು ಕಿತ್ತುಕೊಳ್ಳುತ್ತೇವೆ. ಹಾಗೇ ಸರ್ಕಾರ ನಡೆಸುತ್ತಿರುವ ನಾವು ಬೇಕಿರುವ ಹಣ್ಣನ್ನು ತೋಟದ ಮರದಿಂದ ಕಿತ್ತುಕೊಳ್ಳುತ್ತೇವೆ"

-ರಾಮಚಂದ್ರೇಗೌಡ,
ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವರು
ಇತರೆ ಪಕ್ಷಗಳಿಂದ ಶಾಸಕರನ್ನು ಸೆಳೆಯುವ ಬಗ್ಗೆ

ಅಭಿವೃದ್ಧಿ ಹೆಸರಿನಲ್ಲಿ ಶಿಕ್ಷಣದ ಕೇಸರೀಕರಣ : ಟೀಕೆ

ಎಸ್‌ಎಫ್‌ಐ ರಾಜ್ಯ ಶೈಕ್ಷಣಿಕ ಸಮಾವೇಶ

ಪ್ರಸ್ತುತ ಶೈಕ್ಷಣಿಕ ರಂಗದ ಸವಾಲುಗಳು, ರಾಜಕೀಯ, ಸಾಮಾಜಿಕ ಆರ್ಥಿಕ ಕ್ಷೇತ್ರದ ಪ್ರಶ್ನೆಗಳನ್ನೊಳಗೊಂಡಂತೆ ಹಾಗೂ ಸಂಘಟನೆ, ವಿದ್ಯಾರ್ಥಿಗಳ ಮುಂದಿರುವ ಜವಾಬ್ದಾರಿ, ಹೋರಾಟ ಕುರಿತಂತೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ)ನ ರಾಜ್ಯ ಶೈಕ್ಷಣಿಕ ಸಮಾವೇಶ ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೆನೆಟ್ ಹಾಲ್‌ನಲ್ಲಿ ನಡೆಯಿತು.



ರಾಜ್ಯದ ಬೇರೆ ಬೇರೆ ಭಾಗದಿಂದ ಸುಮಾರು 200 ಜನ ವಿದ್ಯಾರ್ಥಿ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡು, ಶೈಕ್ಷಣಿಕ ರಂಗದಲ್ಲಿನ ಗಂಭೀರ ಸಮಸ್ಯೆ ಹಾಗೂ ಸವಾಲುಗಳ ಕುರಿತು ಚರ್ಚಿಸಿದರಲ್ಲದೆ ಸಂಘಟನಾತ್ಮಕ ಪ್ರಶ್ನೆಗಳು ಹಾಗೂ ರಾಷ್ಟ್ರಮಟ್ಟದ ಸಮ್ಮೇಳನದ ತಯಾರಿ ಕುರಿತು ಪರಾಮರ್ಶೆ ಮಾಡಿದರು.



ಸಮಾವೇಶದಲ್ಲಿ ಕಾಂ. ಜಿ.ವಿ.ಎಸ್.

ಶಿಕ್ಷಣದ ಖಾಸಗೀಕರಣ, ಕೇಸರೀಕರಣ, ಅಸಮಾನತೆ, ಉನ್ನತ ಶಿಕ್ಷಣದ ಕಡೆಗಣಿಸುವಿಕೆ, ದಲಿತ ಹಾಗೂ ಹಾಸ್ಟೇಲ್ ವಿದ್ಯಾರ್ಥಿಗಳ ಸಮಸ್ಯೆ, ಬೆಲೆ ಏರಿಕೆ, ರೈತರ ಆತ್ಮಹತ್ಯೆ, ಹಣದುಬ್ಬರ ಸಮಸ್ಯೆ ಹೀಗೆ ಬೇರೆ ಬೇರೆ ವಿಷಯದ ಮೇಲೆಯೂ ಸಮಾವೇಶದಲ್ಲಿ ಚರ್ಚಿಸಲಾಯಿತು.


ಈ ಕುರಿತಾಗಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಜನವಿರೋಧಿ ನೀತಿಯನ್ನು ಸಮಾವೇಶ ಖಂಡಿಸಿತು.

ಸಮಾವೇಶ ಉದ್ಘಾಟಿಸಿ ಎಸ್‌ಎಫ್‌ಐ ಸಂಸ್ಥಾಪಕ ಮುಖಂಡರಲ್ಲೊಬ್ಬರಾದ ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತಾ "ನಮ್ಮನ್ನು ಆಳುವ ವರ್ಗಗಳು ಹಾಗೂ ಪಕ್ಷಗಳು ದಿನವೊಂದು ಸಮಸ್ಯೆಯನ್ನು ತಮ್ಮ ಲಾಭಕ್ಕಾಗಿ ಉದ್ದೇಶಪೂರ್ವಕವಾಗಿಯೇ ಹುಟ್ಟುಹಾಕುತ್ತಿವೆ. ರಾಜ್ಯ ಬಿಜೆಪಿ ಸರ್ಕಾರ ನಮ್ಮ ರಾಜ್ಯದಲ್ಲಿ ಗುಜರಾತ್ ಮಾದರಿಯ ಶಿಕ್ಷಣ ವ್ಯವಸ್ಥೆಯನ್ನು ಹುಟ್ಟುಹಾಕಲಿಕ್ಕೆ ಏನೆಲ್ಲಾ ಸರ್ಕಸ್ಸು ಮಾಡುತ್ತಿದೆ. ಪಠ್ಯಪುಸ್ತಕ ಬದಲಾವಣೆ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ಹೆಸರಿನಲ್ಲಿ ತನ್ನ ಕೋಮುವಾದಿ ಅಜೆಂಡಾವನ್ನು ಶಿಕ್ಷಣದ ಮೂಲಕ ಜಾರಿಗೊಳಿಸಲು ಸನ್ನದ್ಧಾಗುತ್ತಿದೆ.

ಇತ್ತೀಚಿನ ಪ್ರಾಥಮಿಕ ಶಿಕ್ಷಣದಲ್ಲಿನ ಭಾಷಾ ಮಾಧ್ಯಮ ಗೊಂದಲಕ್ಕೂ ಬಿಜೆಪಿಯೇ ಕಾರಣವಾಗಿದ್ದು, ಮಠಾಧೀಶರ, ಬಂಡವಾಳಶಾಹಿಗಳ ಪರ ತೀರ್ಪು ಬರುವುದಕ್ಕೆ ಕುಮ್ಮಕ್ಕು ನೀಡಿದೆ ಎಂದರು.

ಶಿಕ್ಷಣ ಅಂದ್ರೇನು, ಸಮಾಜ ಅಂದ್ರೇನು ಎಂಬುದನ್ನು ತಿಳಿಯದ ಜನ, ಧರ್ಮ, ಸಂಸ್ಕೃತಿ ಕುರಿತು ಅಂಧಕಾರ ತುಂಬಿಕೊಂಡವರು ಅಧಿಕಾರದಲ್ಲಿರುವುದರಿಂದಲೇ ಶಿಕ್ಷಣ ರಂಗದಲ್ಲಿ ಅಸಮಾನತೆ ತಲೆದೋರಿದೆ. ಪರಿಣಾಮ ಜಾತಿಯೇ ಅರ್ಹತೆ ಎನ್ನುವಂತಾಗಿದೆ. ಶಿಕ್ಷಣ ಮಂತ್ರಿಗಳು ಬಿಜೆಪಿಯ ಅಜೆಂಡಾದಂತೆ ಒಂದೇ ಧರ್ಮದ ಪರವಾಗಿ ಶಿಕ್ಷಣ ನೀತಿಗಳನ್ನು ರೂಪಿಸುತ್ತಿದ್ದು, ಇವರ ಹಿಡನ್ ಅಜೆಂಡಾಕ್ಕೆ ಶಿಕ್ಷಣ ಮೊದಲ ಬಲಿಯಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕೇಳುವುದರೊಂದಿಗೆ ಬಿಜೆಪಿ ನೀತಿಗಳ ವಿರುದ್ಧ ಪ್ರಶ್ನಿಸುವಂತಾಗಬೇಕು, ಅವರ ವಿರುದ್ಧ ಚಳುವಳಿ ಕಟ್ಟುವಂತಾಗಬೇಕು ಎಂದರು.


ಪುಟ 12ಕ್ಕೆ



ಪ್ರತಿನಿಧಿ ಸಮೂಹ

ಅಪ್ರತಿಮ ಹೋರಾಟಗಾರ ಕಾಂ. ಸೂರಿ ನೆನಪು

ಜುಲೈ 1, ದುಡಿಯುವ ವರ್ಗದ ಸಿಂಹಧ್ವನಿ ಎಂದೇ ಪರಿಗಣಿಸಲಾಗಿದ್ದ ಕಾಂ: ಎಸ್.ಸೂರ್ಯನಾರಾಯಣರಾವ್ ಅವರು ನಿಧನರಾದ ದಿನ. ಇದರ ಸಂಬಂಧ ಅಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಛೇರಿಯಲ್ಲೊಂದು ಕಾರ್ಯಕ್ರಮ ನಡೆಯಿತು.



ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ಮಾತನಾಡಿ ಸುಮಾರು 6 ದಶಕಗಳ ಸುದೀರ್ಘ ಕಾಲ ಕಾರ್ಮಿಕ ಚಳುವಳಿ, ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಶ್ರಮಿಸಿದ ಕಾಂ: ಸೂರಿಯವರು ಅಪ್ರತಿಮ ಹೋರಾಟಗಾರರಾಗಿದ್ದರು. ಹೋರಾಟದ ತಂತ್ರಗಳನ್ನು ರೂಪಿಸುವುದರಲ್ಲಿ ಕಾರ್ಮಿಕರ, ಜನರ ಹೃದಯವನ್ನು ಅರಿತುಕೊಂಡು ಅವರ ಆತಂಕಗಳಿಗೆ ಮಿಡಿಯುವುದರಲ್ಲಿ, ಸೂರಿಯವರಿಗೆ ಸೂರಿಯವರೇ ಸಾಟಿ ಎಂದರು.

ನಿತ್ಯಾನಂದಸ್ವಾಮಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಮಾತನಾಡಿ, ಕಾಂ: ಸೂರಿಯವರು ಒಬ್ಬ ತೃಪ್ತಿ ಇಲ್ಲದ ಹೋರಾಟಗಾರರಾಗಿದ್ದರು. ಕಮ್ಯುನಿಸ್ಟ್‌ರಿಗೆ ಅಲ್ಪತೃಪ್ತಿ ಸಲ್ಲದು ಎಂದರು ಇಂತಹ ಅತೃಪ್ತಿಯಿಂದಾಗಿ ಸೂರಿಯವರು ಎಲ್ಲರನ್ನೂ ಬೈಯ್ಯುತ್ತಿದ್ದರು. ಎಲ್ಲರೂ ಅವರಿಗೆ ತಮ್ಮನ್ನು ಬಯ್ಯುವ ಹಕ್ಕನ್ನೂ ಕೊಟ್ಟುಬಿಟ್ಟಿದ್ದರು ಎಂದರು.

ಜನಶಕ್ತಿ ಪತ್ರಿಕೆ ಸಂಪಾದಕರಾದ ಎಸ್.ವೈ.ಗುರುಶಾಂತ್ ಮಾತನಾಡಿ ಸೂರಿಯವರದ್ದು ರಾಜ್ಯದ ಚಳುವಳಿಯಲ್ಲಿ ದೊಡ್ಡದಾದ ಹೆಸರು ಮತ್ತು ಶಕ್ತಿ, ಈ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಚಳುವಳಿಗೆ ಒಂದು ದಾರಿ ಇದೆ. ಆ ದಿನಗಳಲ್ಲಿ ದಾರಿ ಇರಲಿಲ್ಲ, ಹೋರಾಟಗಾರರು ಸ್ವತಃ ದಾರಿಯನ್ನೂ ಮಾಡಿಕೊಂಡು ಮುಂದೆ ಹೋಗಬೇಕಾಗಿತ್ತು. ಅಂತಹ ಕಠಿಣ ಸನ್ನಿವೇಶವನ್ನು ಎದುರಿಸಿ ಪಕ್ಷವನ್ನು, ಕಾರ್ಮಿಕ ಚಳುವಳಿಯನ್ನು ಬೆಳೆಸಿದವರು ಕಾಂ: ಸೂರಿ ಎಂದರು.

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್ ಮಾತನಾಡಿ ಆಗಸ್ಟ್ 24 ರಂದು ಕಾಂ: ಸೂರಿಯವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಮಾಡುವ ಯೋಜನೆ ಇರುವುದಾಗಿ ತಿಳಿಸಿದರು. ಕಾಂ: ಜಿ.ಸಿ.ಬಯ್ಯಾರೆಡ್ಡಿ ಮುಂತಾದವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಂಪಾದಕೀಯ

ಕಲಿಕಾ ಮಾಧ್ಯಮ : ಹಿತಕಾಯದ ತೀರ್ಪು

ಪ್ರಾಥಮಿಕ ಶಿಕ್ಷಣದ ಕಲಿಕೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿಯೇ ನಡೆಯಬೇಕೆಂಬ ಕರ್ನಾಟಕ ಸರ್ಕಾರದ ಭಾಷಾ ಮಾಧ್ಯಮ ಕುರಿತ 1994 ರ ಆಜ್ಞೆಗೆ ಸಂಬಂಧಿಸಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪು ಹಾನಿಕಾರಕ ಪರಿಣಾಮ ಬೀರುವಂತಹದ್ದಾಗಿದೆ.

ಇದು ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಆಶಯ ಹಾಗೂ ಜನ ಭಾಷೆ, ಸಂಸ್ಕೃತಿಯ ಬೆಳವಣಿಗೆಗೆ ಏಟು ಕೊಡಲಿದೆ.

ಪ್ರಾದೇಶಿಕ ವೈವಿಧ್ಯತೆಯನ್ನೇ ಅಳಿಸಿಹಾಕಿ, ಏಕಸ್ವಾಮ್ಯ ಸ್ಥಾಪಿಸಬಯಸುವ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪ್ರಭಾವವನ್ನು ಕಾಣಬಹುದಾಗಿದೆ.

ಮಾತೃಭಾಷೆಯಲ್ಲಿ ಶಿಕ್ಷಣ ನೀಡಿಕೆಯೇ ಅತ್ಯಂತ ವೈಜ್ಞಾನಿಕ, ಮಗುವಿನ ಗ್ರಹಿಕೆಗೆ ಒಟ್ಟು ಬೆಳವಣಿಗೆಗೆ ಸಾಧಕ ಎಂಬುದು ಜಗತ್ತಿನ ಎಲ್ಲೆಡೆಯಲ್ಲಿಯೂ ಪ್ರತಿಪಾದಿಸಲಾಗುತ್ತಿದೆ.ಹಾಗೆಯೇ ಭಾರತದ ಸಂವಿಧಾನದಲ್ಲಿಯೂ ಇದನ್ನು ಪ್ರತಿಪಾದಿಸಲಾಗಿದೆ. ಕರ್ನಾಟಕ ಸರ್ಕಾರವೂ 1994ರಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡುವ ನೀತಿಯನ್ನು ಅಂಗೀಕರಿಸಿತಲ್ಲದೆ, ತದನಂತರ ಕಾಲಾನುಕ್ರಮದಲ್ಲಿ ಇದನ್ನು ಉಲ್ಲಂಘಿಸುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಜರುಗಿಸುವ, ಪರವಾನಗಿ ರದ್ದುಪಡಿಸುವ ಆದೇಶವನ್ನು ಹೊರಡಿಸಿತ್ತು. ಕನ್ನಡ ಮಾಧ್ಯಮದಲ್ಲಿ ಶಾಲೆ ತೆರೆಯುವುದಾಗಿ ಪರವಾನಗಿ ಪಡೆದ ಶಾಲೆಗಳು ಆಂಗ್ಲ ಮಾಧ್ಯಮದಲ್ಲಿ ಭೋದಿಸುತ್ತಿರುವುದನ್ನು ಗಮನಿಸಿ (ಹಲವಾರು ವರುಷ ಕಣ್ಣು ಮುಚ್ಚು ಕುಳಿತು) ಸುಮಾರು 2500 ಶಾಲೆಗಳ ಪರವಾನಗಿ ರದ್ದುಪಡಿಸುವ ನಿರ್ಧಾರವನ್ನು ಕಳೆದ ವರ್ಷ ಪ್ರಕಟಿಸಿದ್ದನ್ನು ಪ್ರಶ್ನಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹೈಕೋರ್ಟ್‌ಗೆ ಹೋಗಿದ್ದವು.

ಆ ಮನವಿಯ ಕುರಿತು ತೀರ್ಪು ನೀಡಿರುವ ನ್ಯಾಯಾಲಯವು ಭಾಷಾ ನೀತಿಯ ಜಾರಿ ವ್ಯಾಪ್ತಿಯಿಂದ ಖಾಸಗಿ ಅನುದಾನರಹಿತ ಶಾಲೆಗಳನ್ನು ಹೊರಗಿಟ್ಟು ಭಾಷಾ ನೀತಿಯ ಬದ್ಧತೆಯಿಂದ ಮುಕ್ತಗೊಳಿಸಿದೆ. ಆ ನೀತಿ ಅದೇನಿದ್ದರೂ ಕೇವಲ ಸರ್ಕಾರದ ಅಥವಾ ಅನುದಾನ ಪಡೆದ ಶಾಲೆಗಳಿಗೆ ಮಾತ್ರ ಅನ್ವಯವೆಂದು ಹೇಳಿದೆ. ಕೇವಲ ಸರ್ಕಾರದ ಅನುದಾನ ಪಡೆಯುತ್ತಿಲ್ಲವೆಂಬ ಹೆಸರಿನಲ್ಲಿ ಈ ಸಂಸ್ಥೆಗಳನ್ನು ಒಟ್ಟು ಶಿಕ್ಷಣದ ನೀತಿಯಿಂದಲೇ ಹೊರಗಿಟ್ಟಿರುವುದು, ಆ ಸಂಸ್ಥೆಗಳು ಮನಸೋ ಇಚ್ಛೆಯಂತೆ ವರ್ತಿಸಲು ಮುಕ್ತ ಅವಕಾಶ ಕಲ್ಪಿಸಿದಂತಾಗಿದೆ. ಇಂತಹ ಸಂಸ್ಥೆಗಳೂ ಕೂಡಸರ್ಕಾರದಿಂದ ಭೂಮಿ ಮುಂತಾದ ಹಲವು ರಿಯಾಯಿತಿ ಸೌಲಭ್ಯಗಳು ಪಡೆದಿವೆ. ಹೀಗೆ ಸಾಮಾಜಿಕ ಪಾಲ್ಗೊಳ್ಳುವಿಕೆಯ ಮರೆಮಾಚಲಾಗದು.

'ಇಂಗ್ಲೀಷ್ ಕಲಿತರೆ ಉದ್ಯೋಗ ಸಿಗುವುದು ಸುಲಭ' ಎಂಬಂತಹ ಜಾಗತೀಕರಣದ ಭ್ರಮೆಯನ್ನೇ ಬಳಸಿ ನಾಯಿಕೊಡೆಗಳಂತೆ ಎಲ್ಲೆಂದರಲ್ಲಿ ತಲೆ ಎತ್ತುತ್ತಿರುವ ಶಾಲೆಗಳ ಎದುರಿನಲ್ಲಿ ಈಗಾಗಲೇ ಸರ್ಕಾರಿ ಶಾಲೆಗಳು ಸೊರಗುತ್ತಿವೆ. ಅವುಗಳನ್ನು ಸರ್ಕಾರವೇ ಸೊರಗಿಸುತ್ತಿವೆ. ಶಿಕ್ಷಣ ರಂಗಕ್ಕೆ ಹೆಚ್ಚಿನ ಹಣ ನೀಡಿಕೆ ಇಲ್ಲದೆ, ಶಿಕ್ಷಣ ರಂಗದಿಂದಲೇ ಸರ್ಕಾರದ ಹೂಡಿಕೆಯನ್ನು ಹಿಂತೆಗೆಯುತ್ತಾ ಹೊಣೆಗಾರಿಕೆಯಿಂದ ಕೊಡವಿಕೊಳ್ಳುತ್ತಿರುವುದರಿಂದ ಈಗಾಗಲೇ ಸಾವಿರಾರು ಸರ್ಕಾರಿ ಶಾಲೆಗಳು ಮುಚ್ಚಿಹೋಗುತ್ತಿವೆ.ಸಾರ್ವತ್ರಿಕ ಶಿಕ್ಷಣಕ್ಕೆ ತಿಲಾಂಜಲಿ ನೀಡಿ ಇನ್ನಷ್ಟು ಮುಚ್ಚಲು ಸಿದ್ಧತೆ ನಡೆದಿದೆ. ಈಗಿರುವ ಸರ್ಕಾರಿ ಶಾಲೆಗಳನ್ನೇ ಖಾಸಗಿ ಟ್ರಸ್ಟ್, ಮಠಗಳಂತಹ ಖಾಸಗಿಯವರತ್ತ ತಳ್ಳುತ್ತಿದೆ. ಕೊಡಲಾಗುತ್ತಿದೆ. ಅಂದರೆ ಮಾತೃಭಾಷೆ ಅಥವಾ ಕನ್ನಡ ಭಾಷೆಯ ಕಲಿಕೆಯೇ ಕುಗ್ಗುತ್ತಾ ಸಾಗಿರುವಾಗ ಭಾಷೆಯ ಉಳಿವಾದರೂ ಹೇಗೆ ಎಂದು ಯೋಚಿಸಬೇಕಿದೆ. ಈಗಾಗಲೇ ಜಾಗತೀಕರಣವು ಪ್ರಾದೇಶಿಕ ಭಾಷೆ, ಸಂಸ್ಕೃತಿಯ ಮೇಲೆ ಮಾರಕ ಪರಿಣಾಮವನ್ನು ಉಂಟುಮಾಡುತ್ತಿರುವ ಈ ಅಂಶವನ್ನು ನ್ಯಾಯಾಲಯವು ತೀರ್ಪು ನೀಡುವಾಗ ಗಮನಿಸಬೇಕಿತ್ತು.


ಭಾಷೆಯೆಂಬುದು ಕೇವಲ ಮಾತಲ್ಲ. ಅದು ಒಂದು ಸಂಸ್ಕೃತಿ, ಜನರ ನಾಗರೀಕತೆಯ, ಬದುಕೇ ಆಗಿದೆ. ಆದ್ದರಿಂದಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಬ್ರಿಟೀಷರ ಆಡಳಿತದೆದುರು ಪ್ರಾದೇಶಿಕ ಭಾಷೆಗಳ ಹಾಗೂ ಆ ಅಸ್ತಿತ್ವದ ಉಳಿವಿಗಾಗಿ ಪ್ರಬಲ ಚಳುವಳಿಗಳು ಬೆಳೆದುಬಂದವು. ಸ್ವಾತಂತ್ರ್ಯ ನಂತರದಲ್ಲಿಯೂ ಅದು ಅಲ್ಲಿಗೆ ನಿಲ್ಲದೇ ಭಾಷಾವಾರು ಪ್ರಾಂತ್ಯಗಳ ರಚನೆಯಾಗಲೇಬೇಕೆಂದು ತ್ಯಾಗ, ಬಲಿದಾನದ ಪ್ರಬಲ ಪ್ರಜಾಸತ್ತಾತ್ಮಕ ಹೋರಾಟಗಳು ಮುಂದುವರಿದವು. ಪರಿಣಾಮವಾಗಿ ಭಾರತಸರ್ಕಾರವೂ ಮಣಿಯಬೇಕಾಯಿತು. ಪರಿಣಾಮವಾಗಿಯೇ ಭಾಷಾವಾರು ಪ್ರಾಂತ್ಯಗಳ ರಚನೆಯಾದದ್ದಲ್ಲದೇ ಆಡಳಿತವೂ ಆ ಭಾಷೆಯಲ್ಲೇ. ಶಿಕ್ಷಣವೂ ಆ ಭಾಷೆಗಳಲ್ಲೇ ಕಲಿಯಲು ಅವಕಾಶ ಖಚಿತಗೊಳಿಸಲಾಯಿತು.

'ಭಾಷೆ, ಸಂಸ್ಕೃತಿಯನ್ನು ಜೀವಂತವಾಗಿಡುವಲ್ಲಿ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವಲ್ಲಿ ಶಿಕ್ಷಣಕ್ಕೆ ಅತೀ ಮಹತ್ವದ ಸ್ಥಾನವಿರುವುದು ಯಾರೂ ಅಲ್ಲಗಳೆಯದ ಸಂಗತಿಯಾಗಿದೆ. ಇಂತಹ ಸ್ಥಿತಿಯಲ್ಲಿ ಹೈಕೋರ್ಟ್‌ನ ತೀರ್ಪು' ಅದರ ಈಗಿನ ಚಿಂತನಾ ಕ್ರಮ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಉದ್ದೇಶವನ್ನೇ ಬುಡಮೇಲಾಗಿ ನಿಲ್ಲಿಸುತ್ತದೆ.

ದೇಶದ ಆಳುವವರು ಅನುಸರಿಸುತ್ತಿರುವ ಆರ್ಥಿಕ, ಸಾಮಾಜಿಕ ರಾಜಕೀಯ ನೀತಿಗಳಿಂದಾಗಿ

ಪುಟ 12 ಕ್ಕೆ

ಪಕ್ಷಗಳನ್ನೊಡೆಯುವ ಅನೈತಿಕ ಹಾದಿ



ಬೇರೆ ಪಕ್ಷಗಳನ್ನೊಡೆದು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದಾಗಿ ಹೇಳುತ್ತಿರುವ ಬಜೆಪಿ ನಾಯಕರದ್ದು ಅನೈತಿಕ 'ವ್ಯವಹಾರ'. ಇದಕ್ಕಾಗಿ ಅವರಿಗೆ ನಾಚಿಕೆ ಎಂಬುದು ಇದೆಯೇ?

ರಾಜಕಾರಣದಲ್ಲಿ ನೀತಿ ನಿಯತ್ತುಗಳಿಗೆ ಅವಕಾಶವಿಲ್ಲವೆಂದೂ, ಅದರ ಅಗತ್ಯವೂ ಇಲ್ಲವೆಂದು ಕೆಲವರು ತೀರ್ಮಾನಿಸಿದಂತಿದೆ. ಅಧಿಕಾರಕ್ಕೇರಲು, ಅಧಿಕಾರ ಉಳಿಸಿಕೊಳ್ಳಲು ಯಾರೊಂದಿಗೂ ಯಾವ ಮಟ್ಟದಲ್ಲಿಯೂ ಹೊಂದಾಣಿಕೆ ಮಾಡಿಕೊಳ್ಳಬಹುದೆಂಬುದೇ ಅವರ ಚಾಲ್ತಿ ನೀತಿ.

ಭಂಡತನ

ಅದಕ್ಕಾಗಿ ಏನು ಮಾಡಿದರೂ ಸರಿಯೇ ಎಂದು ಕೇವಲ ಭಾವಿಸಿರುವವುದಲ್ಲ ಅದನ್ನು ಸಾರ್ವಜನಿಕವಾಗಿ ಹಲವು ಹತ್ತು ಸಲ ಹೇಳಿ ಸಮರ್ಥಿಸಿಕೊಳ್ಳುವ ಭಂಡತನಕ್ಕೂ ಇಳಿದಿದ್ದಾರೆ.

ಕಾಂಗ್ರೆಸ್, ಜೆಡಿ(ಎಸ್)ನಂತಹ ಪಕ್ಷಗಳ ಕತೆ ವ್ಯಥೆ ಒಂದು ರೀತಿಯಾದರೆ ತಾನು ಎಲ್ಲರಿಗಿಂತ ಭಿನ್ನ ಪಕ್ಷವೆಂದೇ ಹೇಳಿಕೊಳ್ಳುವ ಬಿಜೆಪಿ ಪಕ್ಷದ ಗತಿ ಏನು? ದೇಶಮಟ್ಟದಲ್ಲಿ ಈಗಾಗಲೇ ಅದು ತನ್ನನ್ನು ತಾನು ಬಯಲುಗೊಳಿಸಿಕೊಂಡಿದೆ. ಎರಡೆಳೆಯ ನಾಲಿಗೆಯೂ ಹೊರಚಾಚಿದೆ. ಅದರಂತೆ ನೀತಿ ನೈತಿಕತೆಗೆ 'ಅನುಕೂಲ ಸಿಂಧು'ವಿನ ಮೌಲ್ಯವನ್ನು ತಂದುಕೊಟ್ಟಿದೆ. ಸಂಭಾವಿತ, ಸನ್ನಡತೆಯ ಪರಿಶುದ್ಧ ಆತ್ಮ ಹೊಂದಿರುವರೆನ್ನಲಾದ ವಾಜಪೇಯಿ ಆಡಳಿತದಲ್ಲಿ ಹೊರಬಂದ ಹಗರಣಗಳೆಷ್ಟು? ಸಂವಿಧಾನದ ಉಲ್ಲಂಘನೆ ಎಷ್ಟು? ಕಾರ್ಗಿಲ್ ಯುದ್ಧದ ಯೋಧರ ಶವ ಪೆಟ್ಟಿಗೆಯಲ್ಲಿ ಲಂಚ ತಿಂದದ್ದು ಅವರಿಗೆ ತಪ್ಪೆನಿಸಲಿಲ್ಲ. ಭಾರತವನ್ನು ಅಮೇರಿಕಾಕ್ಕೆ ಒತ್ತೆ ಇಟ್ಟದ್ದು ದೇಶವಿರೋಧಿ ಅನ್ನಿಸಲಿಲ್ಲ. ಭಾರತದ ಸಂವಿಧಾನದ ಆಶಯಗಳು, ಅಡಿಪಾಯ ನೀತಿಗಳನ್ನು ಧ್ವಂಸಗೊಳಿಸುವುದು ದೇಶದ್ರೋಹವೆನಿಸಲಿಲ್ಲ. ಹೋಗಲಿ ಗುಜರಾತ್‌ನ ಸಂಸದನೊಬ್ಬ ಪರರ ಪತ್ನಿಯನ್ನು ತನ್ನ ಪತ್ನಿಯೆಂದು ವಿದೇಶಕ್ಕೆ ಕಳ್ಳಸಾಗಾಣಿಕೆ ಮಾಡಿದ್ದು ಮಾನ ಕಡಿಮೆಯೆಂದೆನ್ನಿಸಲಿಲ್ಲ......

ಬಹುಮತವೇ ಇಲ್ಲದೇ ಸರ್ಕಾರ ಇನ್ನೇನು ಪತನಗೊಳ್ಳಲಿದೆ ಎಂಬುದು ಖಾತ್ರಿಯಾದಾಗಲೇ, ಆ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆ ಸಾಗಿರುವಾಗಲೇ 'ಎನ್ರಾನ್' ಕಂಪನಿಯ ಶರತ್ತುಗಳನ್ನು ಒಪ್ಪಿ ಒಪ್ಪಂದವೇರ್ಪಡಿಸಿಕೊಂಡದ್ದು, ಹಲವು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅಮೂಲ್ಯ ಕಲ್ಲಿದ್ದಲು, ಚಿನ್ನದ ಗಣಿಗಳನ್ನು ಪರಬಾರೆ ಮಾಡಿದ ಒಪ್ಪಂದಗಳಿಗೆ ವಾಜಪೇಯಿ ಸಹಿ ಹಾಕಿ ಪಾರ್ಲಿಮೆಂಟ್‌ಗೆ ವಾಪಸಾದದ್ದು ಅನೈತಿಕ, ಅನ್ಯಾಯಕಾರಿ ಅನ್ನಿಸಲಿಲ್ಲ...... ಅಂದರೆ ಆಡುವುದಕ್ಕೂ ಮಾಡುವುದಕ್ಕೂ ಸಂಬಂಧ ಬದ್ಧತೆ ಇರಬಾರದು ಎಂಬುದೇ ಅವರ ನೀತಿ.

ಬೇರೆ ಪಕ್ಷಗಳನ್ನು ಒಡೆದು ಅವರನ್ನು ಬಿಜೆಪಿಗೆ 'ಸೇರಿಸಿಕೊಳ್ಳುವುದಾಗಿ' ಹಿರಿಯ ಸಚಿವ ಕೆ.ಎಸ್.ಈಶ್ವರಪ್ಪ ಹೋದಲ್ಲೆಲ್ಲಾ ಹೇಳುತ್ತಿದ್ದಾರೆ. ಅವರು ರಾಜಕೀಯ ಸನ್ಯಾಸಿ (ಸಂತ) ಅಲ್ಲವಂತೆ. ಅಧಿಕಾರ ಉಳಿಸಿಕೊಳ್ಳಲು ಏನೇನು ಬೇಕೋ ಅದನ್ನೆಲ್ಲಾ ಮಾಡುವರಂತೆ. ಹಾಗೆ ಮಾಡುವುದು ತಪ್ಪಲ್ಲವಂತೆ! ಇಂತಹ ಅನೈತಿಕ, ಸಂದರ್ಭಸಾಧಕ ಮಾತುಗಳನ್ನು ಆಡುತ್ತಲೇ ಇರುವಾಗಲೂ ಬಿಜೆಪಿಯ ಯಾವೊಬ್ಬ ನಾಯಕನೂ ಅದಕ್ಕೆ ಆಕ್ಷೇಪ ವ್ಯಕ್ತಪಡಿಸದಿರುವುದು ಬಂದ ವಿರೋಧಕ್ಕೆ ಸ್ಪಷ್ಟನೆ ನೀಡದಿರುವುದು ನೋಡಿದರೆ ಅದು ಬಿಜೆಪಿಯ ಮುಂದಿನ ಕಾರ್ಯಯೋಜನೆ ಎಂದೇ ಪರಿಗಣಿಸಬೇಕಾಗುತ್ತದೆ. ಇತ್ತೀಚೆಗೆ ಸಂವಿಧಾನೇತರ ಶಕ್ತಿಯಾಗಿರುವ ಆರ್.ಎಸ್.ಎಸ್ ಕಛೇರಿಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ಬೈಠಕ್ (ಮಾಂತ್ರಾಲೋಚನೆ!) ನಡೆಸಿದಾಗ ಅಲ್ಲಿ ಮೂಡಿದ ಅಭಿಪ್ರಾಯವೇ ಇದು?

ಅಭದ್ರತೆಯೇ ಕಿತ್ತಾಟವೇ?

ಇಲ್ಲಿ ಮುಖ್ಯವಾಗುವುದು ಬಿಜೆಪಿಗೆ ಪೂರ್ಣ ಬಹುಮತದ ಜನಾದೇಶವನ್ನು ಮತದಾರರು ನೀಡಿಲ್ಲ. ನೀಡಲೂ ಸಿದ್ಧರಿಲ್ಲ. ಆದ್ದರಿಂದ ಪಕ್ಷೇತರರ ಅವಕಾಶವಾದಿ ಬೆಂಬಲದಿಂದ ನಡೆಯುತ್ತಿರುವ ಸರ್ಕಾರ ಇದಾಗಿದೆ. ಇದನ್ನು ಒಪ್ಪಿಕೊಳ್ಳಲು ಬಿಜೆಪಿ ಸಿದ್ಧವಿಲ್ಲ. ಪ್ರಸಕ್ತವಾಗಿ ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳು ವಿರೋಧ ಪಕ್ಷಗಳಾಗಿ ಕೆಲಸ ನಿರ್ವಹಿಸುತ್ತಿವೆ. ಇನ್ನು ಬೆಂಬಲದ ಪ್ರಶ್ನೆಯೇ ಇಲ್ಲ. ಅಂದರೆ ಈಗಿನ ಸ್ಥಿತಿಯಲ್ಲಿಯೇ ಬಿಜೆಪಿ ಮುಂದುವರಿಯಬೇಕು. ಆದರೆ ಅದಕ್ಕೆ ಸಿದ್ಧವಿಲ್ಲ.

ಈಶ್ವರಪ್ಪನವರು ಪದೇ ಪದೇ ನೀಡುವ ಹೇಳಿಕೆಗಳು ಬಿಜೆಪಿಯೊಳಗೆ ಅಸ್ಥಿರತೆಯ ಸೂಚನೆಯೇ ಎಂದೂ ಯೋಚಿಸಬೇಕಾಗುತ್ತದೆ. ಯಡಿಯೂರಪ್ಪ, ಅನಂತಕುಮಾರ ಬಣಗಳ ನಡುವಿನ ಮುಸುಕಿನೊಳಗೆ ಹಾಗೂ ಹೊರಗಿನ ಕಚ್ಚಾಟ ಜಗಜ್ಜಾಹೀರಾದ ಸಂಗತಿಯಾಗಿದೆ. ಯಡಿಯೂರಪ್ಪನವರ ಕ್ರಮಗಳು (ತಮ್ಮ ಸ್ಥಾನ ಗಟ್ಟಿಗೊಳಿಸಿಕೊಳ್ಳುವ) ಅವರದ್ದೇ ನಿರ್ಧಾರಗಳು ಅನಂತಕುಮಾರ್ ಗುಂಪು ಮಾತ್ರವಲ್ಲ ಬಿಜೆಪಿಯೊಳಗೆ, ಸಚಿವರು, ಶಾಸಕರೊಳಗೆ ಅತೃಪ್ತಿಯನ್ನು ಹುಟ್ಟಿಸಿವೆ. ಇದೊಂದೆಡೆಯಾದರೆ ಈ ಸರ್ಕಾರಕ್ಕೆ ಬೆಂಬಲಿಸಿರುವ ಪಕ್ಷೇತರರು ಮುನಿಸಿಕೊಂಡಿದ್ದಾರೆಯೇ? ಇಂತಹ ಪ್ರಸಂಗದಲ್ಲಿ ಆತಂಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ವಿಧಾನ ಅನುಸರಿಸುವುದು ಬಿಟ್ಟು ಅನೈತಿಕ ಹಾದಿಯನ್ನೇ ಆರಿಸಿಕೊಳ್ಳಲಾಗುತ್ತಿದೆ.

ಬೇರೆ ಪಕ್ಷಗಳನ್ನು ಒಡೆಯುವ ಮಾತಿಗೆ ಚಾಲನೆ ಸಿಕ್ಕಿರುವುದು ಕಾಂಗ್ರೆಸ್ ಜೆಡಿ(ಎಸ್) ಪಕ್ಷಗಳಿಂದ ಕೆಲವು ಶಾಸಕರನ್ನು ಅಪಹರಿಸುವ

ಪುಟ 12 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಪರಮಾಣು ಒಪ್ಪಂದ ಅಗತ್ಯವೇ?

ಭಾರತ-ಅಮೇರಿಕಾ ಅಣು ಒಪ್ಪಂದದ ಬಗೆಗೆ ಎರಡು ಅಭಿಪ್ರಾಯಗಳ ಆಯ್ದ ಭಾಗಗಳು ಇಲ್ಲಿವೆ. ಒಂದು ಅಣು ವಿಜ್ಞಾನಿ ಡಾ: ಎಂ.ಆರ್.ಶ್ರೀನಿವಾಸನ್ ಅವರದ್ದು. ಮತ್ತೊಂದು ವಿಜ್ಞಾನ ಲೇಖಕ ನಾಗೇಶ ಹೆಗಡೆಯವರದ್ದು. ಶ್ರೀನಿವಾಸನ್ ಅಣು ಒಪ್ಪಂದ ಪರ ಇದ್ದಾರೆ. ಆದರೆ ಅವರದೇ ಹೇಳಿಕೆಗಳಲ್ಲಿ ಅಮೇರಿಕಾದ ಬಗೆಗೆ ಒಪ್ಪಂದ 'ಭಾಷೆ'ಯ ಬಗೆಗೆ ಏನಿದೆ ಅಂತ ಗಮನಿಸಿದರೆ, ಅಮೇರಿಕಾದೊಂದಿಗಿನ ಅಣು ಒಪ್ಪಂದದಲ್ಲಿ ಒಪ್ಪಲಾಗದು ಅಪಾಯಕಾರಿಯಾದದ್ದು. ಏನೇನೋ ಇದೆ ಎಂಬ ಭಾವನೆ ಬರದೇ ಇರದು. ಇಲ್ಲಿನ ಕೆಳಗೆ ಒತ್ತು ನೀಡಲಾಗಿರುವ ವಾಕ್ಯಗಳನ್ನು ನೋಡಿ. ನಾಗೇಶಹೆಗಡೆಯವರ ಬರಹವನ್ನೂ ನೋಡಿ.

ಒಪ್ಪಂದ ಅನಿವಾರ್ಯ

- ಡಾ.ಎಂ.ಆರ್.ಶ್ರೀನಿವಾಸನ್

ಖಂಡಿತಾ ಅಗತ್ಯವಿದೆ. (ವಿದ್ಯುತ್ ಕೊರತೆ) ಈ ಸಮಸ್ಯೆಗೆ ಪರಮಾಣು ವಿದ್ಯುತ್ ಸ್ಥಾವರಗಳೇ ಪರಿಹಾರ. ಈ ಸ್ಥಾವರಗಳು ಸುಸೂತ್ರವಾಗಿ ನಡೆಯಬೇಕೆಂದರೆ ಪರಮಾಣು ಒಪ್ಪಂದ ದೇಶಕ್ಕೆ ಅಗತ್ಯ.

ಎಡಪಕ್ಷಗಳು ಸೈದ್ಧಾಂತಿಕವಾಗಿ ಯೋಚಿಸುತ್ತವೆ. ಈ ಒಪ್ಪಂದದಿಂದ ಭಾರತ ಅಮೇರಿಕದ ಅಡಿಯಾಳಾಗಿಬಿಡುತ್ತದೆಂಬ ಭಯ ಹುಟ್ಟಿಸುತ್ತಿವೆ. ಒಂದು ಕಾಲದಲ್ಲಿ ಅಮೇರಿಕ ಹಾಗಿತ್ತು ರೀ.... ಈಗ ಅದು ಬದಲಾಗಿದೆ. ಭಾರತ ಕೂಡ ಬಲಿಷ್ಠ ರಾಷ್ಟ್ರವಾಗುತ್ತಿದೆ.

ಭಾರತ, ಅಮೇರಿಕ ಈ ಒಪ್ಪಂದವನ್ನು ಅನುಷ್ಠಾನಕ್ಕೆ ತಂದರೆ ನಮಗೆ ಗಟ್ಟಿ ಭೂಮಿಕೆ ದೊರೆತಂತೆಯೇ. ಆ ನಂತರ ರಷ್ಯಾ ಮತ್ತು ಫ್ರಾನ್ಸ್‌ಗಳ ಸಹಕಾರವನ್ನೂ ಕೋರಬಹುದು. ಏಕೆಂದರೆ ಅಮೇರಿಕ ಒಡ್ಡುವಷ್ಟು ಷರತ್ತುಗಳನ್ನು ಆ ದೇಶಗಳು ಒಡ್ಡುವುದಿಲ್ಲ.

'123 ಹೈಡ್ ಕಾಯ್ದೆ'ಯಲ್ಲಿ ಅಂಥದ್ದೇನಿದೆ? ಏಕೆ ಆ ಕಾಯ್ದೆ ಬಗ್ಗೆ ಎಡಪಕ್ಷಗಳಿಗೆ ಭಯ?

ಆ ಕಾಯ್ದೆ ಬಗ್ಗೆ ಒಂದೆರಡು ನಿಮಿಷದಲ್ಲಿ ವಿವರಿಸುವುದು ಕಷ್ಟ. ಈ ಬಗ್ಗೆ ನಾನು ಸಾಕಷ್ಟು ಲೇಖನ ಬರೆದಿದ್ದೇನೆ..... ಈ ಕಾಯ್ದೆಯಲ್ಲಿ ತಲೆಹೋಗುವಂಥದ್ದು ಏನೂ ಇಲ್ಲ. ಜೊತೆಗೆ ಹೈಡ್ ಕಾಯ್ದೆಯಲ್ಲಿರುವ ಎಲ್ಲ ವಿಚಾರಗಳು (ಬಳಸಿರುವ ಲಾಂಗ್ವೇಜ್) ನನಗೂ 'ಸಹ್ಯ'ವೆನಿಸಿಲ್ಲ. ಹಾಗಂತ ಅದರಲ್ಲಿ ಅಲ್ಲಗೆಳೆಯುವಂತಹ, ಭಾರತಕ್ಕೆ ಮಾರಕವಾಗುವಂತಹ ಅಂಶಗಳೂ ಇಲ್ಲ. ○

ಸ್ಪರ್ಶಮಣಿ ಚುಂಬನವೇ? ದೃತರಾಷ್ಟ್ರನ ಆಲಿಂಗನವೇ?

- ನಾಗೇಶ ಹೆಗಡೆ

....ಜರ್ಮನಿ, ಫ್ರಾನ್ಸ್, ಬ್ರಿಟನ್, ರಷ್ಯಾ ಮತ್ತು ಜಪಾನ್ ದೇಶಗಳಲ್ಲಿ ಸ್ಥಾವರಗಳಿವೆ. ಅವುಗಳಿಗೆಂದು ಯಂತ್ರೋಪಕರಣಗಳನ್ನು ನಿರ್ಮಿಸುವ ಅಲ್ಲಿನ ಖಾಸಗಿ ಗುತ್ತಿಗೆದಾರರಿಗೆ ಭಾರತವೇ ಅತಿ ದೊಡ್ಡ ಮಾರುಕಟ್ಟೆಯಾಗಿ ಕಾಣುತ್ತಿದೆ.

ಸರಿ, 'ನೆರವು' ನೀಡಲು ಅಮೇರಿಕ ಮುಂದಾಯಿತು. ನೆರವು ಯಾರಿಗೆ? ಅದು ವಿವಾದದ ಪ್ರಶ್ನೆ. ಭಾರತ ಸರಕಾರದ ಪ್ರಕಾರ, ನಮ್ಮ ದೇಶಕ್ಕೆ ನೆರವು ಸಿಗುತ್ತದೆ. ಇಂಧನ ಸಿಗುತ್ತದೆ, ಅತ್ಯಾಧುನಿಕ ಅಣು ತಂತ್ರಜ್ಞಾನ ನಮಗೆ ಸಿಗುತ್ತದೆ. ಇನ್ನು, ವಿದೇಶಿ ಗುತ್ತಿಗೆದಾರರ ದೃಷ್ಟಿಯಲ್ಲಿ 'ನೆರವು' ಅವರಿಗೇ ಸಿಗುತ್ತದೆ; ಹೊಸ ಮಾರುಕಟ್ಟೆ ತೆರೆದುಕೊಳ್ಳುತ್ತದೆ. ಅಮೇರಿಕದ ದೃಷ್ಟಿಯಲ್ಲಿ ಇಂಡಿಯಾ ದೇಶ ಈ ಪರಮಾಣು ಕನಸಿನಲ್ಲಿ ಮುಳುಗಿರುವಷ್ಟು ದಿನ ಪರರಾಷ್ಟ್ರಗಳ ಪೆಟ್ರೋಲಿಯಂ ಅನಿಲ ನಿಕ್ಷೇಪಗಳಿಗೆ ಕೈ ಹಾಕುವುದಿಲ್ಲ. (ಇರಾನ್ ಜತೆ ಅಂಥ ಸಂಪತ್ತಿನ ಪಾಲು ಪಡೆಯಲು ಹೊರಟಿದ್ದ ಮಣಿಶಂಕರ್ ಅಯ್ಯರ್ ಅವರನ್ನು ಪೆಟ್ರೋಲಿಯಂ ಸಚಿವ ಸ್ಥಾನದಿಂದ ಕಿತ್ತಿಳಿಸಲು ಅಮೇರಿಕದ ಒತ್ತಡವೇ ಕಾರಣ ತಾನೆ?) ಇನ್ನು ನೆರವಿನ ಹೆಸರಿನಲ್ಲಿ ಅಮೇರಿಕದ ಎಂಜಿನಿಯರ್‌ಗಳು ತಮ್ಮ ನೆಲದಲ್ಲಿ ಸಾಧ್ಯವಿಲ್ಲದ ಏನೇ ಪ್ರಯೋಗಗಳನ್ನು ನಮ್ಮಲ್ಲಿ ನಡೆಸಬಹುದು. ಭಾರೀ ಅಪಾಯಕಾರಿ ಎಂದೆನಿಸಿದ(!) ಪರಮಾಣು ಭಸ್ಮದ 'ಮರುಸಂಸ್ಕರಣಾ' ತಂತ್ರವನ್ನು ಇಲ್ಲಿ ನೆಲೆಗೊಳಿಸಬಹುದು. ಅಥವಾ ಮರುಸಂಸ್ಕರಣೆಯ ನಮ್ಮ ಯತ್ನಗಳಿಗೆ ಕಲ್ಲು ಹಾಕಬಹುದು; ತಮ್ಮ ನೆಲದಲ್ಲಿ ಹೂಳಬಾರದ ಅಪಾಯಕಾರಿ ವಿಕಿರಣ ಭಸ್ಮವನ್ನು ಇಲ್ಲಿ ಹೂಳಬಹುದು ಎಂಬ ಕನಸೂ ಇದ್ದೀತು. ಜತೆಗೆ, ಚೀನಾ ತೀರಾ ದೊಡ್ಡದಾಗಿ ಬೆಳೆಯದಂತೆ ಅದಕ್ಕೆ ಏಷ್ಯದಲ್ಲೇ ಇನ್ನೊಂದು ಪ್ರತಿಸ್ಪರ್ಧಿಯನ್ನು ಬೆಳೆಸುವ ಹುನ್ನಾರವೂ ಇದ್ದೀತು. ಅಂತೂ ಸತ್ಯ ಏನೆಂಬುದು ಯಾರಿಗೂ ಸ್ಪಷ್ಟ ತಿಳಿಯದಂತೆ ಒಪ್ಪಂದದ ನಿಯಮ ನಿಬಂಧನೆಗಳ ಸರಿಗೆಗಳು ಸುತ್ತಿಕೊಂಡಿವೆ. ○

ಓರಾಟಗಾರ ಸರಕಾರ

ಶ್ರೀ

ಸತ್ಯನಾರಾಯಣ ಪೂಜೆ ಮಾಡಿ, ಮತದಾರ ಬಾಂಧವರಿಗೆ ಭೂರಿ ಭೋಜನದ ಸಮಾರಾಧನೆ ಮಾಡಿದ್ದು (ಚುನಾವಣಾ ಆಯೋಗದ ನೀತಿ ಸಂಹಿತೆ ಕಣ್ಣಿಗೆ ಮಣ್ಣೆರಚಲು !?) ಹೀಗೆ ಫಲ ಕೊಡಬಹುದೆಂದು ಬಹುಶ: ಅವರಿಗೂ ಗೊತ್ತಿರಲಿಕ್ಕಿಲ್ಲ. ಸನ್ಮಾನ್ಯ ಇಂಧನ ಸಚಿವರ ಮೈಮೇಲೆ 'ಸತ್ಯ'ನಾರಾಯಣನ ಆವಾಹನೆಯಾಗಿರುವ ಹಾಗಿದೆ. ಕೇಸರಿ ಹೃದಯದಲ್ಲಿ ಮಾತ್ರವಲ್ಲ, ನಮ್ಮ ಮೈಯಲ್ಲೆಲ್ಲಾ ಇದೆ ಎಂದು ಹೇಳಿದ್ದಾರೆ. ಅಧಿಕಾರಕ್ಕಾಗಿ ಏನೇನೆಲ್ಲ ಮಾಡಿದ್ದೇವೆ, ಅದನ್ನು ಉಳಿಸಿಕೊಳ್ಳಲು ಏನು ಬೇಕಾದರೂ ಮಾಡುತ್ತೇವೆ. ಬೇರೆ ಪಕ್ಷಗಳನ್ನು ಒಡೆಯುತ್ತೇವೆ ಎಂದು ಹೇಳಿ ಮತ್ತೆ ಅದನ್ನು ದೃಢೀಕರಿಸಿದ್ದಾರೆ. ಭೇಷ್ ಕಣ್ರೀ ಭೇಷ್, ನಮ್ಮ ಸಿನಿಮಾ ಭಾಷೆಯಲ್ಲಿ ಹೇಳೋದಾದ್ರೆ, 'ಮೀಟರ್' ಇರುವವರು ಅಂದ್ರೆ ನೀವೇ ಕಣ್ರೀ. ಅಂದಹಾಗೆ ಉಚಿತ ವಿದ್ಯುತ್ ಕೊಡೋಕೆ ಉಚಿತ ಮೀಟರ್ ಹಾಕೋಕೆ ಹೊರಟಿದೀರ ಇದು ಉಚಿತವೇನ್ರೀ? ಹೋಗ್ಲಿ ಬಿಡಿ, ಇದು ನಿಮ್ಮ ದಿನ ನಿತ್ಯದ ಖಾತೆಯ ವಿಷಯ, ಇದರಲ್ಲೇನೂ ಸ್ವಾರಸ್ಯ ವಿರೊಲ್ಲ. (ಮೀಟರ್ ಹಾಕಿದ ಮೇಲೆ ತಾನೆ ಗೊತ್ತಾಗೋದು? ಎಷ್ಟು ಶಕ್ತಿಯ ಪಂಪ್ ಗಳಿಗೆ ಎಷ್ಟು ಯೂನಿಟ್ ಉಚಿತ, ಗುಜರಾತ್ ಮಾದರಿಯಲ್ಲಿ ಎಷ್ಟು ರೈತರಿಗೆ ಜೈಲು ಖಚಿತ ಅಂತ) . ಬಳ್ಳಾರಿ ಗಣಿ ಧಣಿಗಳು ಬಿ ಜೇ ಪಿ ಯಲ್ಲಿ ಎಷ್ಟು ಭಂಡವಾಳ ಹೂಡಿದ್ದಾರೆ? ಪಕ್ಷೇತರರನ್ನು ಕೊಂಡು ಕೊಳ್ಳಲು ಎಷ್ಟು ಚಲ್ಲಿದರು? ಬೇರೆ ಪಕ್ಷ ಒಡೆಯಲು ರಿಸರ್ವ್ ಫಂಡ್ ಎಷ್ಟು ತೆಗೆದಿಟ್ಟಿದ್ದಾರೆ? ಅಂತನೂ ಹೇಳಿ ಬಿಡ್ರೀ, ಅದ್ಯಾರು ಏನು ಮಾಡ್ಕೋತಾರೋ ನೋಡೋಣ!


ನೀವು ಸತ್ಯವನ್ನೇ ಹೇಳ್ತೀರ, ಸತ್ಯವನ್ನಲ್ಲದೆ ಬೇರೇನ್ನೂ ಹೇಳುವುದಿಲ್ಲ, ನೀವು ಹೇಳುವುದೆಲ್ಲ ಸತ್ಯ. ಎಲ್ಲ ಸರಿ ಕಣ್ರೀ, ಆದ್ರೆ ಪದ್ಮಪ್ರಿಯಾ ಕೇಸ್ ಬಗ್ಗೆ ಆ ಅತುಲ್ ರಾವೂ ಸ್ವಲ್ಪ ಸತ್ಯ ಹೇಳಲಿ ಬಿಡ್ರೀ. ಇಲ್ಲ, ಸತ್ಯ ನೀವೊಬ್ರು ಮಾತ್ರ ಹೇಳಬೇಕೂಂತಿದ್ರೆ, ಅವರ ಬಾಯಿ ಯಾಕೆ ನಿಮ್ಮ ಸರ್ಕಾರದವರು ಬಂದ್ ಮಾಡ್ಸಿದೀರ ಅನ್ನೋ ಸತ್ಯನಾದ್ರೂ ನೀವೇ ಹೇಳಿ ಪರವಾಗಿಲ್ಲ.

ದಿನಪತ್ರಿಕೆಯೊಂದು ಇನ್ನು ಮೇಲೆ ಬೀದಿಯಲ್ಲಿ ಹೋರಾಟ ಮಾಡಬೇಡಿ, ಏನಿದ್ರೂ ನಮಗೆ ಪತ್ರ ಬರೀರಿ, ನಾವು ಸೀದಾ ಅದನ್ನು ವಿಧಾನ ಸೌಧಕ್ಕೆ ಹೋಗಿ ಸಮಾರಂಭದಲ್ಲಿ ನಿಮ್ಮ ಅಹವಾಲನ್ನು ಸರ್ಕಾರಕ್ಕೆ ತಲುಪಿಸುತ್ತೀವಿ ಅಂತ ಹೇಳಿ, ಹಾಗೆ ಮಾಡಿದೆ. ಬೀಜೇಪಿಯವರು ಬೀದಿಗಳಲ್ಲಿ ಬೆಂಕಿ ಹಚ್ಚಿ, ದಾಂಧಲೆ, ಲೂಟಿ ಮಾಡುವಾಗ ಇಂಥ ಶಾಂತಿ ಮಂತ್ರ ಬೋಧನೆ ಯಾಕೆ ಹೊಳೆಯೋಲ್ಲ ಆ ಪತ್ರಿಕೆಗೆ? ಬಿಜೇಪಿ ವಿರುದ್ಧ ಯಾರೂ ಪ್ರತಿಭಟನೆ ಮಾಡಬೇಡಿ, ಹೋರಾಟ, ಪ್ರತಿಭಟನೆ ಬೀಜೇಪಿ ಗುತ್ತಿಗೆ ಅಂತಲೇ?

ಇದೇ ರಾಗದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ರೈತ ಮುಖಂಡರನ್ನು ಕರೆದು, "ಇನ್ನು ಹೋರಾಟದ ಗೊಡವೆ ಯಾಕೆ ನಾನಿಲ್ಲವೇ" ಅಂತ ಅವರ ತಲೆ ಸವರಿದ್ದಾರೆ. ಮೊನ್ನೆ ಗುರುವಾರ ಸರ್ಕಾರವೇ ಎಷ್ಟು ಚನ್ನಾಗಿ 'ಬಂದ್' ಮಾಡಿಸಿತು ನೋಡಲಿಲ್ವೇ? ಯಾಕೆ ಈ ಬಂದ್? 'ಸಾಲ ಬಾಧೆ ತಾಳಲಾರದೆ ರೈತರು ಸಾಯುತ್ತಿದ್ದಾರೆ' ಅಂತಲೇ? 'ಗೊಬ್ಬರ ಸಮಸ್ಯೆಗೆ ಬೇಸತ್ತು ರೈತ್ರು ಸಾಯುತ್ತಿದ್ದಾರೆ' ಅಂತಲೇ? 'ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ರೈತ್ರು ಸಾಯುತ್ತಿದ್ದಾರೆ' ಅಂತಲೇ? 'ಬೆಲೆಗಳೆಲ್ಲ ಆಕಾಶಕ್ಕೇರಿ ಬಡವರು, ಮದ್ಯಮವರ್ಗದವರು ತತ್ತರಿಸಿ ಹೋಗುತ್ತಿದ್ದಾರೆ' ಅಂತಲೇ? ಅಲ್ಲ, ಅದ್ಯಾವುದೂ ಅಲ್ಲ! ಜಮ್ಮು ಕಾಶ್ಮೀರದಲ್ಲಿ ಏನೋ ಭೂ ವಿವಾದ ಅಂತ! ('ತೋರಿಕೆಗೆ ಹೆಗಲ ಮೇಲೆ ಹಸಿರು ಶಾಲು, ಹೃದಯದಲ್ಲಿ, ಮೈಯಲ್ಲಿ ಕೇಸರಿ' ಎಂಬುದರ ಅರ್ಥ ಆಯಿತೇ?) . ಜನ ಯಾವುದಕ್ಕೆ ಹೋರಾಟ ಮಾಡಬೇಕು, ಯಾವುದಕ್ಕೆ ಮಾಡಬಾರದು ಅಂತ ಸರ್ಕಾರವೇ ನಿರ್ಧರಿಸಿ ಸರ್ಕಾರವೇ ಪ್ರತಿಭಟನೆ, ಬಂದ್ ಗಳನ್ನು ಧರಣಿಗಳನ್ನು ನೆರವೇರಿಸಿಬಿಟ್ಟರೆ ಮತ್ತಿನ್ನೇನು?

ಇಂಥಾ ಹೋರಾಟಗಾರ ಸರ್ಕಾರ ಬಂದಿರುವ ಸಂದರ್ಭದಲ್ಲಿ ನಮ್ಮ ಉಟ್ಟು ಓರಾಟಗಾರ ವಾಟಾಳ್ ನಾಗರಾಜರು ಎರಡೆರಡು ಬಾರಿ ಠೇವಣಿ ಕಳೆದುಕೊಂಡು, ಅವರ ಸೊಲ್ಲಡಗಿ ಹೋಗಿದೆ. ಆರಕ್ಕೇರಿದ ಪಕ್ಷೇತರರಲ್ಲಿ ಇವರೂ ಇದ್ದಿದ್ದರೆ, 'ಹೋರಾಟ ಖಾತೆಗೆ' ಸಂಪುಟ ದರ್ಜೆ ಸಚಿವರಾಗಿ ದಿನಕ್ಕೊಂದು ನವ ನವೀನ ಹೋರಾಟಗಳನ್ನು ಮಾಡಬಹುದಾಗಿತ್ತು. ಬ್ಯಾಡ್ ಲಕ್ ಮಿ. ವಾಟಾಳ್ ಬ್ಯಾಡ್ ಲಕ್. ಬಟ್ ಡೋಂಟ್ ವರಿ, ಮಿ. ಎಚ್.ಕೆ.ಪಾಟೀಲ್ ಈಸ್ ವಿತ್ ಯೂ. ಬೆಟರ್ ಲಕ್ ನೆಕ್ಸ್ಟ್ ಟೈಮ್.

ಏನು ಯಾಕೆ ಹೀಗೆ ಇಂಗ್ಲೀಷು ಅಂತ ಕೇಳ್ತಿದೀರ? ಡೋಂಟ್ ಆಸ್ಕ್ ಸಚ್ ಸಿಲ್ಲೀ ಕ್ವೊಶ್ಚನ್ಸ್, ಕನ್ನಡ ಮೀಡಿಯಂ ಈಸ್ ನಾಟ್ ಕಂಪಲ್‌ಸರಿ ನೌ ! ಮೈಂಡ್ ಇಟ್!



ಗೆಲುವು ನಮಗೆ
ಸಾವು ನಿಮಗೆ

ಕೃಷಿ ಬಿಕ್ಕಟ್ಟಿನ ಕುರಿತ ಚರ್ಚೆಗೆ ಅಂತ ಪ್ರಚಾರ ಮಾಡಿಕೊಂಡು ಕರೆಯಲಾದ ಸಭೆಯಲ್ಲಿ ಯಡಿಯೂರಪ್ಪ 'ಈ ಯಡಿಯೂರಪ್ಪ ಮುಖ್ಯಮಂತ್ರಿಯಾಗಿರುವಾಗ... ಚಳುವಳಿ ಏತಕೆ...' ಅಂತ ಶುರು ಹಚ್ಚಿಕೊಂಡಿರುವಾಗಲೇ ಅತ್ತ ಕೋಲಾರದಲ್ಲಿ ಟಮೊಟೋ ಬೆಲೆ ಕುಸಿತದಿಂದ ಕಂಗಾಲಾದ ರೈತರು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಯ್ಯ ಶೆಟ್ಟಿಗೆ ದಿಗ್ಬಂಧನ ಹಾಕಿಬಿಟ್ಟರು. ಸರ್ಕಾರದ ಮಾತಿನ ಪೊಳ್ಳುತನಕ್ಕೆ ಇದಕ್ಕಿಂತ ಸಾಕ್ಷಿ ಬೇರೆಬೇಕೆ?

ಕೃಷಿ ಬಿಕ್ಕಟ್ಟು ಚರ್ಚೆಯೆಂಬ ಒಣ ಪ್ರಹಸನ ಯಡಿಯೂರಪ್ಪನ ಹುಸಿ ಪೋಸು

ಜುಲೈ, 1 ವಿಧಾನಸೌಧದಲ್ಲಿ ರೈತ ಸಂಘಟನೆಗಳ ಮುಖಂಡರು, ಕೃಷಿ ತಜ್ಞರು, ಇತರರೊಂದಿಗೆ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಭೆ ನಡೆಸಿ ಚರ್ಚಿಸಿದ್ದಾರೆ. ಮೊದಲಿಗೆ ಈ ಸಭೆಯ ಉದ್ದೇಶ ರೈತರ ಆತ್ಮಹತ್ಯೆ, ರಸಗೊಬ್ಬರ ಕೊರತೆ, ಕೃಷಿ ಬಿಕ್ಕಟ್ಟಿನ ಬಗೆಗೆಂದು ಹೇಳಲಾಗಿದ್ದರೂ ನಂತರದಲ್ಲಿ ಸಭೆಯು ವಾಸ್ತವಿಕವಾಗಿ ರಾಜ್ಯ ಸರ್ಕಾರದ ಮುಂಬರುವ ಬಜೆಟ್‌ನ ಕುರಿತಾಗಿ ಚರ್ಚಿಸಲು ಎಂದು ತಿಳಿಸಲಾಯಿತು. ಈ ಸಭೆಯಲ್ಲಿ ನಮ್ಮ ರೈತರನ್ನು ಕಾಡುತ್ತಿರುವ ಕೃಷಿ ಬಿಕ್ಕಟ್ಟಿನ ಮೂಲವೇನೆಂದು ಗುರುತಿಸಲಾಯಿತೆ? ಯಾರ್ಯಾರು ಯಾವ್ಯಾವ ಪರಿಹಾರ ಸೂಚಿಸಿದರು. ಸರ್ಕಾರ ಏನೆಂದಿತು?

ನಾನಿರುವಾಗ ಚಳುವಳಿ ಯಾಕೆ?

'ನಾನಿರುವುದೇ ನಿಮಗಾಗಿ ....ಕಣ್ಣೀರೇಕೆ' ರಾಜ್‌ಕುಮಾರ್ ಸಿನಿಮಾ ಒಂದರಲ್ಲಿ ಹಾಡಿರುವಂತೆ ಯಡಿಯೂರಪ್ಪನವರು ಎಲ್ಲ ಕಡೆಗಳಲ್ಲೂ 'ಈ ಯಡಿಯೂರಪ್ಪ ಮುಖ್ಯಮಂತ್ರಿಯಾಗಿರುವಾಗ.... ಆತಂಕವೇಕೆ? ಭಯವೇಕೆ. ಚಳುವಳಿ ಏಕೆ?' ಅಂತ ಪ್ರಶ್ನೆ ಮಾಡುತ್ತಲೇ ಇದ್ದಾರೆ.

ಆದರೆ ಈ ವೀರಾವೇಶದ ಮಾತುಗಳನ್ನು ಕೃತಿಗೆ ಇಳಿಸಬೇಕಾದ ಗಂಭೀರ ಸವಾಲು ಅವರ ಮುಂದಿದೆ. ಈಗಾಗಲೇ ಚುನಾವಣೆ ಸಮಯದಲ್ಲಿ ಉಚಿತ ವಿದ್ಯುತ್ ಬಗ್ಗೆ ಕೊಟ್ಟ ಭರವಸೆಯನ್ನು ಹೇಗೆ ತಿರುಚಲಾಗುತ್ತಿದೆ ಅಂತ ನೋಡುತ್ತಿದ್ದೇವೆ.

ಜಾತ್ರೆಯಂತಹ ಸಭೆ

ಈ ಸಭೆಯಲ್ಲಿ 250-300 ಜನಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದಾರೆ. ಕೃಷಿ ಬಿಕ್ಕಟ್ಟಿನ ಬಗೆಗೆ ನಿಜವಾಗಿಯೂ ಗಂಭೀರವಾದ, ಆಳವಾದ, ನಿರ್ದಿಷ್ಟವಾದ ಚರ್ಚೆ ನಡೆಸುವುದು ಉದ್ದೇಶವಾಗಿದ್ದರೆ, ಇಷ್ಟು ದೊಡ್ಡ ಜನ ಜಾತ್ರೆ ಈ ಸಭೆಗೆ ಅಗತ್ಯವಿರಲಿಲ್ಲ. ರೈತ ಸಂಘಟನೆಗಳ ಪ್ರತಿನಿಧಿಗಳು, ತಜ್ಞರು, ಅಧಿಕಾರಿಗಳು, ಜನ ಪ್ರತಿನಿಧಿಗಳನ್ನೊಳಗೊಂಡ ಸಣ್ಣ ಸಭೆ ಸಾಕಿತ್ತು. ಇಂತಹದೊಂದು ಗಂಭೀರ ಚರ್ಚೆಯ ನಡುನಡುವೆ ಜನತಾದರ್ಶನದಲ್ಲಿ ಮನವಿ ಕೊಡುವಂತೆ ಹಲವರು ತಮ್ಮ ವೈಯಕ್ತಿಕ ಸಮಸ್ಯೆ ಹೇಳಿಕೊಂಡು ಅದಕ್ಕೆ ಪರಿಹಾರ ಬೇಡಲು ಅವಕಾಶ ನೀಡಬೇಕಿರಲಿಲ್ಲ, ಇರಲಿ. ಭಾಗವಹಿಸಿದ ರೈತ ಮುಖಂಡರು ಹಲವಾರು ಗಂಭೀರ ಸಮಸ್ಯೆಗಳ ಬಗೆಗೆ ಚರ್ಚಿಸಿದ್ದಾರೆ. ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್), ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಮುಂತಾದ ಸಂಘಟನೆಗಳ ಮುಖಂಡರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಬಾರದು, ಉಚಿತ ವಿದ್ಯುತ್ ನೀಡಬೇಕು, ಕೃಷಿಗೆ ಪ್ರತ್ಯೇಕ ಬಜೆಟ್ ನೀಡಬೇಕು, ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಿಸಬೇಕು. ನೌಕರರಿಗೆ ವೇತನ ಆಯೋಗ ಇರುವ ರೀತಿಯಲ್ಲಿ ಕೃಷಿಗೆ ವೇತನ ಆಯೋಗ ರಚಿಸಬೇಕು ಎಂಬ ಹಲವು ಬೇಡಿಕೆಗಳನ್ನು ರಾಜ್ಯ ರೈತ ಸಂಘದ ಮುಖಂಡರು ಮುಂದಿಟ್ಟಿದ್ದಾರೆ. ಇದರಲ್ಲಿ ಹಲವು ಮಹತ್ವದ ಅಂಶಗಳು ಎಂಬುದೇನೋ ನಿಜ. ಆದರೂ ರೈತರನ್ನು ಹತಾಶೆ ಹಾಗೂ ಆತ್ಮಹತ್ಯೆಯ ಕಡೆಗೆ ದೂಡುತ್ತಿರುವ ಬಿಕ್ಕಟ್ಟಿನ ಮೂಲವನ್ನು ಗುರುತಿಸಿ ಮುಂದಿಡುವಲ್ಲಿ ಈ ಅಂಶಗಳು ಸಾಲುವುದಿಲ್ಲ ಎಂದೇ ಅನಿಸುತ್ತದೆ. ರಾಜ್ಯ ರೈತ ಸಂಘದ ಮುಖಂಡರಾದ ಪುಟ್ಟಣ್ಣಯ್ಯ ಅವರು ಮಾತನಾಡುತ್ತಾ ಮುಖ್ಯಮಂತ್ರಿಗಳಿಗೆ ನಾವು ನೀವು ಎಲ್ಲಾ ಸೇರಿ ರೈತರ ಆತ್ಮಹತ್ಯೆಗಳನ್ನು ತಡೆಯೋಣ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿ, ತಹಶೀಲ್ದಾರ್‌ರ ಕಛೇರಿಗಳ ಮುಂದೆ ರೈತರನ್ನು ಉದ್ದೇಶಿಸಿ, 'ನಾವಿದ್ದೇವೆ ಹೆದರಬೇಡಿ, ಆತ್ಮಹತ್ಯೆಗೆ ಮುಂದಾಗಬೇಡಿ' ಅಂತ ಬೋರ್ಡ್ ಹಾಕೋಣ ಎಂದು ಸಲಹೆ ನೀಡಿದರಂತೆ. ಬೋರ್ಡ್ ಹಾಕುವುದರಿಂದ ರೈತರ ಆತ್ಮಹತ್ಯೆ ತಡೆಯಲಾಗುತ್ತದೆಯೇ?! ರಾಜ್ಯ ರೈತ ಸಂಘ ಮುಖಂಡರ ಆಲೋಚನೆ ಚಿಂತನೆಗಳು ಯಾಕೋ ತೀಕ್ಷ್ಣತೆ, ಪ್ರಖರತೆ ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ. ಸಂಘದ ಮಹಾ ಪ್ರಧಾನ ಕಾರ್ಯದರ್ಶಿ ವೀರಸಂಗಯ್ಯ 'ರೈತರೇ ಆತ್ಮಹತ್ಯೆ ನಿಲ್ಲಿಸಿ ಅಂತ ನಡಿಗೆ ಮಾಡೋಣ' ಎಂದರಂತೆ. ಹಾವನ್ನು ಬಿಟ್ಟು ಹುತ್ತವ ಬಡಿದಂತಲ್ಲವೇ?' ಇದು.

ರಾಜ್ಯದಲ್ಲಿ 2001ರ ಜನಗಣತಿಯಂತೆ 70,79,388 ಹಿಡುವಳಿದಾರರಿದ್ದಾರೆ. ಇವರಲ್ಲಿ ಗ್ರಾಮೀಣ ಬ್ಯಾಂಕ್ ಹಾಗೂ ಎಲ್ಲಾ ಬ್ಯಾಂಕ್‌ಗಳಿಂದ ವ್ಯವಸಾಯಕ್ಕಾಗಿ ಸಾಲ ಪಡೆದಿರುವ ಸಾಲಗಾರರ ಖಾತೆಗಳ ಸಂಖ್ಯೆ 23,75,157 ಮಾತ್ರ. ಇದರಲ್ಲಿಯೂ ಬೇರೆ ಬೇರೆ ಹೆಸರುಗಳಲ್ಲಿ ಒಬ್ಬರೇ. 2-3 ಖಾತೆಗಳ ಮೂಲಕ ಸಾಲ ಪಡೆದಿರುವಂಥದ್ದು ಸಹ ಇರುತ್ತದೆ. ಅಂದರೆ ಸಾಲ ಸೌಲಭ್ಯ ಪಡೆದವರ ವಾಸ್ತವಿಕ ಸಂಖ್ಯೆ ಇನ್ನೂ ಕಡಿಮೆ. ಉಳಿದ ರೈತರು, ಸಾಲ ಪಡೆದವರು ಶೇ.28 ಜನ ಮಾತ್ರ. ಮಿಕ್ಕವರು ಏನು ಮಾಡುತ್ತಾರೆ. ಅನಿವಾರ್ಯವಾಗಿ ಖಾಸಗಿ ಲೇವಾದೇವಿಗಾರರಿಂದ ವಾರ್ಷಿಕ ಶೇ.36 ರಿಂದ 120 ರೂಪಾಯಿಗಳಷ್ಟು ಅತ್ಯಂತ ದುಬಾರಿ ಬಡ್ಡಿ ತೆತ್ತು ಸಾಲ ಪಡೆಯುತ್ತಾರೆ. ಇಂತಹ ಪರಿಸ್ಥಿತಿಯೇ ರೈತರ ಆತ್ಮಹತ್ಯೆಗಳಿಗೆ ಒಂದು ಪ್ರಮುಖ ಕಾರಣ ಎನ್ನುವುದನ್ನು ಹಲವಾರು ಅಧ್ಯಯನಗಳು ತೋರಿಸಿವೆ.

ಇದಲ್ಲದೆ ರೈತರಿಗೆ ಕೇವಲ ಟ್ರಾಕ್ಟರ್, ಟೆಂಪೋ ಇತ್ಯಾದಿಗಳಿಗೆ ಮಾತ್ರವಲ್ಲ, ಬಿತ್ತನೆ ಬೀಜ, ಗೊಬ್ಬರ ಭೂಮಿಯ ಅಭಿವೃದ್ಧಿ ಇತ್ಯಾದಿಗಳಿಗೆ ಸಹ ಬ್ಯಾಂಕುಗಳ ಸುಲಭ ಸಾಲ ಸಿಗಬೇಕಾದ ಅಗತ್ಯವಿದೆ. ಆದರೆ ಸಿಗುತ್ತಿಲ್ಲ! ಸುಲಭ ಸಾಲದ ಸೌಲಭ್ಯಗಳ ವ್ಯಾಪಕ ವಿಸ್ತರಣೆ ಅಗತ್ಯವಿದೆ. ಜೊತೆಗೆ ಸಾಲಬಾಧೆಯಿಂದ ಅದರಲ್ಲೂ ಖಾಸಗಿ ಲೇವಾದೇವಿದಾರರ ಸಾಲಬಾಧೆಯಲ್ಲಿ ನರಳುತ್ತಿರುವ ರೈತರಿಗೆ ಪರಿಹಾರ ದೊರಕಿಸಿಕೊಡಲು ಕೇರಳದಲ್ಲಿ ಮಾಡಿದಂತೆ 'ಸಾಲ ಪರಿಹಾರ ಆಯೋಗ' ವನ್ನು ರಚಿಸಬೇಕಾದ ಪ್ರಶ್ನೆ ಇದೆ.



ಯಡಿಯೂರಪ್ಪ ಇರುವಾಗ ಹೋರಾಟ ಯಾಕೆ?

ಇಂತಹ ಮಹತ್ವದ ಅಂಶಗಳ ಬಗೆಗೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿದ್ದಾರೆ. ನೀರಾವರಿ ವಿದ್ಯುತ್ ನೀತಿಯ ಪ್ರಶ್ನೆಗಳನ್ನು ಎತ್ತಲಾಗಿದೆ. ಜೊತೆಗೆ ರೈತರ ಬೆಳೆಗೆ ನ್ಯಾಯಯುತವಾದ ಬೆಲೆ, ಪರಿಣಾಮಕಾರಿ ಪಡಿತರ ವ್ಯವಸ್ಥೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ವಸತಿ, ನಿವೇಶನ ಪ್ರಶ್ನೆಗಳನ್ನು ಇತ್ಯರ್ಥಪಡಿಸುವುದು... ಹೀಗೆ ಹತ್ತು ಹಲವು ಕ್ರಮಗಳ ಮೂಲಕ ಮಾತ್ರ ಕೃಷಿ ಬಿಕ್ಕಟ್ಟಿನ ತೀವ್ರತೆ ತಗ್ಗಿಸಲು ಸಾಧ್ಯ.

ಸಾವಯವ ಕೃಷಿ:

ಸಭೆಯಲ್ಲಿ ಪಾಲ್ಗೊಂಡ ಹಲವಾರು ಈಗಿನ ಕೃಷಿ ಬಿಕ್ಕಟ್ಟಿಗೆ 'ಹಸಿರು ಕ್ರಾಂತಿ'ಯ ಕಾರ್ಯಕ್ರಮ, ರಸಗೊಬ್ಬರ, ಹೈಬ್ರಿಡ್ ತಳಿಗಳ ಬಳಕೆಯೇ ಕಾರಣ. ಇದರಿಂದ ಭೂಮಿ ಫಲವತ್ತತೆ ಕಳೆದುಕೊಂಡಿದೆ. ನಾಶವಾಗಿದೆ. ರೈತರು ಸಾವಯವ ಕೃಷಿ ಮಾಡಬೇಕು.... ಇತ್ಯಾದಿ ಇತ್ಯಾದಿ ವಾದ ಮಂಡಿಸಿದ್ದಾರೆ.

ಇಂತದ್ದೊಂದು ವಾದ ತೀವ್ರವಾಗಿ ಬೆಳೆದು ಬರುತ್ತಿದೆ. ಕೃಷಿ ಮಾಡಲು ನೇಗಿಲು, ಗುದ್ದಲಿ ಏನೂ ಬೇಕಿಲ್ಲ, ಅಗೆಯುವುದೇ ಅಗತ್ಯವಿಲ್ಲ ಎಂಬ ವಾದವೂ ಸಹಜ ಕೃಷಿ ಎಂಬ ಹೆಸರಿನಲ್ಲಿ ಬೆಳೆದು ಬರುತ್ತಿದೆ.

ವಿದೇಶದಿಂದ ಆಮದು ಮಾಡಿಕೊಳ್ಳಬೇಕಾದ, ದುಬಾರಿಯಾದ ರಸಗೊಬ್ಬರದ ಬದಲಿಗೆ ದನಕರುಗಳ ಸೆಗಣಿ, ಸೊಪ್ಪು, ಸೆದೆ ಇತ್ಯಾದಿಗಳಿಂದ ಅಥವಾ ಬೇರೆ ಬೇರೆ ವಿಧಾನಗಳಿಂದ ತಯಾರಿಸಲಾದ ಸಾವಯವ ಗೊಬ್ಬರ ಬಳಸಿ ಉತ್ತಮ ಬೆಳೆಯನ್ನು ತೆಗೆಯಬಹುದು ಎಂದಾದರೆ ಅದು ಸಂತೋಷದ ವಿಚಾರವೇ. ಆದರೆ ಏಕಾಏಕಿ ಎಲ್ಲರೂ ಸಾವಯವ ಕೃಷಿಗೆ ಹೋದರೆ ದೇಶದ ಆಹಾರ ಭದ್ರತೆಯ ಮೇಲೆ ಏನು ಪರಿಣಾಮವಾಗಬಹುದು. ಒಂದೊಮ್ಮೆ ಉತ್ಪಾದನೆ ಕಡಿಮೆಯಾದರೆ ಅದನ್ನು ಎದುರಿಸಲು ನಾವು ಸಮರ್ಥರಿದ್ದೇವೆ ಎಂಬೆಲ್ಲಾ ಗಂಭೀರ ಪ್ರಶ್ನೆಗಳು ಇದರೊಂದಿಗೆ ಬೆರೆತಿವೆ.

ಜೊತೆಗೆ ಬೆಳೆಯಲಾಗುವ ಬೆಳೆಯ ಅಗತ್ಯವೇನು? ಮಣ್ಣಿನಲ್ಲಿ ಯಾವ ರಾಸಾಯನಿಕಗಳು ಯಾವ ಪ್ರಮಾಣದಲ್ಲಿವೆ. ಯಾವುದು ಕಡಿಮೆ ಇದೆ? ಯಾವುದು ಹೆಚ್ಚಿದೆ. ಯಾವುದನ್ನು ಕೃತಕ ರಸಗೊಬ್ಬರ ಸೇರಿಸಿ ಸಮತೋಲನ ಗೊಳಿಸಬೇಕು ಎಂಬುದು ಬೇಡವೇ ಬೇಡ ಎಂದು ಹೇಳಲು ಸಾಧ್ಯವೇ ಎಂಬ ಪ್ರಶ್ನೆಗಳಿವೆ. ಇದೇನಿದ್ದರೂ ಕೃಷಿ ತಜ್ಞರು ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯಗಳು ಸಂಶೋಧನೆ, ಪ್ರಯೋಗ ನಡೆಸಿ ಜನತೆಗೆ ಹೇಳಬೇಕಾದ ವಿಚಾರ. ಆದರೆ ಈ ಬಗೆಗೆ ಯಾಕೋ ಈ ವಿಭಾಗ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಪ್ರತಿಕ್ರಿಯಿಸುತ್ತಿಲ್ಲ ಎನಿಸುತ್ತದೆ. ಕರ್ನಾಟಕ ಪ್ರಾಂತ ರೈತ ಸಂಘವು ಈ ಬಗ್ಗೆ ತಜ್ಞರ ಸಮಿತಿ ರಚಿಸಿ ಮಾರ್ಗದರ್ಶನ ಪಡೆಯಲು ಒತ್ತಾಯಿಸಿದೆ.

'ಹಿಂದಿನ ಕಾಲಕ್ಕೆ ಹೋಗೋಣ....'

ಇಲ್ಲೊಂದು ಅಪಾಯವಿದೆ. ಹಲವರು ಮುಗ್ಧವಾಗಿ ಅಥವಾ ರೈತರು ಮತ್ತು ಪರಿಸರದ ಬಗೆಗಿನ ಕಾಳಜಿಯಿಂದಾಗಿ ಸಾವಯವ ಕೃಷಿ, ನೈಸರ್ಗಿಕ ಕೃಷಿಯ ಪ್ರತಿಪಾದನೆ ಮಾಡುತ್ತಿರಬಹುದು. ಅದರ ಪರಿಣಾಮ ಕೊಂಚವಾದರೂ ಇರಬಹುದು. ಆದರೆ ಆರೆಸ್ಸೆಸ್‌ನ ಜನರು ಈ ವಿಚಾರವನ್ನು ಹೇಳುವಾಗ ಅದರಲ್ಲಿ ಏನೇನೋ ರಹಸ್ಯ ಅಜೆಂಡಾಗಳ ವಾಸನೆ ಬಡಿಯುತ್ತದೆ. ಈ ಸಭೆಯಲ್ಲಿ ಸಂಘ ಪರಿವಾರದ

ಪುಟ 12ಕ್ಕೆ

ರಾಜ್ಯದಲ್ಲಿ ಅದರಲ್ಲಿಯೂ ಕರಾವಳಿ ಜಿಲ್ಲೆಗಳಲ್ಲಿ ಚಿಕೂನ್ ಗುನ್ಯಾದ ಹಾವಳಿ ಮಿತಿಮೀರಿದೆ. ಆದರೆ ಸರ್ಕಾರದ ಪರಿಹಾರಗಳ ಕ್ರಮಗಳಲು ಮಾತ್ರ ಏನೂನು ಸಾಲದಾಗಿದೆ.


ಚಿಕೂನ್ ಗುನ್ಯಾ ಮತ್ತು ಕೈಚೆಲ್ಲಿ ಕುಂತ

ಜನಪರ ಸರ್ಕಾರ !

ಚಿಕೂನ್ ಗುನ್ಯಾ ಹೆಸರೇ ಸೂಚಿಸುವಂತೆ ವಿಚಿತ್ರವಾದ ಕಾಯಿಲೆ. ಈ ರೋಗದ ಹರಡುವಿಕೆ ತೀವ್ರವಾಗಿದ್ದು, ಬೆಳ್ತಂಗಡಿ ತಾಲ್ಲೂಕು ಸೇರಿದಂತೆ ದ.ಕ. ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಮಂಗಳೂರು ತಾಲೂಕನ್ನು ವ್ಯಾಪಿಸಿದೆ. ಆರೋಗ್ಯ ಇಲಾಖೆ ದಿನಕ್ಕೊಂದು ಅಂಕಿ ಅಂಶಗಳನ್ನು ನೀಡುತ್ತಿದೆ. ರೋಗಪೀಡಿತ ನಿಖರವಾದ ಸಂಖ್ಯೆ ಇಲಾಖೆಗ ತಿಳಿಯದಂತೆ ವರ್ತಿಸುತ್ತಿದೆ. ಒಂದು ಮೂಲದ ಪ್ರಕಾರ ಜಿಲ್ಲೆಯಲ್ಲಿ ರೋಗಪೀಡಿತರ ಸಂಖ್ಯೆ 3.5 ಲಕ್ಷಕ್ಕೆ ಸಮೀಪಿಸುತ್ತಿದೆ. ಈ ವರದಿ ತಯಾರಿಸುವ ವೇಳೆ ಈ ವಿಚಿತ್ರ ರೋಗಕ್ಕೆ ಬಲಿಯಾದವರ ಸಂಖ್ಯೆ 72 ವರದಿಗಳಿವೆ. ಚಿಕೂನ್‌ಗುನ್ಯನ ಏಕೈಕ ಕಾರಣಕ್ಕೆ ಸಾವು ಸಂಭವಿಸಿಲ್ಲದಿರಬಹುದು. ಬೇರೆ ಬೇರೆ ಆರೋಗ್ಯ ತೊಂದರೆ ಇದ್ದವರು, ಅಥವಾ ತೊಂದರೆಗೆ ಗುರಿಯಾದವರು ಚಿಕೂನ್‌ಗುನ್ಯದ ಬಾಧೆಯೂ ಸೇರಿಕೊಂಡ ಮೇಲೆ ಸಾವನ್ನಪ್ಪಿರಬಹುದು.

ಅವಧಿ ಮೀರಿದ ಔಷಧಿಗಳು :

ಚಿಕೂನ್ ಗುನ್ಯಾ ರೋಗ ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ತಮ್ಮಲ್ಲಿರುವ ಮಾತ್ರೆಗಳನ್ನು ವಿತರಣೆ ಮಾಡಲಾರಂಭಿಸಿದೆ. ಈ ಬಗ್ಗೆ ಅಧಿಕಾರಿಗಳಲ್ಲಿ ಪ್ರಶ್ನಿಸಿದರೆ ಸಮರ್ಪಕವಾದ ಉತ್ತರವನ್ನು ನೀಡಲು ಹಿಂಜರಿಯುತ್ತಾರೆ. ಆರೋಗ್ಯಾಧಿಕಾರಿಗಳು ಮಾತ್ರ ಈ ಕಾಯಿಲೆಗೆ ಅಗತ್ಯ


ರೋಗಕ್ಕೆ ಕಾರಣವಾಗುವ ವೈರಸ್

ಔಷಧಿಗಳು ನಮ್ಮಲ್ಲಿದೆ ಎಂಬು ಉತ್ತರಿಸುತ್ತಾರಾದರೂ ಅವಧಿ ಮೀರಿದ ಔಷಧಿಗಳನ್ನು ಯಾಕೆ ವಿತರಣೆ ಮಾಡುತ್ತಾರೆ ಎಂಬುವುದನ್ನು ಮಾತ್ರ ಮುಚ್ಚಿಡುತ್ತಾರೆ.

ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಚಿಕೂನ್ ಗುನ್ಯಾದ ತಾಂಡವ ನರ್ತನ ಮುಂದುವರಿಯುತ್ತಿದ್ದು, ಅದು ಹತೋಟಿಗೆ ಬರುವ ಯಾವುದೇ ಲಕ್ಷಣ ಕಾಣಿಸುತ್ತಿಲ್ಲ. ಈ ರೋಗದಿಂದ ಜಿಲ್ಲೆಯನ್ನು ರಕ್ಷಿಸುವವರಾರು ಎಂಬ ಪ್ರಶ್ನೆಗೆ ಉತ್ತರವಿಲ್ಲವಾಗಿದೆ.

ಬಡಜನರ ಜೀವವನ್ನು ಹಿಂಡುವ ಈ ರೋಗದ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಮಧ್ಯೆಯೂ ಅವಧಿ ಮೀರಿದ ಔಷಧಿಗಳನ್ನು ವಿತರಿಸುತ್ತಿರುವುದರ ಹಿಂದೆ ಯಾರ ಕೈವಾಡವಿದೆ ಎಂಬುವುದನ್ನು ತನಿಖೆ ನಡೆಸಬೇಕಾಗಿದೆ. ಇದು ಜಿಲ್ಲೆಯ ಆರೋಗ್ಯ ಇಲಾಖೆಯ ಹಗರಣವೋ ಅಥವಾ ಔಷಧಿ ಕಂಪನಿಗಳ ಮೋಸದ ಜಾಲವೋ ಎಂಬುವುದು ನ್ಯಾಯಯುತವಾದ ತನಿಖೆಯಿಂದ ಮಾತ್ರ ತಿಳಿಯಲು ಸಾಧ್ಯ. ಈ ಹಿಂದೆ ಲೋಕಾಯುಕ್ತರು ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿದಾಗ ಕೋಟ್ಯಾಂತರ ರೂಪಾಯಿ ಅವಧಿ ಮೀರಿದ ಔಷಧಿಗಳು ಪತ್ತೆಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ಅಕ್ಕಿ ವಿತರಣೆಯೆಂಬ ನಾಟಕ

ಈ ರೋಗ ಯಾರನ್ನು ಬಿಡದೆ ಕಾಡುತ್ತಿದೆಯಾದರೂ ಸರ್ಕಾರ ಮಾತ್ರ ಯಾವುದೋ ಭ್ರಮಾಲೋಕದಲ್ಲಿ ವಿಹರಿಸುತ್ತಿದೆ. ದ.ಭಾರತದಲ್ಲಿ ಪ್ರಥಮ ಬಾರಿಗೆ ಅಧಿಕಾರದ ರುಚಿ ಉಣ್ಣುತ್ತಿರುವ ಬಿಜೆಪಿಗೆ ಜನತೆಯ ನೋವುಗಳಿಗೆ ಯಾವ ರೀತಿ ಸ್ಪಂದಿಸಬೇಕೆನ್ನುವುದೇ ತಿಳಿಯದಾಗಿದೆ. ಸರ್ಕಾರ ಜನರ ಕಣ್ಣಿಗೆ ಮಣ್ಣೆರಚಲು ಯೋಜನೆಗಳನ್ನು ಪ್ರಕಟಿಸುತ್ತಿದೆಯಾದರೂ ಮತ್ತೆ ಮುಂದುವರಿಯುವುದು ಇಲ್ಲ. ಇದೇ ಕಾರಣಕ್ಕಾಗಿ ಈ ಕಾಯಿಲೆ ತನ್ನ ಕರಾಳ ಛಾಯೆಯನ್ನು ಮತ್ತಷ್ಟು ವಿಸ್ತರಿಸುತ್ತಿದೆ. ರೋಗಪೀಡಿತ ಕುಟುಂಬವೊಂದಕ್ಕೆ 10 ಕೆ.ಜಿ ಅಕ್ಕಿ ವಿತರಣೆ ಮಾಡುವುದಾಗಿ ಹೇಳುತ್ತಿದ್ದರೂ ಅದು ಸಮರ್ಪಕವಾಗಿ ನಡೆಯುತ್ತಿಲ್ಲ. ಚಿಕೂನ್ ಗುನ್ಯಾ ಇದೆಯೆಂಬ ಧೃಡೀಕರಣ ದೊರೆತ ಬಿ.ಪಿ.ಎಲ್ ಕಾರ್ಡುದಾರರಿಗೆ ಮಾತ್ರ 10 ಕೆ.ಜಿ ಅಕ್ಕಿ ನೀಡಲಾಗುತ್ತಿದೆಯಾದರೂ ಅದಕ್ಕೂ ಸಾವಿರಾರು ಕುಂಟು ನೆಪಗಳನ್ನೊಡ್ಡಿ ವಂಚಿಸಲಾಗುತ್ತಿದೆ. ಈಗಾಗಲೇ ಉಸ್ತುವಾರಿ ಸಚಿವರ ಹೇಳಿಕೆಯಂತೆ ಜಿಲ್ಲೆಯಲ್ಲಿ 919 ಕ್ವಿಂಟಲ್ ಅಕ್ಕಿ ವಿತರಿಸಲಾಗಿದ್ದು, ಇನ್ನೂ 12,000 ಕ್ವಿಂಟಲ್ ಅಕ್ಕಿಯ ಅವಶ್ಯಕತೆ ಇದೆಯಂತೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಬೆಳ್ತಂಗಡಿ ತಾಲೂಕಿನ ಸುಮಾರು 30,000 ರೋಗಪೀಡಿತರಲ್ಲಿ ಕೇವಲ 3 ಮಂದಿಯ ಹೆಸರನ್ನು ಜಿಲ್ಲಾಧಿಕಾರಿಯವರಿಗೆ ಅಕ್ಕಿ ಮಂಜೂರುಗೊಳಿಸಲು ಕಳುಹಿಸಲಾಗಿದ್ದು, ಅಲ್ಲಿಂದ ವರದಿ ಬಂದ ನಂತರ ಎಷ್ಟು ಮಂದಿಗೆ ಅಕ್ಕಿ ಸಿಗುತ್ತದೆ ಎಂಬುವುದು ತೀರ್ಮಾನವಾಗಲಿದೆ. ಹಾಗಾದರೆ ರೋಗಪೀಡಿತರ ಅಕ್ಕಿ ಯಾರಿಗೆ ವಿತರಣೆಯಾಗಲಿದೆ ಎಂಬುವುದನ್ನು ಬಹಿರಂಗಪಡಿಸಬೇಕಾಗಿದೆ. ಒಂದು ವಾರದಿಂದ ತಿಂಗಳುಗಳ ಕಾಲ ನರಳುವಂತಾದರೂ ಅವರಿಗೆ ಸಮರ್ಪಕವಾದ ಪರಿಹಾರ ನೀಡಲು ರಾಜ್ಯ ಸರ್ಕಾರ ವಿಫಲವಾಗಿದೆ. ಒಟ್ಟಿನಲ್ಲಿ ರೋಗಪೀಡಿತರಿಗೆ ಅಕ್ಕಿ ವಿತರಣೆ ಎಂಬುವುದು ಬರೀ ನಾಟಕವೆಂಬುವುದು ರೋಗಪೀಡಿತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಆಸ್ಪತ್ರೆಗಳ ಅವ್ಯವಸ್ಥೆ:

ದ.ಕ. ಜಿಲ್ಲೆಯನ್ನು ಆಕ್ರಮಿಸಿರುವ ಚಿಕೂನ್ ಗುನ್ಯಾ ಅತ್ಯಂತ ವೇಗವಾಗಿ ತನ್ನ ಕರಾಳ ಹಸ್ತವನ್ನು ಗ್ರಾಮೀಣ ಪ್ರದೇಶಗಳತ್ತ ಚಾಚುತ್ತಿದೆ. ನಿರಂತರವಾಗಿ ಹರಡುತ್ತಿರುವ ರೋಗದ ವೇಗವನ್ನು ನಿಯಂತ್ರಿಸಬೇಕಾದ ಆರೋಗ್ಯ ಇಲಾಖೆ ಮಾತ್ರ ತನ್ನ ಒಡಲಲ್ಲಿ ಅವ್ಯವಸ್ಥೆಯನ್ನು ತುಂಬಿಕೊಂಡು ನಿಂತಿದೆ. ಅಗತ್ಯ ಸಿಬ್ಬಂದಿಗಳು, ವೈದ್ಯರುಗಳು, ಮೂಲಭೂತ, ಸೌಲಭ್ಯಗಳು ಅಗತ್ಯವಾದ ಔಷಧಿಗಳು ಇಲ್ಲದೆ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳು ಮೂಕಪ್ರೇಕ್ಷಕರಂತೆ ದಿನನಿತ್ಯ ಹರಿದುಬರುವ ಸಾವಿರಾರು ರೋಗಿಗಳಿಗೆ ಅಗತ್ಯ ಚಿಕಿತ್ಸೆಯನ್ನು ನೀಡಲು ಪರದಾಡುವಂತಾಗಿದೆ.

ಸರ್ಕಾರಿ ಆಸ್ಪತ್ರೆಗಳು ಸಿಬ್ಬಂದಿಗಳ ಕೊರತೆಯಿಂದಾಗಿ ಒಬ್ಬ ಸಿಬ್ಬಂದಿ ನಾಲ್ಕೈದು ಕೆಲಸಗಳನ್ನು ಮಾಡಬೇಕಾದ ಪರಿಸ್ಥಿತಿಯ ನಡುವೆಯೂ ರೋಗಿಗಳನ್ನು ಉಪಚರಿಸುತ್ತಿರುವುದು ವಾಸ್ತವ ವಿಷಯವಾದರೂ ಸರ್ಕಾರ ಮಾತ್ರ ಈ ಬಗ್ಗೆ ಕ್ಯಾರೆ ಅನ್ನದಿರುವುದು ರೋಗಿಗಳನ್ನು ತೀವ್ರ ಆಕ್ರೋಶಿತರನ್ನಾಗಿಸಿದೆ. ಇದರೊಂದಿಗೆ ವೈಯಕ್ತಿಕ ದ್ವೇಷ ಸಾಧನೆಗಾಗಿ ನೂತನ ಸಚಿವರು ಇದ್ದ ಸಿಬ್ಬಂದಿಗಳನ್ನು, ವೈದ್ಯರುಗಳನ್ನು ವರ್ಗಾವಣೆ, ಅವಮಾನತು ಮಾಡುವ ಮೂಲಕ ಸರ್ಕಾರ ರೋಗಿಗಳಿಗೆ ಬಿಸಿ ತುಪ್ಪವಾಗುತ್ತಿರುವುದು ವಿಪರ್ಯಾಸ.

ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿಗಳ



ಆಸ್ಪತ್ರೆಗೆ ರೋಗಿಗಳ ದಂಡು

ಕೊರತೆಯನ್ನು ತುಂಬುವಲ್ಲಿ ಯಾವುದೇ ಪ್ರಯತ್ನ ನಡೆಸದೇ, ಇದ್ದ ಸಿಬ್ಬಂದಿಗಳ ಮೇಲೆಯೇ ಸವಾರಿ ನಡೆಸುತ್ತಿರುವ ಮಧ್ಯೆ ಪ್ರತಿ ಸರ್ಕಾರಿ ಕೇಂದ್ರಗಳಿಗೆ ಸಂಚಾರಿ ಚಿಕಿತ್ಸಾ ಘಟಕಗಳನ್ನು ನೀಡುವುದಾಗಿ ಹೇಳಿರುವ ಉಸ್ತುವಾರಿ ಸಚಿವ ಕೃಷ್ಣಪಾಲೇಮಾರ್ ತನ್ನ ಮಾತಿಗೆ ತಪ್ಪುವ ಮೂಲಕ ರೋಗಿಗಳ ಕಷ್ಟಗಳೊಂದಿಗೆ ಚೆಲ್ಲಾಟವಾಡಲು ಪ್ರಾರಂಭಿಸಿದ್ದಾರೆ. ಜಿಲ್ಲೆಯ ಒಂದೆರಡು ಕಡೆ ಸಂಚಾರಿ ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸಿದ್ದೇ ದೊಡ್ಡ ಸಾಧನೆಯೆಂಬಂತೆ ಬಿಂಬಿಸುತ್ತಿರುವ ಸಚಿವರು ಬೇರೆ ಯಾವುದೇ ವಿಷಯದ ಬಗ್ಗೆ ತಲೆ ಕೆಡಿಸಿಕೊಂಡವರಲ್ಲ. ಈ ಮಧ್ಯೆ ಈ ರೋಗ ಪೀಡಿತರ ನೆರವಿಗೆ ಜಿಲ್ಲೆಯ ವಿವಿಧ ಸ್ವಯಂಸೇವಾ ಸಂಸ್ಥೆಗಳು, ನರ್ಸಿಂಗ್ ಕಾಲೇಜ್ ವಿದ್ಯಾರ್ಥಿಗಳು ಎಲ್ಲಾ ರೀತಿಯ ಸಹಕಾರ ನೀಡಿ ದುಡಿಯುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಪ್ರಚಾರಕ್ಕಾಗಿ ಆಸ್ಪತ್ರೆ ಭೇಟಿಯಲ್ಲಿ ಸಚಿವರುಗಳು

ಈ ಮಧ್ಯೆ ರಾಜ್ಯ ಸರ್ಕಾರದ ನೂತನ ಸಚಿವರುಗಳಾದ ಆರೋಗ್ಯ ಸಚಿವ, ಬಳ್ಳಾರಿಯ ಗಣಿ ಧನಿ ಶ್ರೀರಾಮುಲು ಸಚಿವರಾಗಿ ಆಯ್ಕೆಯಾದ ಬಳಿಕ ಸುಬ್ರಹ್ಮಣ್ಯ ದೇವಾಲಯಕ್ಕೆ ಭೇಟಿ ನೀಡಿ ಸಮೀಪವಿದ್ದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪತ್ರಕರ್ತರಿಂದ ಫೋಟೋ ಕ್ಲಿಕ್ಕಿಸಿಕೊಂಡು ಮತ್ತೆ ತನ್ನ ದಾರಿ ಹಿಡಿದರು. ಆದರೂ ಕೂಡ ಜನತೆಯ ಜೀವ ಹಿಂಡುವ ಈ ಕಾಯಿಲೆ ಬಗ್ಗೆ ಇನ್ನೂ ತಲೆ ಕೆಡಿಸಿಕೊಂಡಿಲ್ಲ.

ಆದರೆ ಇಂತಹ ಆಸ್ಪತ್ರೆ ಭೇಟಿಯಿಂದ


ವೈರಸ್ ಹೊತ್ತ ಸೊಳ್ಳೆ

ರೋಗಿಗಳಿಗೆ ಪ್ರಯೋಜನಗಿಂತ ತೊಂದರೆಯೇ ಹೆಚ್ಚು. ಆಸ್ಪತ್ರೆಗಳ ಮೂಲಭೂತ ಸೌಕರ್ಯಗಳಿಗೆ ಆಸ್ಪತ್ರೆಯ ಸಿಬ್ಬಂದಿಗಳನ್ನು ಗುರಿಯಾಗಿಸುವ ಇವರು ಸರ್ಕಾರದ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ. ಸಚಿವರು ಭೇಟಿ ನೀಡುವ ವೇಳೆ ರೋಗ ಪೀಡಿತರ ಕುಂದುಕೊರತೆಗಳನ್ನು ಕೇಳದೆ "ಎಂದ... ಪಣಂಬೂರಿಗೆ ಹೋದಂತೆ" ವರ್ತಿಸುತ್ತಿದ್ದಾರೆ.

ಆಡಳಿತ ಪಕ್ಷವನ್ನು ಎಚ್ಚರಿಸಬೇಕಾದ ಪ್ರತಿಪಕ್ಷದ ಸ್ಥಾನದಲ್ಲಿರುವ ಕಾಂಗ್ರೆಸ್ ಪಕ್ಷ ಮಾತ್ರ ಇದೆಲ್ಲದರ ಪರಿವೇ ಇಲ್ಲದಂತೆ ವರ್ತಿಸುತ್ತಿದೆ. ಜಿಲ್ಲೆಯ ಮಟ್ಟಿಗಂತೂ ಜನಪ್ರತಿನಿಧಿಗಳೆನ್ನಿಸಿಕೊಂಡವರು ಜನತೆಯಿಂದ ದೂರ ಸರಿದವರಂತೆ ವರ್ತಿಸುತ್ತಿದ್ದಾರೆ. ಖಾಸಗೀ ಆಸ್ಪತ್ರೆಗಳಂತೂ ಹಣ ಮಾಡುವ ದಂಧೆಯಾಗಿ ಪರಿವರ್ತನೆಯಾಗಿದೆ. ಸರ್ಕಾರದ ಪರಿಹಾರ ಎಲ್ಲೋ ಹೋಗಿ ಸೇರುತ್ತಿದೆ. ಈ ಎಲ್ಲದರ ಮಧ್ಯೆ ರೋಗ ಮಾತ್ರ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಿದೆ. ರಾಜ್ಯದಲ್ಲಿ ಆಡಳಿತಕ್ಕೆ ಅಡಿಗಲ್ಲು ಹಾಕಿರುವ "ಜನಪರ"? ಸರ್ಕಾರ ಮಾತ್ರ ಜನತೆಯಿಂದ ದೂರ ಸರಿದು ತಮ್ಮ ನಿಜ ಬಣ್ಣವನ್ನು ಬಯಲು ಮಾಡುತ್ತಿದೆ! ಹೋಮ ಯಜ್ಞದಿಂದ ರೋಗ ಶಮನಗೊಳ್ಳದ್ದು, ಎಂಬುವುದು ಈ ಸರ್ಕಾರಕ್ಕೆ ಹೇಳುವವರಾರು ಎಂಬುವುದೇ ಡಾಲರ್ ಪ್ರಶ್ನೆ.

– ಕಾವ್ಯ ಬೆಳ್ತಂಗಡಿ

ಜಮ್ಮು : ಕೋಮು ಧ್ರುವೀಕರಣದ ಹೊಸ ಅಜೆಂಡಾ

ಬಿಜೆಪಿ/ಆರೆಸ್ಸೆಸ್ ಮತ್ತೆ ಕೋಮುಧ್ರುವೀಕರಣದ ಹೊಸ ಧಾಳಿಗಳನ್ನು ಆರಂಭಿಸಿವೆ. ಸಾರ್ವತ್ರಿಕ ಚುನಾವಣೆಗಳು ಅವಧಿಗೆ ಮುನ್ನವೇ ನಡೆಯಬಹುದೆಂದು ಅದಕ್ಕೆ ತಯ್ಯಾರಿಯಾಗಿ ಈ ಧಾಳಿಗಳು ಎಂಬುದು ಸ್ಪಷ್ಟ. ಜಮ್ಮು-ಕಾಶ್ಮೀರದ ಸರಕಾರ ಶ್ರೀ ಅಮರನಾಥ ಕ್ಷೇತ್ರ ಮಂಡಳಿಗೆ ಭೂಮಿ ನೀಡಿ ಹೊರಡಿಸಿದ್ದ ಆದೇಶವನ್ನು ರದ್ದು ಪಡಿಸಿದ್ದು ಅವರಿಗೆ ಒಂದು ಹೊಸ ಅವಕಾಶವಾಗಿ ಕಂಡಿದೆ. ಜುಲೈ 3ರಂದು 'ಭಾರತ ಬಂದ್' ಹಾಗೂ ಜುಲೈ 4ರಿಂದ 11 ರವರೆಗೆ ಪ್ರತಿಭಟನೆಗಳಿಗೂ ಅವರು ಕರೆ ನೀಡಿದ್ದಾರೆ. ಸಂಘ ಪರಿವಾರದ ಎಲ್ಲ ಅಂಗಸಂಘಟನೆಗಳು, ವಿಶ್ವ ಹಿಂದೂ ಪರಿಷತ್ ಇತ್ಯಾದಿ ಇವಕ್ಕೆ ಬೆಂಬಲ ನೀಡಿವೆ.

ಎಂದಿನಂತೆ ಧಾರ್ಮಿಕ ಭಾವನೆಗಳನ್ನು ಬಡಿದೆಬ್ಬಿಸುವ ಕೃತ್ಯಕ್ಕೆ ಅವರು ಇಳಿದಿದ್ದಾರೆ. ಮಂಡಳಿಗೆ ಜಮೀನು ನೀಡಿದ್ದನ್ನು ರದ್ದು ಮಾಡಿರುವುದು 'ಹಿಂದು-ವಿರೋಧಿ' ಕ್ರಮ ಎಂದು ಬಿಂಬಿಸಲು ಅವರು ಶತಪ್ರಯತ್ನ ನಡೆಸಿದ್ದಾರೆ. ಹಜ್ ಯಾತ್ರೆಗೆ ಮುಸ್ಲಿಮರಿಗೆ ಸಬ್ಸಿಡಿಗಳನ್ನು, ಸೌಕರ್ಯಗಳನ್ನು ಒದಗಿಸುವುದಾದರೆ ಅಮರನಾಥ ಯಾತ್ರೆಗೆ ಯಾಕಿಲ್ಲ ಎಂಬ ವಾದ ಹೂಡಲಾಗುತ್ತದೆ. ಇದು ಹಿಟ್ಲರನ ಬಂಟ ಗೋಬೆಲ್ಸ್ ಅನುಸರಿಸಿದ್ದ ಸುಳ್ಳುಗಳನ್ನು ಮತ್ತೆ-ಮತ್ತೆ ಹೇಳಿ ಅದು ಸತ್ಯವೆಂದನಿಸುವಂತೆ ಮಾಡುವ ತಂತ್ರವಲ್ಲದೆ ಬೇರೇನೂ ಅಲ್ಲ (ಈ ಬಗ್ಗೆ 'ಜನಶಕ್ತಿ'ಯ ಕಳೆದ ವಾರದ ಸಂಚಿಕೆ ನೋಡಿ).

ಮತ್ತೊಂದು ಚುನಾವಣಾ ಪ್ರಶ್ನೆ?

ಅಮರನಾಥ ಯಾತ್ರೆ ಕಾಶ್ಮೀರದ ಧಾರ್ಮಿಕ ಸೌಹಾರ್ದ ಪರಂಪರೆಯ ಒಂದು ಭಾಗ. ಬಟಗುಂಡದ ಮುಸ್ಲಿಂ ಕುಟುಂಬಗಳೇ ಪವಿತ್ರ ಅಮರನಾಥ ಗುಹೆಯ ರಕ್ಷಕರಂತಿದ್ದಾರೆ. ವಾರ್ಷಿಕ ಯಾತ್ರೆಗೆ ಸೌಲಭ್ಯಗಳನ್ನು ಸಿದ್ಧಪಡಿಸುವವರು ಇವರೇ. ಆದರೆ ದುರದೃಷ್ಟವಶಾತ್, ಕಳೆದ ಕೆಲವು ವರ್ಷಗಳಿಂದ ವಾರ್ಷಿಕ ಅಮರನಾಥ ಯಾತ್ರೆಯನ್ನು ಕೋಮುವಾದಿ ಶಕ್ತಿಗಳು ತಮ್ಮ ಸಂಕುಚಿತ ರಾಜಕೀಯದ ಇನ್ನೊಂದು ದಾಳವನ್ನಾಗಿ ಮಾಡಿದ್ದಾರೆ, ಯಾತ್ರೆಯ ವೇಳೆಯಲ್ಲಿ ಉದ್ರೇಕಕಾರಿ ಘೋಷಣೆಗಳನ್ನು ಎತ್ತಿ ಭಾವೋದ್ರೇಕ ಹರಡಿಸುವ ಹುನ್ನಾರ ನಡೆಸುತ್ತಾರೆ.

ಪ್ರಧಾನಿ ಪಟ್ಟದ ನಿರೀಕ್ಷೆಯಲ್ಲಿರುವ ಲಾಲ ಕೃಷ್ಣ ಅಡ್ವಾಣಿಯವರಂತೂ ರಾಮಸೇತು ವಿವಾದ ಮತ್ತು ಅಫ್ಜಲ್ ಗುರು ನೇಣಿನ ಪ್ರಶ್ನೆಯ ನಂತರ ಈ ಅಮರನಾಥ ಯಾತ್ರೆ ತಮ್ಮ ಮೂರನೇ ಚುನಾವಣಾ ವಿಷಯವಾಗುತ್ತದೆ ಎಂದು ಸ್ಪಷ್ಟ ಪಡಿಸಿದ್ದಾರೆ.

ಈಗಾಗಲೇ ನಾವು ಗಮನಿಸಿರುವಂತೆ, ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ತನ್ನ ಕಟ್ಟಾ ಕೋಮುವಾದಿ ಅಜೆಂಡಾದ ವಿಷಯಗಳಾದ ಅಯೋಧ್ಯೆಯಲ್ಲಿ ರಾಮದೇವಸ್ಥಾನ, ಸಮಾನ ನಾಗರಿಕ ಸಂಹಿತೆ ಮತ್ತು 370ನೆ ಕಲಮಿನ ರದ್ದತಿಯ ಬೇಡಿಕೆಗಳನ್ನು ಪುನರುಜ್ಜೀವನಗೊಳಿಸಿದೆ. ಸಾಲದೆಂಬಂತೆ ಬಿಜೆಪಿಯ ಈಗಿನ ಅಧ್ಯಕ್ಷರು ಸಂವಿಧಾನದ ಹಿಂದೀ ಭಾಷಾಂತರದಲ್ಲಿ ಸೆಕ್ಯುಲರಿಸಂ ಎಂಬ ಪದಕ್ಕೆ 'ಧರ್ಮನಿರಪೇಕ್ಷತೆ' ಎಂದಿರುವುದನ್ನು 'ಪಂಥ ನಿರಪೇಕ್ಷತೆ' ಎಂದು ಬದಲಿಸಬೇಕೆಂದು ಕರೆ ನೀಡಿದ್ದಾರೆ.

ಹೊಳೆಯುತ್ತಿರುವ ಭಾರತದ ಘೋಷಣೆಯನ್ನು ಜನ ತಿರಸ್ಕರಿಸಿದರೂ ಮತ್ತೆ ಬಿಜೆಪಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಆಸೆ ಚಿಗುರಲು ಕಾರಣವೇನು? ಕೇಂದ್ರದಲ್ಲಿ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಗೊಳಿಸುವ ಮತ್ತು ಜನಗಳ ಬದುಕನ್ನು ಉತ್ತಮಗೊಳಿಸುವ ಅವಕಾಶಗಳಿದ್ದರೂ ಅವನ್ನು ವ್ಯರ್ಥಗೊಳಿಸಿದ ಯುಪಿಎ ಸರಕಾರದ ವಿಫಲತೆಗಳೇ ಇದಕ್ಕೆ ಕಾರಣ. ಯುಪಿಎ ಸರಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಇರದ ಭಾರತ-ಅಮೆರಿಕ ಪರಮಾಣು ಒಪ್ಪಂದದಂತಹ ಪ್ರಶ್ನೆಗಳ ಬಗ್ಗೆ ಹಾತೊರೆಯುವ ಬದಲು, ಆ ಕಾರ್ಯಕ್ರಮದಲ್ಲಿ ನೀಡಿದ ಭರವಸೆಗಳ ಅನುಷ್ಠಾನಕ್ಕೆ ಈಗಲಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾಗಿದೆ

ಮೂರು 'ಭ'ಗಳ ನಂತರ ಈಗ ಮೂರು 'ಇನ್'ಗಳು

ಪದಗಳ ಕಸರತ್ತಿಗೆ (ಕು)ಖ್ಯಾತವಾಗಿರುವ ಬಿಜೆಪಿ ಮುಖಂಡರು 1998ರ ಚುನಾವಣಾ ಪ್ರಚಾರದಲ್ಲಿ ಮೂರು 'ಭ'ಗಳ ನಿವಾರಣೆಯ ಘೋಷಣೆಯೆತ್ತಿದ್ದರು-ಭಯ, ಭೂಖ್(ಹಸಿವು) ಹಾಗೂ ಭ್ರಷ್ಟಾಚಾರಗಳ ನಿವಾರಣೆ! ಈ ಬಾರಿ ಅದು ಇಂಗ್ಲೀಷಿಗೆ ಮೊರೆ ಹೋಗಿದೆ- ಇನ್‌ಫ್ಲೇಶನ್ (ಹಣದುಬ್ಬರ), ಇನ್‌ಟರ್ನಲ್ ಸೆಕ್ಯೂರಿಟಿ(ಆಂತರಿಕ ಭದ್ರತೆ) ಮತ್ತು ಇನ್‌ಕಾಂಪಿಟೆನ್ಸ್ (ಅಸಮರ್ಥತತೆ). ಮೂರು 'ಇನ್'ಗಳು!

ಆದರೆ ಹಿಂದಿನ ಮೂರು 'ಭ'ಗಳ ಗತಿಯೇನಾಯಿತು ಎಂದು ನಮಗೆ ತಿಳಿದಿದೆ. 2002ರ ಗುಜರಾತ್ ಭಯ ನಿವಾರಣೆಯೆಂದರೇನು ಎಂಬುದಕ್ಕೆ ಸಾಕ್ಷಿಯಾಯಿತು; ರೈತರ ಆತ್ಮ ಹತ್ಯೆಗಳ ಸರಮಾಲೆ ಶುರುವಾದದ್ದೇ ವಾಜಪೆಯಿ ಸರಕಾರದ ಆಳ್ವಿಕೆಯಲ್ಲಿ- ನರಸಿಂರಾವ್ ಸರಕಾರ ಆರಂಭಿಸಿದ 'ಉದಾರೀಕರಣ'ದ 'ಮೊದಲ ಘಟ್ಟ' ಮತ್ತು ವಾಜಪೆಯಿ ಸರಕಾರ ಅದನ್ನು ತೀವ್ರಗೊಳಿಸಿದ 'ಎರಡನೇ ಘಟ್ಟ' ದ ದುಷ್ಫಲ ಅದು. ಭೂಖ್ ಅಥವಾ ಹಸಿವಿನ ನಿವಾರಣೆಯ ನಿಜವಾದ ಅರ್ಥಏನು ಎಂಬುದನ್ನು ಇದು ತೋರಿಸಿಕೊಟ್ಟಿತು. ಇನ್ನು ಭ್ರಷ್ಟಾಚಾರದ ನಿವಾರಣೆಯ ವಿಷಯದಲ್ಲಿ ಹಗರಣಗಳ ಸರದಿಗೆ ಮುಕುಟಪ್ರಾಯವಾದ ತೆಹಲ್ಕ ಬಯಲಿಗೆಳೆದ ಸಂಗತಿಗಳನ್ನು ನೆನಪಿಸಿಕೊಂಡರೇ ಸಾಕು!

ಈಗ ಇಂಗ್ಲೀಷಿನ i (ಐ) ಅಥವ 'ಇನ್' ಗತಿಯೂ ಅದೇ ಆದರೆ ಆಶ್ಚರ್ಯವೇನಿಲ್ಲ. ವಾಜಪೇಯಿ ಸರಕಾರದ ಆರು ವರ್ಷಗಳ ಆಳ್ವಿಕೆಯಲ್ಲಿ ಪೆಟ್ರೋಲ್ ಬೆಲೆಗಳನ್ನು 33 ಬಾರಿ ಏರಿಸಲಾಯಿತು ಎಂಬುದನ್ನು ಮರೆಯಲು ಸಾಧ್ಯವೇ? ಅದೂ ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ಈಗಿನಷ್ಟು ಕೋಲಾಹಲವಿಲ್ಲದಿದ್ದಾಗ! ಇದು ಇನ್‌ಫ್ಲೇಶನ್ ಅಥವಾ ಹಣದುಬ್ಬರದ ವಿಷಯವಾಯ್ತು. ಇನ್‌ಟರ್ನಲ್ ಸೆಕ್ಯೂರಿಟಿ ಅಥವಾ ಆಂತರಿಕ ಭದ್ರತೆಯ ವಿಷಯವನ್ನೇ ತಗೊಳ್ಳಿ. ಪೋಟಾ ಇದ್ದರೂ ಸಂಸತ್ತಿನ ಮೇಲೆ ಧಾಳಿ, ಕೆಂಪುಕೋಟೆಯ ಮೇಲೆ ಧಾಳಿ, ಅಕ್ಷರಧಾಮ ದೇವಸ್ಥಾನದ ಮೇಲೆ ಧಾಳಿ, ಎರಡು ಬಾರಿ ರಘುನಾಥ ದೇವಾಲಯದ ಮೇಲೆ ಧಾಳಿಗಳನ್ನು ತಡೆಯಲು ಅವರಿಗಾಗಲಿಲ್ಲ, ಇನ್ನು ಅವರ ಇನ್‌ಕಾಂಪಿಟೆನ್ಸ್ ಅಥವಾ ಅಸಮರ್ಥತತೆಗೆ ಕಾರ್ಗಿಲ್ ಅತಿಕ್ರಮಣವೇ ಸಾಕ್ಷಿ. ಗಡಿಗಳಲ್ಲಿ ನುಸುಳಿಕೆಯನ್ನು ಗಮನಿಸುವಲ್ಲಿಯೂ ವಿಫಲವಾದ ಸರಕಾರ ನಂತರ ಪೂರ್ಣ ಪ್ರಮಾಣದ ಯುದ್ಧವನ್ನೇ ಮಾಡಬೇಕಾಯಿತು.



ವಿಪರ್ಯಾಸ

ಹೀಗಿದ್ದರೂ, ಬಿಜೆಪಿಯ 'ಹೊಳೆಯುತ್ತಿರುವ ಭಾರತ'ದ ಘೋಷಣೆಯನ್ನು ಜನ ತಿರಸ್ಕರಿಸಿದರೂ ಮತ್ತೆ ಅದರಲ್ಲಿ ಅಧಿಕಾರಕ್ಕೆ ಬರುವ ಆಸೆ ಚಿಗುರಲು ಕಾರಣವೇನು? ಕೇಂದ್ರದಲ್ಲಿ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಗೊಳಿಸುವ ಮತ್ತು ಜನಗಳ ಬದುಕನ್ನು ಉತ್ತಮಗೊಳಿಸುವ ಅವಕಾಶಗಳಿದ್ದರೂ ಅವನ್ನು ವ್ಯರ್ಥಗೊಳಿಸಿದ ಯುಪಿಎ ಸರಕಾರದ ವಿಫಲತೆಗಳೇ ಇದಕ್ಕೆ ಕಾರಣ.

ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಹಲವಾರು ಭರವಸೆಗಳು ಕಾಗದದ ಮೇಲೆಯೇ ಉಳಿದಿವೆ. ಎಡಪಕ್ಷಗಳ ಒತ್ತಡದಿಂದ ಜಾರಿಗೆ ಬಂದ ಕ್ರಮಗಳಲ್ಲಿಯೂ ಅಧಿಕಾರಶಾಹಿ ಅಡೆ-ತಡೆಗಳು ಮತ್ತು ಭ್ರಷ್ಟಾಚಾರಗಳಿಂದಾಗಿ ಅವುಗಳ ಫಲಗಳು ಜನಸಾಮಾನ್ಯರಿಗೆ ತಲುಪದೇ ಹೋದವು. ಈ ಯುಪಿಎ ಸರಕಾರ ಎಡಪಕ್ಷಗಳ ಬೆಂಬಲದಿಂದ ರಚನೆಗೊಂಡದ್ದು ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರಕಾರ ಇರಬೇಕು ಎಂದು . ಆದರೆ ಅದೇ ಸರಕಾರ ತನ್ನ ತಪ್ಪು ನೀತಿಗಳಿಂದಾಗಿ ಅವೇ ಕೋಮುವಾದಿ ಶಕ್ತಿಗಳಿಗೆ ಅವಕಾಶಗಳನ್ನು ತೆರೆದು ಕೊಡುತ್ತಿದೆ. ಎಂತಹ ವಿಪರ್ಯಾಸ!

ಯುಪಿಎ ಸರಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಇರದ ಭಾರತ- ಅಮೆರಿಕ ಪರಮಾಣು ಒಪ್ಪಂದದಂತಹ ಪ್ರಶ್ನೆಗಳ ಬಗ್ಗೆ ಹಾತೊರೆಯುವ ಬದಲು, ಆ ಕಾರ್ಯಕ್ರಮದಲ್ಲಿ ನೀಡಿದ ಭರವಸೆಗಳ ಅನುಷ್ಠಾನಕ್ಕೆ ಈಗಲಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾಗಿದೆ ಎಂದು ಆಗ್ರಹಿಸಲು ಎಡಪಕ್ಷಗಳಿಗೆ ಎಲ್ಲ ಹಕ್ಕು ಇದೆ. ಏಕೆಂದರೆ ಎಡಪಕ್ಷಗಳು ಈ ಯುಪಿಎ ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿರುವುದು ಈ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ. ಅದನ್ನು ಉಲ್ಲಂಘಿಸಿದರೆ ಎಡಪಕ್ಷಗಳು ಬೆಂಬಲ ಮುಂದುವರೆಸುವುದಿಲ್ಲ ಎಂದು ಹೇಳುವುದರಲ್ಲಿ ತಪ್ಪೇನಿದೆ?

ಅಣು ಒಪ್ಪಂದ - ಒತ್ತಡ ಎಲ್ಲಿಂದ ?

ಏನಾದರೂ ಸರಿ ಅಮೆರಿಕಾದೊಂದಿಗಿನ ಅಣು ಒಪ್ಪಂದವನ್ನು 'ಕೈ' ಬಿಡಲಾರೆ ಎನ್ನುತ್ತಿದೆ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ. ಈ ಬಗ್ಗೆ ಸರ್ಕಾರಕ್ಕೆ ಯಾಕಿಂಥ ತುಡಿತ. ಕಠೋರ ಬದ್ಧತೆ. ಒಪ್ಪಂದದ ಪ್ರಶ್ನೆ ಈಗೇಕೆ ಮತ್ತೆ ಮುಂಚೂಣಿಗೆ ಬಂದಿದೆ?

ಬಾಲಕೃಷ್ಣ ಶೆಟ್ಟಿ

ನವೆಂಬರ್ 16, 2007ರಂದು ಹೆಚ್ಚು ಕಡಿಮೆ ನೆನೆಗುದಿಗೆ ತಳ್ಳಲಾಗಿದ್ದ ಭಾರತ-ಅಮೇರಿಕಾ ಪರಮಾಣು ಒಪ್ಪಂದವನ್ನು ಮನಮೋಹನಸಿಂಗ್ ಸರ್ಕಾರ ಮತ್ತೆ ಹೊರತೆಗೆದು ಗೊಂದಲ ಎಬ್ಬಿಸುತ್ತಿರುವುದೇಕೆ? ಇಲ್ಲಿ ಎರಡು ಪ್ರಮುಖ ಕಾರಣಗಳು ಎದ್ದುಕಾಣುತ್ತಿವೆ.

1. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಳದ ನೆಪದಲ್ಲಿ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೆಲೆ ಹೆಚ್ಚಳದ ಇಂಗಿತ ವ್ಯಕ್ತಪಡಿಸಿದಾಗ ಎಡಪಕ್ಷಗಳು ಬೆಲೆ ಏರಿಕೆಗೆ ಕಾರಣವಾಗತ್ತದೆ ಎಂದು ತೀವ್ರ ವಿರೋಧ ಮಾಡಿದುದು ಮಾತ್ರವಲ್ಲದೆ, ಜನರಿಗೆ ಹೊರೆಯಾಗದ ಪರ್ಯಾಯ ಸೂಚನೆಗಳನ್ನು ನೀಡಿದ್ದವು. ಇದನ್ನು ಗಣನೆಗೆ ತೆಗೆದುಕೊಳ್ಳದ ಕೇಂದ್ರ ಸರ್ಕಾರ ಪೆಟ್ರೋಲ್ ಲೀಟರಿಗೆ 5 ರೂ. ಡೀಸೆಲ್ ಲೀಟರಿಗೆ 3 ರೂ ಹಾಗೂ ಅಡುಗೆ ಅನಿಲ ಸಿಲಿಂಡರ್‌ಗೆ ರೂ.50 ಹೆಚ್ಚಿಸಿದಾಗ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಮಾತ್ರವಲ್ಲದೆ ಆಂಧ್ರ, ತಮಿಳುನಾಡು, ಬಿಹಾರ್‌ಗಳಲ್ಲೂ ಬಂದ್ ನಡೆದಿದ್ದು, ದೇಶದಾದ್ಯಂತ ತೀವ್ರ ಪ್ರತಿಭಟನೆಗಳು ನಡೆದವು. ಜನರ ಅತೃಪ್ತಿಯನ್ನು ಪ್ರಜಾಸತ್ತಾತ್ಮಕ ಚಳುವಳಿಯತ್ತ ಕೊಂಡೊಯ್ಯುತ್ತಿದ್ದ ಎಡಪಕ್ಷಗಳ ಹೋರಾಟದ ದಿಕ್ಕನ್ನು ಬದಲಿಸಲು ಕರಾಳ ಅಣು ಒಪ್ಪಂದವನ್ನು ಬಳಸಿಕೊಳ್ಳಲಾಗುತ್ತಿದೆಯೇ?



2. ಜಗತ್ತಿನಲ್ಲಿ ತೈಲ ಹಾಗೂ ಆಹಾರದ ಬೆಲೆ ಹೆಚ್ಚಳಕ್ಕೆ ಚೀನಾ ಮತ್ತು ಭಾರತ ದೇಶಗಳ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿರುವುದು ಕಾರಣ ಎಂದು ಹಲುಬುವ, ಜಗತ್ತಿನಲ್ಲಿಯೇ ಅತ್ಯಂತ ಕಡಿಮೆ ಜನಪ್ರಿಯತೆ ಹೊಂದಿರುವ ಅಮೇರಿಕಾ ಅಧ್ಯಕ್ಷ ಜಾರ್ಜ್‌ಬುಶ್ ತನ್ನ ಕೊನೆಯ ಕಾಲದಲ್ಲಾದರೂ ಅಣು ಒಪ್ಪಂದಕ್ಕೆ ಸಹಿ ಹಾಕಿ ಜನಪ್ರಿಯತೆಯ ಕೊರೆತಕ್ಕೆ ತಡೆ ಹಾಕುವ ಪ್ರಯತ್ನ ಮಾಡುತ್ತಿದ್ದಾನೆ. ಆ ಮೂಲಕ ಅವನ ಹಿಂಬಾಲಕ ಉದ್ದಿಮೆದಾರರಿಗೆ ಅಣು ವ್ಯಾಪಾರ, ಮಿಲಿಟರಿ ವ್ಯಾಪಾರದ ಮೂಲಕ ಕೋಟ್ಯಾಂತರ ಡಾಲರುಗಳ ಲಾಭ ತರುವ ಆಕಾಂಕ್ಷೆ ಹೊಂದಿದ್ದಾನೆ.

ಪೆಟ್ರೋಲ್ ಉತ್ಪನ್ನಗಳ ಬೆಲೆ ಹೆಚ್ಚಳ 'ರಾಜಕೀಯ ಆತ್ಮಹತ್ಯೆ' ಎಂದು ಬಣ್ಣಿಸಿದ ಎಡಪಕ್ಷಗಳು ಇದರ ವಿರುದ್ಧ ದೀರ್ಘಕಾಲದ ಹೋರಾಟವನ್ನು ರೂಪಿಸಬೇಕೆಂದು ಬಯಸಿದ್ದವು. ನಿಜ ಹೇಳಬೇಕೆಂದರೆ ಕಳೆದ ಒಂದು ವರ್ಷದಿಂದೀಚೆಗೆ ಜನರನ್ನು ಬಾಧಿಸುತ್ತಿರುವ ಬೆಲೆ ಏರಿಕೆಯ ವಿರುದ್ಧ ಹೋರಾಟವನ್ನು ಪ್ರಮುಖ ರಾಷ್ಟ್ರೀಯ ಅಜೆಂಡಾವಾಗಿ ತರಲು ಎಡಪಕ್ಷಗಳಿಗೆ ಸಾಧ್ಯವಾಗಿತ್ತು.

ದೇಶದಾದ್ಯಂತ ಕಾರ್ಮಿಕ ಸಂಘಟನೆಗಳು ಆಗಸ್ಟ್ 20 ರಂದು ನಡೆಸಲು ಉದ್ದೇಶಿಸಿರುವ ಒಂದು ದಿನದ ಮುಷ್ಕರದ 6 ಪ್ರಮುಖ ಒತ್ತಾಯಗಳಲ್ಲಿ ಬೆಲೆ ಏರಿಕೆಯನ್ನು ನಿಗ್ರಹಿಸುವ ಆಗ್ರಹವೂ ಸೇರಿದೆ.

ಇನ್ನು ಅಣು ಒಪ್ಪಂದ ಕುರಿತಂತೆ, ಯುಪಿಎ-ಎಡಪಕ್ಷಗಳ ಸಮನ್ವಯ ಸಮಿತಿಯ 6ನೇ ಸಭೆಯು ನವೆಂಬರ್ 16,2007ರಂದು ಜರುಗಿದ್ದು, ಅಂತರಾಷ್ಟ್ರೀಯ ಅಣು ಇಂಧನ ಸಂಸ್ಥೆ(ಐಎಇಎ) ಗೆ ಹೋಗಲು ಅವಕಾಶ ನೀಡಬೇಕೆಂದು ಮನಮೋಹನ್‌ಸಿಂಗ್ ಸರ್ಕಾರ ಎಡಪಕ್ಷಗಳಿಗೆ ಮನವಿ ಮಾಡಿದಾಗ, ಸುರಕ್ಷತಾ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಅದರ ಪ್ರತಿಯನ್ನು ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಬೇಕು ಎಂದು ನಿರ್ಧರಿಸಿದ್ದರೂ ಆ ಒಪ್ಪಂದದ ಪ್ರತಿಯನ್ನು ತೋರಿಸಲು ಸರ್ಕಾರ ಸಿದ್ಧವಿಲ್ಲ. ಅಂದರೆ ಅದರಲ್ಲಿರುವ ಅಂಶಗಳು ದೇಶದ ಹಿತಕ್ಕೆ ಮಾರಕವಾಗಿರಲೇಬೇಕು.

ಕನಿಷ್ಠ ಸಾಮಾನ್ಯ ಕಾರ್ಯಕ್ರಮಕ್ಕೆ ಅಪಚಾರ :

2004ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಅಂಗೀಕರಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ(ಸಿಎಂಪಿ) ದಲ್ಲಿ ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಅನುಸರಿಸಬೇಕೆಂದೂ, ಬಹು ಧೃವೀಕರಣದತ್ತ ಹೆಜ್ಜೆ ಹಾಕಬೇಕೆಂದೂ ತಿಳುವಳಿಕೆಗೆ ಬರಲಾಗಿತ್ತು. ಇದಕ್ಕೆ ವಿರುದ್ದವಾಗಿ ಅಮೇರಿಕಾದ ಹೆಜ್ಜೆಗೆ ತಾಳ ಹಾಕುವ ಕೆಲಸ 2005 ಜೂನ್ ತಿಂಗಳಲ್ಲೇ ಆರಂಭವಾಗಿತ್ತು. ಅಂದು ಅಮೆರಿಕಾಕ್ಕೆ ತೆರಳಿದ್ದ ಪ್ರಧಾನಿ ಮನಮೋಹನ್‌ಸಿಂಗ್ ರವರು ಅಧ್ಯಕ್ಷ ಬುಶ್‌ರವರೊಂದಿಗೆ ರಕ್ಷಣಾ ಚೌಕಟ್ಟು ಒಪ್ಪಂದಕ್ಕೆ ಸಹಿಹಾಕುವ ಮೂಲಕ ಸ್ವತಂತ್ರ ವಿದೇಶಾಂಗ ಧೋರಣೆಗೆ ತಿಲಾಂಜಲಿ ಇಡುವ ಕೆಲಸವನ್ನು ಆರಂಭಿಸಿತು. ಅಂದರೆ ಅಮೇರಿಕಾಕ್ಕೆ ಕೇವಲ ಮಿತ್ರ ರಾಷ್ಟ್ರವಾಗದೆ ಅದರ ಕಿರಿಯ ಪಾಲುದಾರನಾಗುವ ಆಕಾಂಕ್ಷೆಗೆ ಬಲಿಯಾಗಿತ್ತು.

ಭಾರತದ ಜನಸಾಮಾನ್ಯರಿಗೆ ಇದು ಸ್ವಾವಲಂಬನೆ ಮತ್ತು ಸ್ವಾಭಿಮಾನದ ಮೇಲಿನ ಧಕ್ಕೆಯಾದರೆ, ಆಳುವ ವರ್ಗದ ಪಾಲುದಾರರಾದ ಉದ್ದಿಮೆದಾರರಿಗೆ, ಕೈಗಾರಿಕಾ ವರಿಷ್ಠರಿಗೆ ತಮ್ಮ ಸಿರಿವಂತಿಕೆ ಹೆಚ್ಚಿಸಿಕೊಂಡು ಜಗತ್ತಿನ ಅತ್ಯಂತ ದೊಡ್ಡ ಶ್ರೀಮಂತರಾಗುವ ಕನಸು ನನಸಾಯಿತು.

ಯುಪಿಎ ಹೊಸರಾಗ :

ಐಎಇಎ ಯೊಂದಿಗೆ ನಡೆದ ಮಾತುಕತೆಯ ನಂತರ 'ಸುರಕ್ಷತಾ ಒಪ್ಪಂದ' ದ ಕರಡು ಪ್ರತಿಯನ್ನು ತೋರಿಸದ ಯುಪಿಎ ಸರ್ಕಾರ 'ಐಎಇಎ ಒಪ್ಪಂದಕ್ಕೆ ಅವಕಾಶ ನೀಡಿ ಸಂಸತ್ತಿನಲ್ಲಿ ಚರ್ಚಿಸೋಣ' ಎಂದು ಹೊಸರಾಗ ಹಾಡುತ್ತಿದೆ. ಭಾರತ ದೇಶವು ಐಎಇಎ ನೊಂದಿಗೆ ಸುರಕ್ಷತಾ ಒಪ್ಪಂದಕ್ಕೆ ಸಹಿ ಹಾಕಿದ ಕೂಡಲೇ ಪರಮಾಣು ಪೂರೈಕೆದಾರ ದೇಶಗಳನ್ನು (Nuclear suppliers Group -NSG)ಸಂಪರ್ಕಿಸುವ ಅಮೇರಿಕಾ ಸರ್ಕಾರ, ಭಾರತ ಮತ್ತು ಇತರೆ ರಾಷ್ಟ್ರಗಳ ನಡುವೆ ಪರಮಾಣು ಪೂರೈಕೆಗೆ ಅನುಕೂಲವಾಗುವಂತೆ ಮಾರ್ಗದರ್ಶಕ ಸೂತ್ರಗಳನ್ನು ಕೈ ಬಿಡುವ ಕ್ರಮ ಕೈಗೊಳ್ಳುವುದು. ಸದ್ಯಕ್ಕೆ ಭಾರತವು ಪರಮಾಣು ಪೂರೈಕೆದಾರರ ಗುಂಪಿನ ಸದಸ್ಯ ರಾಷ್ಟ್ರವಾಗಿಲ್ಲವಾದ್ದರಿಂದ ಈ ರಾಷ್ಟ್ರಗಳ ನಡುವೆ ಪರಮಾಣು ಇಂಧನ ಮಾರಾಟವಾಗಬೇಕಾದರೆ ಮಾರ್ಗದರ್ಶಕ ಸೂತ್ರಗಳನ್ನು ಕೈಬಿಡುವ ಅವಶ್ಯಕತೆ ಇದೆ.

ಪರಮಾಣು ಒಪ್ಪಂದವನ್ನು ಅಂತಿಮಗೊಳಿಸಬೇಕೆಂಬ ತರಾತುರಿ ಯಲ್ಲಿರುವ ಅಮೇರಿಕಾವು ಐಎಇಎ ನೊಂದಿಗೆ ಸುರಕ್ಷತಾ ಒಪ್ಪಂದ ಆಗುವ ಮೊದಲೇ 'ಕರಡು ಮಾರ್ಗದರ್ಶನ ಸೂತ್ರಗಳನ್ನು' ಪರಮಾಣು ಪೂರೈಕೆದಾರರ ಗುಂಪಿಗೆ ಒದಗಿಸಿದೆ.

ಅಂದರೆ ಐಎಇಎ ನೊಂದಿಗೆ ಸುರಕ್ಷತಾ ಒಪ್ಪಂದವಾಗುತ್ತಿದ್ದಂತೆಯೇ ಎನ್‌ಎಸ್‌ಜಿಯಲ್ಲಿ ಆಗಬೇಕಾದ ಕ್ರಮಗಳನ್ನು ಮುಗಿಸಿ ಅಮೇರಿಕಾದ ಕಾಂಗ್ರೆಸ್‌ನಲ್ಲಿ ಒಪ್ಪಿಗೆ ಮುದ್ರೆಯನ್ನು ಪಡೆಯಬೇಕೆನ್ನುವುದು ಬುಶ್ ಸರ್ಕಾರದ ಬಯಕೆ.

ಪ್ರಧಾನಿಯ ಪ್ರತಿಷ್ಠೆ - ಜನತೆಯ ಹಿತ-ಯಾವುದೂ ಪ್ರಮುಖ?

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ಅಖಿಲ ಭಾರತ ವಕ್ತಾರರಲ್ಲೊಬ್ಬರಾದ ವೀರಪ್ಪಮೊಯಿಲಿಯವರು, 'ಭಾರತದ ಪ್ರಧಾನ ಮಂತ್ರಿಯ ಪ್ರತಿಷ್ಟೆ ಇದರಲ್ಲಿ (ಒಪ್ಪಂದದಲ್ಲಿ)ಅಡಗಿದೆ' ಎಂದಿದ್ದಾರೆ (ಫ್ರಂಟ್‌ಲೈನ್- 18.07.2008). ಇದಕ್ಕೆ ಭಾರತದ ಜನತೆ ನೀಡಬೇಕಾದ ಉತ್ತರವೆಂದರೆ, ಪ್ರಧಾನ ಮಂತ್ರಿಯ ವ್ಯಕ್ತಿಗತ ಪ್ರತಿಷ್ಠೆ ಪ್ರಮುಖವೂ ಅಥವಾ ಜನತೆಯ ಹಿತ ಮುಖ್ಯವೋ' ಎಂಬುದು. ಪ್ರಧಾನ ಮಂತ್ರಿಯವರ ಪ್ರತಿಷ್ಠೆಯನ್ನು ಉಳಿಸಬೇಕಾದ ಸರಿಯಾದ ಒಂದೇ ದಾರಿಯೆಂದರೆ, 'ಭಾರತದ ಸಂಸತ್ತಿನ ಬಹು ಸಂಖ್ಯಾತ ಸದಸ್ಯರು ಒಪ್ಪುತ್ತಿಲ್ಲ. ಒಪ್ಪಂದ ಒಳ್ಳೆಯದಾಗಿದ್ದರೂ ನಮಗೆ ಜಾರಿ ಮಾಡಲಾಗುತ್ತಿಲ್ಲ' ಎಂದು ಬುಶ್ ಅವರಿಗೆ ಹೇಳುವುದು.

ಹಾಗೊಂದು ವೇಳೆ ಪ್ರಧಾನ ಮಂತ್ರಿ ಮನಮೋಹನಸಿಂಗ್‌ರವರು ಬುಶ್‌ರವರಿಗೆ ಹೇಳದೆ ಹೋದಲ್ಲಿ, ಬುಶ್‌ರವರ ಜನಪ್ರಿಯತೆ ಕುಗ್ಗಿದಂತೆಯೇ ಮನಮೋಹನ್‌ಸಿಂಗ್‌ರ ಜನಪ್ರಿಯತೆಯೂ (ಇದ್ದಲ್ಲಿ) ಕುಗ್ಗುತ್ತದೆ, ಮಾತ್ರವಲ್ಲ, ಬುಶ್‌ರವರ ಪರಮಮಿತ್ರರಾದ ಇಂಗ್ಲೆಂಡ್ ನ ಮಾಜಿ ಪ್ರಧಾನಿ ಟೋನಿ ಬ್ಲೇರ್ ಸೇರಿದಂತೆ ಆಸ್ಟ್ರೇಲಿಯಾ ಮತ್ತು ಜಪಾನ್‌ನ ಮಾಜಿ ಪ್ರಧಾನಿಗಳಂತೆ ಇವರೂ ಬೇಗನೇ 'ಮಾಜಿ' ಗಳಾಗಬೇಕಾಗುತ್ತದೆ. ಅಧಿಕಾರ ಕಳಕೊಳ್ಳಬೇಕಾಗುತ್ತದೆ.

ಎಡಪಕ್ಷಗಳು ಮೂಲೆ ಗುಂಪಾಗುತ್ತಿವೆಯೇ?

ನಾಗರೀಕ ಪರಮಾಣು ಒಪ್ಪಂದಕ್ಕೆ ಸರ್ಕಾರ ಮುಂದಾದರೆ 'ತಾನು ನೀಡಿರುವ ಬೆಂಬಲವನ್ನು ಹಿಂದಕ್ಕೆ ಪಡೆಯಬೇಕಾಗುತ್ತದೆ' ಎಂದು ಸಂಸತ್ತಿನಲ್ಲಿ 3ನೇ ಅತಿ ದೊಡ್ಡ ಪಕ್ಷವಾದ ಸಿಪಿಐ(ಎಂ) ಹಾಗೂ ಅದರೊಂದಿಗಿಡುವ ಎಡಪಕ್ಷಗಳು ಹೇಳುತ್ತಿವೆ. ಹಾಗೊಂದು ವೇಳೆ ಆದಲ್ಲಿ ಸಮಾಜವಾದಿ ಪಕ್ಷ ಯುಪಿಎ ಸರ್ಕಾರದ ನೆರವಿಗೆ ಬರಲಿದೆ ಎಂಬ ಮಾತುಗಳು ಚರ್ಚಿತವಾಗುತ್ತಿದೆ. ಇದರಿಂದ ಎಡಪಕ್ಷಗಳು ಮೂಲೆ ಗುಂಪಾಗಿವೆ ಎಂದು 24 ಗಂಟೆ ಸುದ್ದಿಗಾಗಿ ಅರಸು(ಚು)ತ್ತಿರುವ ಕೆಲವು ಟಿ.ವಿ. ಮಾಧ್ಯಮಗಳು ಬಿತ್ತಿರಿಸುತ್ತಿವೆ. ಆದರೆ ಎಡಪಕ್ಷಗಳು ಸರ್ಕಾರಕ್ಕೆ ನೀಡಿದ ಬೆಂಬಲದಿಂದ ದೂರ ಹೋಗಬಹುದು. ಜನರಿಂದ ದೂರ ಹೋಗಲು ಸಾಧ್ಯವಿಲ್ಲ. ಪ್ರಜ್ಞಾವಂತ ನಾಗರೀಕರು ಎಡಪಕ್ಷಗಳ ದೇಶದ ಪರ ಹಾಗೂ ಜನತೆಯ ಪರ ನಿಲುವನ್ನು ಸ್ವಾಗತಿಸುತ್ತಿದ್ದಾರೆ.



ಎಡಪಕ್ಷಗಳು ದುರ್ಬಲವಾಗಿರುವ ಕರ್ನಾಟಕದಲ್ಲೂ ಬಹಳಷ್ಟು ಜನರು ಅಮೇರಿಕಾದ ಪರವಾಗಿರುವ ಅಣು ಒಪ್ಪಂದವನ್ನು ವಿರೋಧಿಸುತ್ತಿದ್ದಾರೆ. ಸುದ್ದಿ ಮಾಧ್ಯಮಗಳ ಪ್ರಚಾರಕ್ಕೆ ಬಲಿಯಾಗಿರುವ ಜನರು ಪ್ರಥಮದಲ್ಲಿ ಒಪ್ಪಂದ ಒಳ್ಳೆಯದು ಎಂದು ಹೇಳಿದರೂ ಅವರೊಂದಿಗೆ ಚರ್ಚೆ ಆರಂಭಿಸಿದರೆ, ಕೆಡುಕುಗಲನ್ನು ಬಿಡಿ ಬಿಡಿಯಾಗಿಟ್ಟರೆ, ಒಪ್ಪಂದ ಬೇಡವೇ ಬೇಡ ಎನ್ನುವ ನಿರ್ಧಾರಕ್ಕೆ ಬರುತ್ತಾರೆ. ಅಂತಹ ಚರ್ಚೆ, ಗುಂಪು ಸಭೆ, ವಿಚಾರ ಸಂಕಿರಣಗಳು ಹೆಚ್ಚುಬೇಕು.

ಈ ಸಂದರ್ಭದಲ್ಲಿ ಜುಲೈ 4, 2008ರ ಹಿಂದೂ ಪತ್ರಿಕೆಯಲ್ಲಿ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿವಿ.ಆರ್.ಕೃಷ್ಣ ಅಯ್ಯರ್‌ರವರು ಹೇಳಿದಂತೆ, 'ಕ್ರಿಕೆಟ್ ಸ್ಕೋರ್, ಸೌಂದರ್ಯ ಸ್ಪರ್ಧೆ, ರಿಯಾಲಿಟಿ ಶೋ' ಮಾತ್ರವೇ ನಮ್ಮ ಆದ್ಯತೆಗಳಾಗಬಾರದು. ಈ ದೇಶದ ಅಳಿವು ಉಳಿವು, ಜನತೆಯ ಬದುಕು, ಬಾಳು ಪ್ರಮುಖ ಅಜೆಂಡಾವಾಗಿ ಮುಂದಕ್ಕೆ ಬರಬೇಕು.


○

'ಅಣು ಒಪ್ಪಂದ'ದಲ್ಲಿ ಏನುಂಟು? ಏನಿಲ್ಲ?

ಅಣು ಒಪ್ಪಂದವೆಂದರೆ ಅದು ಕೇವಲ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ್ದು ಎಂದು ಹಲವರು ಅಂದುಕೊಂಡಿದ್ದಾರೆ. ಸರ್ಕಾರವೂ ಹಾಗೆ ನಂಬಿಸಲು ಯತ್ನಿಸುತ್ತಿದೆ. ಆದರೆ ಅದು ಅಷ್ಟು ಮಾತ್ರ ಅಲ್ಲ, ಅದನ್ನು ಮೀರಿದ್ದು. ಈ ಕುರಿತು ವಿವರಿಸುವ ಜಿ.ಎನ್. ನಾಗರಾಜ್ ಅವರ ಲೇಖನದ ಆಯ್ದ ಭಾಗ ಇದು.

ಜಿ.ಎನ್.ನಾಗರಾಜ್

ಅಣು ಒಪ್ಪಂದ ಕೇವಲ ಅಣು ಒಪ್ಪಂದವಲ್ಲ. ಭಾರತದ ಜನ ಜೀವನದ ಎಲ್ಲ ರಂಗಗಳನ್ನು ಆಕ್ರಮಿಸಿ ಭಾರತದ ಸಾಮಾಜಿಕ ವ್ಯವಸ್ಥೆಯನ್ನೇ ಅಲುಗಾಡಿಸುವ ಸಂಚು ಎಂಬುದು ಅರ್ಥವಾಗಬೇಕಾದರೆ ನರಸಿಂಹರಾವ್ - ಮನಮೋಹನ್ ಸಿಂಗ್ ಸರ್ಕಾರ 1995ರಲ್ಲಿ ಕಾಲದಲ್ಲಿ ಭಾರತ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ನಡೆಸಿದ 30ಕ್ಕೂ ಹೆಚ್ಚು ರಹಸ್ಯ ಮಾತುಕತೆಗ'ಳ ಕಾಲದಲ್ಲಿ ರಭಸವಾಗಿ ಮುಂದುವರೆದು ಮನಮೋಹನ್‌ಸಿಂಗ್ ಸರ್ಕಾರದ



ಸಮಯದಲ್ಲಿ ಕೂಡಿ ಬಂದ ಭಾರತ -ಅಮೇರಿಕಾ ರಕ್ಷಣಾ ಒಪ್ಪಂದ ಇವೆಲ್ಲುವುಗಳನ್ನು ಪರಿಶೀಲಿಸಬೇಕಾಗುತ್ತದೆ. ಈ ಎಲ್ಲಾ ವಿವರಗಳಿಗೆ ಹೋಗದೇ ಪ್ರಮುಖವಾದ ಕೆಲವು ಅಂಶಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಲಾಗಿದೆ.

1) ಭಾರತ- ಅಮೇರಿಕಾ ಅಣು ಒಪ್ಪಂದ ಮತ್ತು ಮೂಲಕ ಅಣುಶಕ್ತಿ ಸ್ಥಾವರಗಳನ್ನು ಸ್ಥಾಪಿಸಲು ಅಣು ಇಂಧನ, ಅಣು ಸ್ಥಾವರದ ಯಂತ್ರಗಳು, ...ಗಳು ಇವುಗಳನ್ನು ನೀಡುವುದು 2005ರಲ್ಲಿ ಪ್ರಣಬ್ ಮುಖರ್ಜಿ ಭಾರತದಲ್ಲಿ ಎಲ್ಲಿಯೂ ಚರ್ಚಿಸದೆ ಪತ್ರಿಕೆಗಳಿಗೂ ಗೊತ್ತಾಗದಂತೆ ಗುಟ್ಟಾಗಿ ...ಹಿ ಹಾಕಿದ ಭಾರತ-ಅಮೇರಿಕಾದ ರಕ್ಷಣಾ ಒಪ್ಪಂದದಲ್ಲಿ ಅಮೇರಿಕಾದ ಅನುಕರಣೆ ...ಶವಾಗಲು ಭಾರತದ ವಿದೇಶಾಂಗ ನೀತಿ ಮತ್ತು ರಕ್ಷಣಾ ನೀತಿಗಳನ್ನು ಅಮೇರಿಕಾದ ವಿದೇಶಾಂಗ ಹಾಗೂ ಯುದ್ಧ ನೀತಿಗೆ ಅಧೀನ ಮಾಡಲು ಒಪ್ಪಿಗೆ ...ಟ್ಟಿದ್ದಕ್ಕೆ ಪ್ರತಿಯಾಗಿ ನೀಡಿದ ಕೊಡುಗೆ.

2) ಹೈಡ್ ಕಾಯಿದೆಯಲ್ಲಿ ಸ್ಪಷ್ಟವಾಗಿ ...ಲ್ಲೇಖಿಸಿದಂತೆ ಭಾರತದ ವಿದೇಶಾಂಗ ನೀತಿ ...ಮೇರಿಕಾದ ವಿದೇಶಾಂಗ ನೀತಿಯ ಜೊತೆಗೂಡಿ ...ಗಬೇಕು. ಪ್ರಪಂಚದಲ್ಲೆಲ್ಲಾ ತಮಗೆ ಒಪ್ಪಿಗೆಯಾದ ...ರ್ಕಾರಗಳನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ, ...ಯೋತ್ಪಾದನೆಗೆ ನೆರವಾಗುತ್ತಿರುವ ನೆಪದಲ್ಲಿ, ...ಣುಬಾಂಬ್, ರಾಸಾಯನಿಕ ಶಸ್ತ್ರಗಳನ್ನು ...ಯಾರಿಸಲು ಹೊರಟಿವೆ ಎಂಬ ನೆಪದಲ್ಲಿ ...ಫ್ಘಾನಿಸ್ತಾನ, ಇರಾಕ್ ಮೇಲೆ ಧಾಳಿ ಮಾಡಿದಂತೆ ...ತ್ತು ಹಾಕಲು ಹೊರಟಾಗ ಭಾರತ ಅದನ್ನು ...ಂಬಲಿಸಬೇಕು. ಇರಾನ್, ಉತ್ತರಕೊರಿಯಾ, ...ನಿಜುವೆಲಾ, ಮೆಕ್ಸಿಕೋಗಳಲ್ಲಿ ಸರ್ಕಾರ ...ದಲಾಯಿಸಲು ಅಮೇರಿಕಾಕ್ಕೆ ಸಹಕರಿಸಬೇಕು.

ವಿಶ್ವಸಂಸ್ಥೆಯ ಮೂಲಕ ನಿಷೇಧ, ಪ್ರತಿಬಂಧಗಳನ್ನು ಹೇರಲು ಅಮೇರಿಕಾದ ಪ್ರಸ್ತಾಪಗಳಿಗೆ ಮತ ನೀಡಬೇಕು. ಅಂತರಾಷ್ಟ್ರೀಯ ಕಾನೂನು ಒಪ್ಪಂದಗಳನ್ನು ದೇಶಗಳ ಸಾರ್ವಭೌಮತೆ, ಸ್ವಾತಂತ್ರ್ಯಗಳನ್ನು ಉಲ್ಲಂಘಿಸಲು ಭಾರತ ನೆರವು ನೀಡಬೇಕು.

3) ಭಾರತ-ಅಮೇರಿಕಾ ಸೈನ್ಯಗಳು ಆಗಾಗ್ಗೆ ಜಂಟಿ ಸಮರಭ್ಯಾಸ ನಡೆಸಬೇಕು. ಜಂಟಿ ದಾಳಿ ನಡೆಸಲು ಸನ್ನದ್ಧಾಗಬೇಕು. ಭಾರತದ ದೇಶಪ್ರೇಮಿ ಮಿಲಿಟರಿ ಅಧಿಕಾರಿಗಳು ಅಮೆರಿಕಾದಲ್ಲಿ ತರಬೇತಿ ಪಡೆಯಬೇಕು. ಭಾರತ ಅಮೇರಿಕಾದದಿಂದ ಅಮೇರಿಕಾದ ಖಾಸಗೀ ಕಂಪನಿಗಳಿಗೆ ಅಪಾರ ಲಾಭ ತರುವ ದುಬಾರಿ ಬೆಲೆಯ ಶಸ್ತ್ರಾಸ್ತ್ರ ವಿಮಾನಗಳನ್ನು ಖರೀದಿಸಬೇಕು. ಭಾರತ ಮತ್ತು ಅಮೇರಿಕಾದ ನಡುವೆ. ಶಸ್ತ್ರಾಸ್ತ್ರಗಳ ಸಾಮ್ಯತೆ ಇರಬೇಕು.

4) ಸಾಗರ, ವಾಯು ಹಾಗೂ ಭೂಸಂಚಾರ ಮಾರ್ಗಗಳಲ್ಲಿ ಸಾಗುವ ಎಲ್ಲಾ ದೇಶಗಳ ವಾಹನಗಳನ್ನು, ಹಡಗುಗಳನ್ನು ಅದರಲ್ಲಿ ಅಣುಬಾಂಬ್ ಇದೆಯೇ ಇಲ್ಲವೇ ಎಂದು ಪರಿಕ್ಷಿಸಲು ಅವುಗಳನ್ನು ಅಮೆರಿಕಾ ತನಿಖೆ ಮಾಡಬೇಕು. ಇಡೀ ವಿಶ್ವದ ಎಲ್ಲಾ ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸಲು, ಅವುಗಳ ಮೇಲೆ ತನ್ನ ಏಕಾಧಿಕಾರ ಅಮೇರಿಕಾ ಸ್ಥಾಪಿಸಲು ಭಾರತ ಸಹಾಯ ಮಾಡಬೇಕು. ಭಾರತದ ಪೂರ್ವಕ್ಕಿರುವ ಸಾಗರ ಪ್ರದೇಶದಲ್ಲಿ ಹಡಗುಗಳ ತನಿಖೆಯ ಕೆಲಸವನ್ನು ಭಾರತ ವಹಿಸಿಕೊಳ್ಳಬೇಕು. ಅಲ್ಲಿ ಸಿಗುವ ಹಡಗುಗಳ ದೇಶಗಳೆಲ್ಲದರ ದ್ವೇಷವನ್ನು ಭಾರತ ಕಟ್ಟಿಕೊಳ್ಳಬೇಕು. ಅಂತರಾಷ್ಟ್ರೀಯ



ಒಪ್ಪಂದಗಳ ಉಲ್ಲಂಘನೆಯಲ್ಲಿ ಭಾರತ ಭಾಗವಹಿಸಬೇಕು. ಅಮೇರಿಕಾದ ಜೊತೆಯಲ್ಲಿ ಭಾರತವೂ ವಿಶ್ವದ ಅನೇಕ ದೇಶಗಳ, ಅಲ್ಲಿಯ ಜನರ ದ್ವೇಷಕ್ಕೆ ಒಳಗಾಗಬೇಕು.

5) ಅಮೇರಿಕಾದ ಜೊತೆ ಸೇರಿ ಭಾರತ ಮೂರನೇ ದೇಶಗಳ ಮೇಲೆ ಧಾಳಿ ನಡೆಸುವುದಕ್ಕೆ ತೊಡಗಬೇಕು. ಅದಕ್ಕಾಗಿ ಭಾರತ-ಅಮೇರಿಕಾ ಜಂಟಿ ಸಮರಭ್ಯಾಸ ಮತ್ತು ಶಸ್ತ್ರಾಸ್ತ್ರಗಳ ಸಾಮ್ಯತೆಬೇಕು.

6) ಅಮೇರಿಕಾ ಭಾಗಿಯಾಗಿರುವ ಅನೇಕ ರಕ್ಷಣಾ ಒಪ್ಪಂದಗಳ ದೇಶಗಳೊಡನೆ ಭಾರತವೂ ಸೇರಿ ಸಮರಾಭ್ಯಾಸ ನಡೆಸಬೇಕು. ಈಗ ಬಂಗಾಳ ಕೊಲ್ಲಿಯಲ್ಲಿ ಭಾರತ-ಅಮೇರಿಕಾ, ಜಪಾನ್, ಆಸ್ಟ್ರೇಲಿಯಾ, ದೇಶಗಳ ನಡುವೆ ನ'ಡ'ಯ'ು'ತ್ತಿ'ರ'ುವ 'ಸಮರಭ್ಯಾಸದಂತೆ' ಅಂದರೆ ಇಡೀ ಪ್ರಪಂಚದ ದ್ವೇಷಗಳಿಸಿರುವ ನ್ಯಾಟೋ ಕೂಟದಂತೆ ಭಾರತವು ಅಘೋಷಿತ ರಕ್ಷಣಾ ಕೂಟದ ಭಾಗವಾಗಿ ಸುತ್ತಲಿನ ದೇಶಗಳನ್ನು ಹಿಡಿತದಲ್ಲಿಡಲು ಅಮೇರಿಕಾಕ್ಕೆ ಸಹಕರಿಸಬೇಕು.

ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯುತ್, ಶಿಕ್ಷಣ, ಕಾನೂನು, ನ್ಯಾಯಾಲಯಗಳು ಅಮೇರಿಕಾದ ಹಿಡಿತಕ್ಕೆ ಭಾರತ- ಅಮೇರಿಕಾ ಅಣು ಒಪ್ಪಂದ ಭಾರತದ ಕೃಷಿ, ಕೈಗಾರಿಕೆ, ಮೂಲಭೂತ ಸೌಲಭ್ಯ, ವ್ಯಾಪಾರ, ಬ್ಯಾಂಕ್ ವ್ಯವಹಾರ, ಭೂಮಿ, ವಿಶೇಷ ಆರ್ಥಿಕ ವಲಯ, ಶಿಕ್ಷಣ, ಕಾನೂನು ನ್ಯಾಯಾಲಯ ಎಲ್ಲವೂಗಳ ನ್ನು ಆವರಿಸುವ ಭಾರತ-ಅಮೇರಿಕಾ ಅಮಗ್ರ ಒಪ್ಪಂದದ ಒಂದು ಭಾಗವಾಗಿದೆ.

7) ಕೃಷಿ ಸಂಶೋಧನಾ ಸಂಸ್ಥೆಗಳ ಸಂಶೋಧನಾ ಯೋಜನೆ, ಕೃಷಿ ಶಿಕ್ಷಣ ಪಠ್ಯಕ್ರಮ ಎಲ್ಲವನ್ನೂ ಮಾನ್ಸಾಂಟೋ, ವಾಲ್‌ಮಾರ್ಟ್‌ಗಳೂ ಇರುವ ಸಮಿತಿಯೊಂದು ಪುನರ್‌ರೂಪಿಸಬೇಕು. ಈ ಕಂಪನಿಗಳು ಭಾರತದ ಕೃಷಿ, ವಿಶ್ವ ವಿದ್ಯಾನಿಲಯಗಳ ಜೊತೆ ಸೇರಿ ಸಂಶೋಧನೆ ಮಾಡಲು ನಂತರ ಈ ಸಂಶೋಧನೆಗಳ ಫಲಗಳನ್ನು ಪೇಟೇಂಟ್ ಮೂಲಕ ವಶಪಡಿಸಿಕೊಳ್ಳಲು ಅವಕಾಶ ನೀಡಬೇಕು.

8) ಜೈವಿಕ ತಂತ್ರಜ್ಞಾನ ಮತ್ತು ಅದರ ಫಲವಾದ ಮುಂದಿನ ತಲೆಮಾರಿನ ತಳಿಗಳು, ಕೃಷಿ ಪದ್ಧತಿಗಳನ್ನು ಪೇಟೆಂಟ್ ಪಡೆದ ಕಂಪನಿಗಳಿಗೆ ದುಭಾರಿ ಬೆಲೆನೀಡಿ ಭಾರತದ ರೈತರುಪಡೆಯಬೇಕು. ಕರಾರು ಕೃಷಿಯ ಮೂಲಕ ಭಾರತದ ಕೃಷಿ, ಆಹಾರ ಭದ್ರತೆ, ಕಾರ್ಪೊರೇಟ್ ಅಥವಾ ಕಂಪನಿ ಕೃಷಿ ಪದ್ಧತಿಸ್ಥಾಪಿಸಬೇಕು.

9) ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಬೇಕು. ಖಾಸಗೀ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳು ಕೊಳ್ಳುವುದಕ್ಕೆ ಆಡಳಿತವನ್ನು ಪೂರ್ಣವಾಗಿ ವಶಪಡಿಸಿಕೊಳ್ಳುವುದಲ್ಲದೆ, ಇರುವ ಕಾನೂನು ಅಡ್ಡಿಗಳನ್ನು ತಿದ್ದುಪಡಿ ಮೂಲಕ ತೆಗೆದು ಹಾಕಬೇಕು.

10) ವಿಶ್ವ ವಿದ್ಯಾಲಯಗಳ ಶಿಕ್ಷಣವನ್ನು ಐಐಎಂ, ಐಐಟಿ, ಬಿಟಿಗಳ ಶಿಕ್ಷಣವನ್ನು ಪುನರ್‌ರಚಿಸಲು ಅಮೇರಿಕಾದ ವಿಶ್ವವಿದ್ಯಾಲಯಗಳ ಸಹಕಾರ ಪಡೆಯಬೇಕು. ವಿದೇಶಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಅವಕಾಶ ನೀಡಬೇಕು. ಪತ್ರಿಕಾ ಮಾಧ್ಯಮದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಬೇಕು. ಉತ್ತಮ ಪುಸ್ತಕಗಳ ಪ್ರಬಂಧಗಳನ್ನು ಜೆರಾಕ್ಸ್ ಮಾಡಿಕೊಳ್ಳುವ ಅವಕಾಶ ನೀಡಬಾರದು.

11) ವಿದ್ಯುತ್, ಪೆಟ್ರೋಲಿಯಂ ವಸ್ತುಗಳಲ್ಲಿ ಸಹಾಯಧನ , ಕೆಲವರಿಗೆ ಕಡಿಮೆ ದರ ಇತ್ಯಾದಿಗಳನ್ನು ಕಿತ್ತು ಹಾಕಬೇಕು. ಪೂರ್ಣವಾಗಿ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಬೇಕು. ರಸ್ತೆ, ಸೇತುವೆ ಇತ್ಯಾದಿ ಮೂಲಭೂತ ವ್ಯವಸ್ಥೆಗಳಲ್ಲಿಯೂ ಮಾರುಕಟ್ಟೆ ದರಗಳಿಗೆ ಅವಕಾಶ ನೀಡಬೇಕು. ಒಟ್ಟಿನಲ್ಲಿ ರಸ್ತೆ, ರೈಲು, ಪೆಟ್ರೋಲ್, ಗ್ಯಾಸ್, ಸೀಮೆಯಣ್ಣೆ, ವಿದ್ಯುತ್ ದರಗಳು ಏರಿಸಲು ಖಾಸಗಿ ಕಂಪನಿಗಳಿಗೆ ಮುಕ್ತ ಅವಕಾಶ ವಿರಬೇಕು. ಬಹುರಾಷ್ಟ್ರೀಯ ಕಂಪನಿಗಳು ಮುಕ್ತವಾಗಿ ವ್ಯವಹಾರ ಮಾಡಲು, ಅವರು ಹೂಡುವ ಬಂಡವಾಳಕ್ಕೆ ಸ್ವಾಂತಂತ್ರ್ಯ ನೀಡಲು ಭಾರತದ ಕಂಪನಿ ಕಾನೂನು, ಬ್ಯಾಂಕ್ ಕಾನೂನು, ಪೇಟೆಂಟ್ ಕಾನೂನು, ಕಾಮಿನರ್ ಕಾನೂನು ಇತ್ಯಾದಿಗಳ ತಿದ್ದುಪಡಿ ಮಾಡಬೇಕು. ವಿದೇಶಿ ಬಂಡವಾಳದ ಹೂಡಿಕೆಗಳಿಗಿರುವ ಮೇಲ್ ಮಿತಿಗಳನ್ನು ತೆಗೆದು ಹಾಕಬೇಕು, ಸಡಲಿಸಬೇಕು.

12) ಪೇಟೆಂಟ್ ಬೌದ್ಧಿಕ ಹಕ್ಕುಗಳಿಗೆ ಸಂಬಂಧಿಸಿ ವಿಶೇಷ ನ್ಯಾಯಾಲಯ ವ್ಯವಸ್ಥೆ ರೂಪಿಸಬೇಕು. ಭೋಪಾಲ್ ಅನಿಲ ದುರಂತಗಳಂತಹ ಪ್ರಕರಣಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಹಿತಕ್ಕೆ



ಹಾನಿಯಾಗುವ ತೀರ್ಪು ನೀಡದಂತೆ ವ್ಯವಸ್ಥೆ ಆಗಬೇಕು. ಒಪ್ಪಂದಗಳು, ಬಂಡವಾಳ ಹೂಡಿಕೆಗಳು ಇವುಗಳ ಬಗ್ಗೆ ಬೇರೆಯೇ ಸಂಧಾನ ನ್ಯಾಯ ಮಂಡಳಿಗಳ ವ್ಯವಸ್ಥೆ ಆಗಬೇಕು. ಒಟ್ಟಿನಲ್ಲಿ ಕಾನೂನು ನ್ಯಾಯಾಲಯ ವ್ಯವಸ್ಥೆಯನ್ನು ಬದಲಾಯಿಸಬೇಕು.

13) ಇವು ಅಮೇರಿಕಾ ಭಾರತಗಳ ಕೈಗಾರಿಕೆ ಮುಖ್ಯಸ್ಥರುಗಳ ಸಮಿತಿಯೊಂದನ್ನು ರೂಪಿಸಿ ಬಂದ ಶಿಪಾರಸ್ಸುಗಳು. ಈ ಶಿಪಾರಸುಗಳನ್ನು ಜಾರಿ ಮಾಡಲು ಭಾರತದ ಯೋಜನಾ ಮಂಡಳಿ ಕೂಡಲೇ 24 ಸಮಿತಿಗಳನ್ನು ರಚಿಸಿಸರ್ಕಾರಕ್ಕೆ ವರದಿಯನ್ನು ರೂಪಿಸಿವೆ.

ಕೈಗಾರಿಕಾ ಮುಖ್ಯಸ್ಥರ ಸಮಿತಿಯಲ್ಲಿ ರತನ್‌ಟಾಟಾ, ಕಿರಣ್ ಮುಜುಂಧಾರ್, ನಂದನ್ ನೀಲಖೇಣಿಯೂ ಇದ್ದಾರೆ. ಭಾರತ ಸರ್ಕಾರ, ಕಾಂಗ್ರೆಸ್ ಮುಖ್ಯಸ್ಥರು ಇದು ಕೇವಲ ವಿದ್ಯುತ್ ಉತ್ಪಾಧನೆಗೆ ಸಂಬಂಧಿಸಿದ್ದು ಎನ್ನುತ್ತಿರುವಾಗಲೇ ರತನಟಾಟಾ, ನೀಲಖೇಣಿಗಳು ಅಷ್ಟೇ ಈ ಒಪ್ಪಂದ ಮುರಿದು ಬಿದ್ದರೆ ಭಾರತಕ್ಕೆ ಅಮೇರಿಕಾದ ಬಂಡವಾಳ ಹರಿದು ಬರುವುದಕ್ಕೆ, ಭಾರತದ ಕೈಗಾರಿಕೆಗಳಿಗೆ ಹಾನಿಯೆಂದು ಬೊಬ್ಬೆಹೊಡೆಯುತ್ತಿದ್ದಾರೆ. ಅದು ಸಿಎನ್‌ಎನ್ ಎಂಬ ಅಮೆರಿಕಾದ ಮರಿ ಟಿವಿ ವಾಹಿನಿಯಲ್ಲಿ.

ರಾಷ್ಟ್ರವ್ಯಾಪಿ ಪ್ರಚಾರಾಂದೋಲನ

ಹಣದುಬ್ಬರ, ಬೆಲೆ ಏರಿಕೆ, ಅಣು ಒಪ್ಪಂದದ ಕುರಿತು ಎಡಪಕ್ಷಗಳು ರಾಷ್ಟ್ರವ್ಯಾಪಿಯಾಗಿ ಜುಲೈ 14, 2008 ರಿಂದ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿವೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಆಗುತ್ತಿರುವುದಕ್ಕೆ ಭಾರತ, ಚೀನಾವನ್ನು ಹೊಣೆ ಮಾಡಲಾಗುತ್ತಿದೆ. ಆದರ ನಿಜವಾದ ಕಾರಣ ಬೇರೆಯೇ ಇದೆ.

ಮುಂಗಡ ವ್ಯಾಪಾರ ಮತ್ತು ತೈಲ ಬೆಲೆ ಏರಿಕೆ

ತೈಲ ಬೆಲೆಗಳ ನಾಗಾಲೋಟ ಇಡೀ ಜಗತ್ತನ್ನೇ ನಡುಗಿಸುತ್ತಿದೆ. ಪ್ರಪಂಚದ ಮೂಲೆ ಮೂಲೆಯಲ್ಲಿ ಈ ವಿಷಯ ಗಂಭೀರ ಚರ್ಚೆಗೆ ಒಳಗಾಗಿದೆ. ವಾಸ್ತವಾಗಿ ಉತ್ಪಾದನೆ ಕಡಿಮೆಯಾಗಿ ದರ ಏರಿಕೆ ಕಾಣುತ್ತಿದೆಯೇ? ಅಥವಾ ಬೇಡಿಕೆ ಹೆಚ್ಚಾಗಿ ಇಂತಹ ಪರಿಸ್ಥಿತಿ ಎದುರಾಗಿದೆಯೇ ಎಂಬ ಪ್ರಶ್ನೆ ಎಲ್ಲರನ್ನೂ ತೀವ್ರವಾಗಿ ಕಾಡುತ್ತಿದೆ.

ಒಂದು ದೇಶ ಅಥವಾ ಜಗತ್ತಿನಲ್ಲಿ ನೈಸರ್ಗಿಕ ಸಂಪನ್ಮೂಲಗಳು ಯಾವ ಪ್ರಮಾಣದಲ್ಲಿ ಬಳಕೆಯಾಗಿವೆ ಎಂಬ ಆಧಾರದಲ್ಲಿ ಆದೇಶ ಅಥವಾ ಜಗತ್ತಿನ ಅಭಿವೃದ್ಧಿ ಅಂದಾಜು ಮಾಡಲಾಗುತ್ತದೆ. ಯಾರ ಅಭಿವೃದ್ಧಿಯಾಗುತ್ತಿದೆ ಎನ್ನುವುದು ಬೇರೆ ವಿಷಯ. ಇಲ್ಲಿನ ಮುಖ್ಯ ವಿಷಯ ಎಂದರೆ, ಕಳೆದ ವರ್ಷ ಎಷ್ಟು ಪ್ರಮಾಣದ ಇಂಧನ ವ್ಯಯವಾಗುತ್ತಿತ್ತೋ ಸ್ವಲ್ಪ ಹೆಚ್ಚು ಕಡಿಮೆ ಈಗಲೂ ಅಷ್ಟೇ ಇದೆ. ಹಾಗಾದ ಮೇಲೆ ಬೇಡಿಕೆ ಹೆಚ್ಚಾಗುವ ಪ್ರಶ್ನೆ ಎಲ್ಲಿಂದ ಬರುತ್ತೆ. ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆ ಕಂಡಿದೆ ಎಂಬ ವಾದವೇ ಸಂಪೂರ್ಣ ವಂಚನೆಯಿಂದ ಕೂಡಿದೆ. ಅಂದರೆ ಇಡೀ ಜಗತ್ತನ್ನು ದಿಕ್ಕು ತಪ್ಪಿಸುವ ಪ್ರಜ್ಞಾಪೂರ್ವಕವಾದ ಪಿತೂರಿಯಾಗಿದೆ.

ಗೋಲ್ಡ್‌ಮನ್ ಸ್ಯಾಚ್ಸ್, ಜೆಪಿ ಮಾರ್ಗನ್, ಮಾರ್ಗನ್ ಅಂಡ್ ಸ್ಟ್ಯಾನ್ಲಿ, ಸಿಟಿ ಗ್ರೂಪ್ ನಂತಹ ಬೃಹತ್ ಹಣಕಾಸು ಕಂಪನಿಗಳು ಮುಂಗಡ ವ್ಯಾಪಾರ (ವಾಯಿದೆ ವಹಿವಾಟು-ಫ್ಯೂಚರ್ ಟ್ರೇಡಿಂಗ್) ನಲ್ಲಿ ಅಪಾರ ಪ್ರಮಾಣದ ಬಂಡವಾಳ ತೊಡಗಿಸುತ್ತಿರುವುದು ತೈಲ ಬೆಲೆಗಳು ಏರಿಕೆ ಕಾಣಲು ಪ್ರಮುಖ ಕಾರಣವಾಗಿದೆ. ಫ್ಯೂಚರ್ ಟ್ರೇಡಿಂಗ್‌ನಲ್ಲಿ ಕಚ್ಚಾ ವ್ಯಾಪಾರಿಗಳು ಮುಂದಿನ ದಿನಗಳಿಗೆ ಬೇಕಾದ ತೈಲಕ್ಕಾಗಿ ಇಂದೇ ಒಪ್ಪಂದ ಮಾಡಿಕೊಳ್ಳುತ್ತಾರೆ. ಈ ಒಪ್ಪಂದ ಇರುವ ತನಕ ಮತ್ಯಾರಿಗೂ ತೈಲ ದೊರೆಯುವುದಿಲ್ಲ. ಹಾಗಾಗಿ ಬೇಡಿಕೆ ವಿಪರೀತವಾಗಿ ಹೆಚ್ಚುತ್ತದೆ. ಬೇಡಿಕೆ ಹೆಚ್ಚಾದಂತೆ ದರ ಸಹ ಏರಿಕೆ ಕಾಣುತ್ತದೆ.

ತೈಲ ಫ್ಯೂಚರ್ ಟ್ರೇಡಿಂಗ್‌ನಲ್ಲಿ ರೈತರನ್ನು ಕೇಂದ್ರೀಕೃತವಾಗಿರಿಸಿಕೊಂಡಿರುವ ಸಂಸ್ಥೆಗಳು, ವಿಮಾನಯಾನ ಸೇವಾ ಕಂಪನಿಗಳು ಮತ್ತು ಅಂತದೇ ಕೆಲವು ಕಂಪನಿಗಳು ಸಹಜವಾಗಿ ವಹಿವಾಟು ನಡೆಸುತ್ತವೆ. ಅತಿವೃಷ್ಟಿ ಅಥವಾ ಅನಾವೃಷ್ಟಿಯಾದಲ್ಲಿ, ಇಲ್ಲವೆ ಇನ್ನಿತರ ಹವಾಮಾನ ಏರುಪೇರುಗಳಾದಾಗ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿ ದರಗಳು ಏರಿಕೆಯಾಗಬಾರದು ಎಂಬ ಕಾರಣಕ್ಕೆ ಫ್ಯೂಚರ್ ಟ್ರೇಡಿಂಗ್ ಮೂಲಕ ಮುಂದಿನ ದಿನಗಳಿಗೆ ಬೇಕಾದ ಒಪ್ಪಂದಗಳನ್ನು ಇಂದೆ ಮಾಡಿಕೊಳ್ಳಲಾಗುವುದು ಎಂದು ಹೇಳಲಾಗುತ್ತದೆ. ವಿಮಾನಯಾನ ಕಂಪನಿಗಳು ಸಹ ಮುಂದಿನ ದಿನಗಳಲ್ಲಿ ವೈಮಾನಿಕ ಇಂಧನ ದರ ಹೆಚ್ಚಾದರೆ ಆದಾಯಕ್ಕೆ ಧಕ್ಕೆಯಾಗುತ್ತದೆ ಎಂದು ಫ್ಯೂಚರ್ ಟ್ರೇಡಿಂಗ್ ಮೂಲಕ ಮೊದಲೇ ಖರೀದಿಸುತ್ತಾರೆ. ಇವರನ್ನು ಫಿಸಿಕಲ್ ಹೆಡ್ಜರ್ಸ್ ಎಂದು ಕರೆಯುತ್ತಾರೆ) ಇಂತಹ ಉದ್ದೇಶಕ್ಕಾಗಿ ಫ್ಯೂಚರ್ ಟ್ರೇಡಿಂಗ್ ನಡೆಸಲಾಗುತ್ತದೆ. ಆದರೆ ಸಟ್ಟಾ ಬಂಡವಾಳಗಾರರು ಈ ಫ್ಯೂಚರ್ ಟ್ರೇಡಿಂಗನ್ನು ತಮ್ಮ ಲಾಭಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರು ಉತ್ಪನ್ನವನ್ನು ಖರೀದಿಸುವುದೂ ಇಲ್ಲ ಬಳಕೆ ಮಾಡುವುದಿಲ್ಲ. ಆದರೂ ಕೋಟ್ಯಾಂತರ ಡಾಲರ್ ಬಂಡವಾಳ ಸುರಿದು ಫ್ಯೂಚರ್ ಒಪ್ಪಂದಗಳನ್ನು ಮಾಡಿಕೊಳ್ಳುತ್ತಾರೆ. ಇಡೀ ಮಾರುಕಟ್ಟೆಯನ್ನು ತಮ್ಮ ಬಿಗಿ ಮುಷ್ಠಿಯಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಅನ್ಯರಿಗೆ ತೈಲ ದೊರೆಯದಿದ್ದಾಗ ಹೆಚ್ಚಿನ ದರಕ್ಕೆ ಖರೀದಿಸಲು ಮುಂದಾಗುತ್ತಾರೆ. ಬೆಲೆ ತನ್ನಿಂತಾನೆ ಏರಿಕೆ ಕಾಣುತ್ತದೆ.

2003ರಲ್ಲಿ ಈ ಸಟ್ಟಾ ಬಂಡವಾಳಗಾರರು ಫ್ಯೂಚರ್ ಟ್ರೇಡಿಂಗ್‌ನಲ್ಲಿ 1,300 ಕೋಟಿ ಡಾಲರ್ ಬಂಡವಾಳ ತೊಡಗಿಸಿದ್ದರು. 2008ರ ಮಾರ್ಚ್ ವೇಳೆಗೆ ಈ ಬಂಡವಾಳ 28,000 ಕೋಟಿ ಡಾಲರ್ ತಲುಪಿದೆ. ಅಂದರೆ ಕೇವಲ ಐದು ವರ್ಷಗಳ ಅವಧಿಯಲ್ಲಿ 20 ಪಟ್ಟು ಹೆಚ್ಚು ಬಂಡವಾಳ ತೊಡಗಿಸಲಾಗಿದೆ.

ಈ ಸಟ್ಟಾ ಬಂಡವಾಳಗಾರರು ಆಹಾರ ಪದಾರ್ಥಗಳಾದ ಕಾಫಿ, ಕೊಕೋವಾ, ಗೋಧಿ, ಸೋಯಾಬೀನ್, ಸಕ್ಕರೆ, ಸೇರಿದಂತೆ ಎಲ್ಲ ರೀತಿಯ ಲೋಹಗಳು, ಕಚ್ಚಾತೈಲ, ಪೆಟ್ರೋಲ್, ನೈಸರ್ಗಿಕ ಅನಿಲ ಸೇರಿದಂತೆ 25 ಉತ್ಪನ್ನಗಳಲ್ಲಿ ಫ್ಯೂಚರ್ ಒಪ್ಪಂದಗಳನ್ನು ಮಾಡಿಕೊಳ್ಳುತ್ತಾರೆ. ಈ ಸಟ್ಟಾ ಬಂಡವಾಳಗಾರರನ್ನು ಆರ್ಥಿಕ ಪರಿಭಾಷೆಯಲ್ಲಿ ಇಂಡೆಕ್ಸ್ ಸ್ಪೆಕ್ಯೂಲೇಟರ್ಸ್ ಎಂತಲೂ ಕರೆಯಲಾಗುತ್ತದೆ.

2003ರಲ್ಲಿ ಈ ಸಟ್ಟಾ ಬಂಡವಾಳಗಾರರು 4 ಲಕ್ಷ ಫ್ಯೂಚರ್ ಒಪ್ಪಂದಗಳನ್ನು ಮಾಡಿಕೊಂಡಿದ್ದರು. 2008ರ ಮಾರ್ಚ್ ವೇಳೆಗೆ ಈ ಸಂಖ್ಯೆ 28 ಲಕ್ಷಕ್ಕೆ ತಲುಪಿದೆ. ಅಂದರೆ ಎಷ್ಟು ಪ್ರಮಾಣದಲ್ಲಿ ಬಂಡವಾಳ ತೊಡಗಿಸಲಾಗಿದೆ ಎಂಬುದನ್ನು ಸಾಮಾನ್ಯ ಜನ ಅಂದಾಜಿಸಿಕೊಳ್ಳಲೂ ಸಾಧ್ಯವಿಲ್ಲ.

1998ರಲ್ಲಿ ಫಿಸಿಕಲ್ ಹೆಡ್ಜರ್ಸ್ ಶೇಕಡ 79 ರಷ್ಟು ಒಪ್ಪಂದಗಳನ್ನು ಹೊಂದಿದ್ದರೆ ಸಟ್ಟಾ ಬಂಡವಾಳಗಾರರು ಕೇವಲ 21 ರಷ್ಟು ಒಪ್ಪಂದಗಳನ್ನು ಹೊಂದಿದ್ದರು. ಕಳೆದ ಹತ್ತು ವರ್ಷಗಳಲ್ಲಿ ಫ್ಯೂಚರ್ ಟ್ರೇಡಿಂಗ್‌ನಲ್ಲಿ ಸಂಪೂರ್ಣ ಬದಲಾವಣೆ ಕಂಡಿದ್ದು ಸಟ್ಟಾ ಬಂಡವಾಳಗಾರರು ಶೇಕಡ 76 ರಷ್ಟು ಒಪ್ಪಂದಗಳನ್ನು ತಮ್ಮ ಬಿಗಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದಾರೆ. ತೈಲ ಫ್ಯೂಚರ್ ಟ್ರೇಡಿಂಗ್‌ನಲ್ಲಿ 10 ಕೋಟಿ ಡಾಲರ್ ಬಂಡವಾಳ ಹೂಡಿಕೆ ಹೆಚ್ಚಾದರೂ ಬೆಲೆಗಳಲ್ಲಿ ಶೇ.1.6ರಷ್ಟು ಏರಿಕೆ ಕಾಣುತ್ತದೆ. ಪ್ರಸ್ತುತ ಈ ಸಟ್ಟಾ ಬಂಡವಾಳಗಾರರ ಬಿಗಿ ಹಿಡಿತದಲ್ಲಿ 84.70 ಕೋಟಿ ಬ್ಯಾರಲ್‌ನಷ್ಟು ಕಚ್ಚಾ ತೈಲ ಒಪ್ಪಂದಗಳಿವೆ.

ಅತ್ಯಂತ ಪ್ರಮುಖವಾಗಿ ಜ್ಞಾಪಕದಲ್ಲಿ ಇಟ್ಟುಕೊ[...] ಬೇಕಾದ ಮತ್ತೊಂದು ವಿಷಯ ಎಂದರೆ [...] ಫ್ಯೂಚರ್ ಟ್ರೇಡಿಂಗ್‌ನಿಂದ ಉಂಟಾಗಿರು[...] ಪರಿಣಾಮ ಇನ್ನೂ ಸಂಪೂರ್ಣವಾಗಿ ಬೆಳಕಿ[...] ಬಂದಿಲ್ಲ.

ಲಂಡನ್ ಮತ್ತು ನ್ಯೂಯಾರ್ಕ್ ತೈಲ ಫ್ಯೂಚರ್ ಟ್ರೇಡಿಂಗ್‌ನ ಪ್ರಮುಖ ಜಾಗತಿಕ ಮಾರುಕ[...]ಗಳಾಗಿವೆ. ಹತ್ತು ವರ್ಷಗಳ ಹಿಂದೆ ಎನರ್ಜಿ(ತೈಲ, ಬೆಳಕು, ವಿದ್ಯುತ್, ಕಲ್ಲಿದ್ದಲು) ಫ್ಯೂಚರ್ ಟ್ರೇಡಿಂಗ್‌ನ್ನು ನ್ಯೂಯಾರ್ಕ್ ಮರ್ಕಂಟೈಲ್ ಎಕ್ಸ್‌ಚೆಂಜ್ ನಿಯಂತ್ರಿಸುತ್ತಿತ್ತು. ಇದಕ್ಕಾಗಿ ಕಮಾಡಿ[...] ಫ್ಯೂಚರ್ಸ್ ಟ್ರೇಡಿಂಗ್ ಕಮೀಷನ್(ಸಿಎಫ್‌ಟಿ[...]) ಯನ್ನು ರಚಿಸಲಾಗಿತ್ತು. ಆಗ ಯಾವುದೇ ರೀತಿಯ ಸಟ್ಟಾ ವ್ಯಾಪಾರಕ್ಕೆ, ಕಾನೂನು ಬಾಹಿರ ವಹಿವಾಟ[...] ಅವಕಾಶ ಕಲ್ಪಿಸುತ್ತಿರಲಿಲ್ಲ. ಆದರೆ 2000 ದಲ್ಲಿ ಬುಷ್ ಆಡಳಿತದಲ್ಲಿ ಫ್ಯೂಚರ್ ಟ್ರೇಡಿಂಗ್‌ನ್ನು ಸಿಎಫ್‌ಟ[...] ನಿಂದಲೇ ತೆಗೆಸಿ ಹಾಕುವುದರಲ್ಲಿ ಬೃಹತ್ ಸಟ್ಟಾ ಬಂಡವಾಳಗಾರರು ಯಶಸ್ವಿಯಾದರು.

ಈ ಕುರಿತು ಒಂದು ಮಾತನ್ನೂ ಆಡ[...] ಅಮೆರಿಕಾ ಉತ್ಪಾದನೆ ಕಡಿಮೆಯಾಗಿದೆ ಎಂ[...] ಒಪೆಕ್ ರಾಷ್ಟ್ರಗಳ ಮೇಲೆ ಆರೋಪಿಸುತ್ತಿದೆ. ಚೀ[...] ಮತ್ತು ಭಾರತದಲ್ಲಿ ಪೆಟ್ರೋಲಿಯಂ ಬ[...] ಹೆಚ್ಚಾಗಿದ್ದರಿಂದ ದರಗಳು ಏರಿಕೆ ಕಾಣುತ್ತಿದೆ ಎಂ[...] ಆರೋಪಿಸುತ್ತಿದೆ. ಒಪೆಕ್ ದೇಶಗಳು ಅಗ[...] ಪ್ರಮಾಣದ ತೈಲ ಉತ್ಪಾದನೆ ಮಾಡುತ್ತಿಲ್ಲ ಎ[...] ಆರೋಪ ಹೊರಿಸಿ ಇರಾನ್ ಮೇಲೆ ಯು[...] ಮಾಡುವ ಪಿತೂರಿಯೂ ಇದರ ಒಂದು ಭಾಗವಾಗಿದೆ. ತೈಲ ಫ್ಯೂಚರ್ ಟ್ರೇಡಿಂ[...] ನಿಷೇಧಿಸಬೇಕು ಸಟ್ಟಾ ಬಂಡವಾಳಗಾರರ[...] ಫ್ಯೂಚರ್ ಮಾರುಕಟ್ಟೆಯಿಂದ ಹೊರ ಹಾಕಬೇಕೆಂ[...] ಇಡೀ ಜಗತ್ತು ಆಗ್ರಹಿಸುತ್ತಿದ್ದರೆ ಅಮೆರಿಕಾ ಮ[...] ಬ್ರಿಟನ್ ಈ ಕುರಿತು ತುಟಿ ಬಿಚ್ಚಿಲ್ಲ.

– ಅ[...]

ಸುದ್ದಿಬಿಂಬ

ಒಪ್ಪಂದಕ್ಕೆ ದುಬಾರಿ ಬಲಿ

...ಅಮೇರಿಕದ ಜತೆಗಿನ ಅಣು ಒಪ್ಪಂದದಿಂದ ಏನಾಗಬಹುದು ಎಂಬುದಕ್ಕೆ ಸಂಬಂಧಿಸಿದಂತೆ ಒಬ್ಬೊಬ್ಬರೂ ತಮ್ಮದೇ ಆದ ವಾದಗಳನ್ನು ಮಂಡಿಸುತ್ತಿದ್ದಾರೆ. ಪ್ರಧಾನಿ ಮನಮೋಹನ್ ಸಿಂಗ್ ಅವರು ಹೇಳುವಂತೆ ಇದರಿಂದ ದೇಶದ ವಿದ್ಯುತ್ ಕೊರತೆ ನಿವಾರಣೆಯಾಗುತ್ತದೆ. ತೊಂಬತ್ತರ ದಶಕದಲ್ಲಿ ಭಾರತದ ಆರ್ಥಿಕತೆಯನ್ನು ಪೂರ್ಣವಾಗಿ ಹೊಸ ಹಾದಿಗೆ ತಿರುಗಿಸಿದ ಮನಮೋಹನ್ ಸಿಂಗ್ ಹೇಳುತ್ತಿರುವುದರಲ್ಲಿ ಸತ್ಯಾಂಶವಿರಬಹುದು ಎಂಬುದು ಎಲ್ಲರ ನಂಬಿಕೆ. ತೊಂಬತ್ತರ ದಶಕದಲ್ಲಿ ಭಾರತದ ಆರ್ಥಿಕತೆಯನ್ನು ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ಮಾರ್ಗದರ್ಶನದಲ್ಲಿ ಪುನಾರಚಿಸುವಾಗಲೂ ಮನಮೋಹನ್ ಸಿಂಗ್ ಇದೇ ಮಾತುಗಳನ್ನು ಹೇಳಿದ್ದರು. ಆದರ ಪರಿಣಾಮ ನಮ್ಮ ಮುಂದಿದೆ. ನಮ್ಮ ಅಭಿವೃದ್ಧಿಯ ದರ ಶೇಕಡಾ 11ನ್ನು ತಲುಪಿತ್ತು. ಈಗ ಹಣದುಬ್ಬರ ದರವೂ ಶೇಕಡಾ 12ಕ್ಕೆ ಹತ್ತಿರವಾಗುತ್ತಿದೆ. ಉದಾರ ಆರ್ಥಿಕ ನೀತಿ ದೇಶದ ಆರ್ಥಿಕತೆಯ ಸ್ವರೂಪವನ್ನು ಬದಲಾಯಿಸಿತು. ಬಹುದೊಡ್ಡ ಮಧ್ಯಮ ವರ್ಗವೊಂದನ್ನು ಸೃಷ್ಟಿಸಿತು. ವಿದ್ಯಾವಂತ ಯುವಕರಿಗೆ ಉದ್ಯೋಗದ ಹೊಸ ಹಾದಿಗಳು ತೆರೆದವು. ಅದರ ಜತೆ ಜತೆಯಲ್ಲಿಯೇ ಬಡವರ ಸಂಖ್ಯೆಯೂ ಹೆಚ್ಚಿತು. ದೇಶದ ಶೇಕಡಾ 60ರಷ್ಟು ಮಂದಿ ಅವಲಂಬಿಸಿರುವ ಕೃಷಿ ಕ್ಷೇತ್ರ ಸಂಪೂರ್ಣ ನಾಶದತ್ತ ಶರವೇಗದಲ್ಲಿ ಧಾವಿಸತೊಡಗಿತು. ನಗರಗಳಿಗೆ ವಲಸೆ ಹೆಚ್ಚಿತು. ಮ್ಯಾಕ್‌ಡೋನಾಲ್ಡ್ ಹೊಸ ಶಾಖೆಗಳನ್ನು ತೆರೆಯುವ ಹೊತ್ತಿನಲ್ಲಿ ಹಸಿವಿನಿಂದ ಬಳಲುವವರ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು.

ಅಣು ಒಪ್ಪಂದದ ಪರಿಣಾಮವೂ ಹೀಗೆಯೇ ಅದಕ್ಕೆ ಧನಾತ್ಮಕ ಆಯಾಮವೊಂದು ಇರುವಂತೆ ಋಣಾತ್ಮಕ ಆಯಾಮವೂ ಇರುತ್ತದೆ. ಗ್ಯಾಟ್ ಒಪ್ಪಂದದ ದಿನಗಳಿಂದ ವಿಶ್ವ ವಾಣಿಜ್ಯ ಸಂಸ್ಥೆಯತನಕದ ಹಾದಿಯಲ್ಲಿ ನಾವು ಪಡೆದುಕೊಂಡಷ್ಟೇ ಕಳೆದುಕೊಂಡದ್ದೂ ಇದೆ. ಆದರೆ ನಮ್ಮ ವಿದೇಶಾಂಗ ನೀತಿಯ ಸ್ವತಂತ್ರ ಸ್ವರೂಪ ಸಂಪೂರ್ಣವಾಗಿ ಹಾಳಾಗಿರಲಿಲ್ಲ. ಅಲಿಪ್ತ ನೀತಿಯ ಬಗ್ಗೆ ಮಾತನಾಡುವುದಕ್ಕೆ ಅಗತ್ಯವಿರುವ ಗೌರವವನ್ನು ಭಾರತ ಉಳಿಸಿಕೊಂಡೇ ಬಂದಿತ್ತು. ಆದರೆ ಅಮೇರಿಕದ ಜತೆಗಿನ ಅಣು ಒಪ್ಪಂದ ಈ ಗೌರವವನ್ನು ಉಳಿಸಿಕೊಳ್ಳಲು ಬಿಡುವುದಿಲ್ಲ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಹೈಡ್ ಕಾಯ್ದೆಯ ಅಂಶಗಳು ಇದನ್ನು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಿವೆ. ಇರಾನ್, ಭಾರತದ ಮಧ್ಯೆ ಅನಿಲ ಪೈಪ್‌ಲೈನ್ ಯೋಜನೆ ಸಂಬಂಧ ಮಾತುಕತೆಗಳನ್ನು ನಡೆಸುತ್ತಿರುವ ಭಾರತ ಮುಂದೊಂದು ದಿನ ಅಮೇರಿಕ ಇರಾನ್‌ನ ಮೇಲೆ ದಾಳಿ ಮಾಡಿ[...] ಅದರಲ್ಲೂ ಪಾಲುದಾರನಾಗಬೇಕಾಗುತ್ತದೆ. [...] ವಿದ್ಯುತ್‌ನ ಸಮಸ್ಯೆಯೇನೂ ಅಣು ಒಪ್ಪಂದ[...] ಪರಿಹಾರವಾಗುವುದಿಲ್ಲ. ಈಗ ಒಟ್ಟು ವಿದ್ಯು[...] ಉತ್ಪಾದನೆಯಲ್ಲಿ ಶೇಕಡಾ 2.9ರಷ್ಟಿರುವ ಅ[...] ವಿದ್ಯುತ್‌ನ ಪ್ರಮಾಣ ಶೇಕಡಾ 5ಕ್ಕೆ ಏರಬಹುದು. ಇದರ ಜೊತೆಗೆ ಪರಮಾಣು ತ್ಯಾಜ್ಯದ ನಿರ್ವಹಣೆ[...] ಸಮಸ್ಯೆಯೂ ಈಗಿರುವುದರ ದುಪ್ಪಟ್ಟಾಗುತ್ತ[...] ಭದ್ರತೆಗೆ ಸಂಬಂಧಿಸಿದ ಪರಮಾಣು [...] ಸಂಶೋಧನೆಗಳಿಗೂ ಪೆಟ್ಟು ಬೀಳುತ್ತದೆ. ಎ[...] ಬಗೆಯ ನಿಷೇಧಗಳನ್ನು ಎದುರಿಸಿಯೂ ಅಣು[...] ತಂತ್ರಜ್ಞಾನವನ್ನು ಶೋಧಿಸಿದ್ದ ನಮ್ಮ ವಿಜ್ಞಾನಿ[...] ಸಾಹಸಕ್ಕೆ ಬೆಲೆಯೇ ಇಲ್ಲದಂತಾಗುತ್ತದೆ. ಎಲ್ಲದಕ್ಕಿ[...] ಹೆಚ್ಚಾಗಿ ಒಪ್ಪಂದದಿಂದ ಸ್ಥಗಿತಗೊಂಡಿರ[...] ಪರಮಾಣು ಇಂಧನ ಮಾರುಕ[...] ಚೇತರಿಸಿಕೊಳ್ಳುತ್ತಿದೆ. ಇದರಿಂದ ಲಾಭವಾಗುವು[...] ಅಮೇರಿಕಕ್ಕೆ. ಈ ಕಾರಣವನ್ನು ಮುಂದಿ[...] ಕೊಂಡಾದರೂ ಭಾರತ ಒಪ್ಪಂದವನ್ನು [...] ಪರವಾಗಿರುವಂತೆ ರೂಪಿಸಿಕೊಳ್ಳುವ ಸಾಧ್ಯತೆಯ[...] ಈಗ ಮುಚ್ಚಿಹಾಕಿಬಿಟ್ಟಿದೆ. ಮನಮೋಹನ್‌ಸಿಂ[...] ಅವರ ಪ್ರತಿಷ್ಠೆ ದೇಶದ ಪ್ರತಿಷ್ಠೆಯ[...] ಬಲಿಕೊಡುತ್ತಿದೆಯೇ ಎಂದು ಸಂಶಯಿಸ[...] ಬೇಕಾಗಿದೆ.

–'ಉದಯವಾಣಿ' ಸಂಪಾದಕೀಯದಿ[...]

ಕನ್ನಡ ವಾರಪತ್ರಿಕೆ

ಗೊಂದಲದ ಗೂಡಾದ ಅಂಗವಿಕಲ ಮಕ್ಕಳ ಶಿಕ್ಷಣ

ಸುರೇಶ್ ಕುಷ್ಟಗಿ

ಇತ್ತೀಚಿನ ದಿನಗಳಲ್ಲಿ ಅಂಗವಿಕಲರ ಕುರಿತು, ಎಲ್ಲ ರಾಜಕೀಯ ಪಕ್ಷಗಳು ಹಾಗೂ ಕೇಂದ್ರ, ರಾಜ್ಯ ಸರ್ಕಾರಗಳು ತಮ್ಮ ಜನಪ್ರಿಯ ಘೋಷಣೆಗಳಲ್ಲಿ ಅಂಗವಿಕಲರ ಕುರಿತು ಎಲ್ಲಿಲ್ಲದ ಕಾಳಜಿಯನ್ನು ದಿನನಿತ್ಯ ಪತ್ರಿಕೆಗಳಲ್ಲಿ ಸೂಚಿಸುತ್ತಿದ್ದರೂ, ವಾಸ್ತವ ಸ್ಥಿತಿಯೇ ಬೇರೆಯಾಗಿದೆ. ಈ ಬೃಹತ್ ದೇಶದಲ್ಲಿ ಸ್ವಾತಂತ್ರ್ಯಾನಂತರ 45 ವರ್ಷಗಳ ಕಾಲ ಅಂಗವಿಕಲರಿಗಾಗಿ ಅವರ ಹಕ್ಕುಗಳ ರಕ್ಷಣೆಗಾಗಿ ಸಮಗ್ರವಾದ ಕಾಯ್ದೆಯೇ ಇರಲಿಲ್ಲ ಎಂಬುದು, ಆಳುವ ಸರ್ಕಾರಗಳ ಬೂಟಾಟಿಕೆಗೆ, ಮೊಸಳೆ ಕಣ್ಣೀರಿಗೆ ಸಾಕ್ಷಿಯಾಗಿದೆ. 1995ರಲ್ಲಿ ಮಾತ್ರ ಅಂಗವಿಕಲರ ಅಧಿನಿಯಮ 1995 ಎಂಬ ಕಾಯ್ದೆ ದೇಶದ ಸಂಸತ್ತಿನ ಅಂಗೀಕಾರ ಪಡೆಯಲು ಸಾಧ್ಯವಾದದ್ದು, ದೇಶದಾದ್ಯಂತ ಅಂಗವಿಕಲರು ನಡೆಸಿದ ಹೋರಾಟ ಹಾಗೂ ವಿಶ್ವಸಂಸ್ಥೆಯ ಒತ್ತಡಗಳಿಗೆ ಮಣಿದು ಕಾಟಾಚಾರಕ್ಕೆಂಬಂತೆ, ಅಂಗವಿಕಲರ ಕಾಯ್ದೆ ರೂಪ ತಳೆದಿದೆಯಷ್ಟೆ. ಇರಲಿ.

ಸದರಿ ಕಾಯ್ದೆಯಲ್ಲಿ ಕನಿಷ್ಟ ಶೇಕಡಾ 10ರಷ್ಟನ್ನಾದರೂ ಪ್ರಾಮಾಣಿಕವಾಗಿ ಅನುಷ್ಠಾನ ಮಾಡಿದ್ದೇ ಆದರಲ್ಲಿ, ಈ ದೇಶದ ಜನಸಂಖ್ಯೆಯ ಶೇಕಡಾ 10 ರಷ್ಟಿರುವ ಅಂಗವಿಕಲರ ಜೀವನದಲ್ಲಿ ಮೂಲಭೂತ ಬದಲಾವಣೆ ಆರಂಭವಾಗಲು ಸಾಧ್ಯವಿತ್ತು.

ದುರಂತವೆಂದರೆ, ಅಂಗವಿಕಲರ ಕಲ್ಯಾಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಘೋಷಿಸಿದ ನೀತಿಗಳು ಹಾಗೂ 1995ರ ಕಾಯ್ದೆಯಲ್ಲಿ ರೂಪಿತವಾದ ನೀತಿ ನಿಯಮಗಳು, ಮಹತ್ತರ ಉದ್ದೇಶವನ್ನೇನೋ ಹೊಂದಿವೆ. ಆದರೆ ಅನುಷ್ಠಾನದ ಪ್ರಶ್ನೆ ಬಂದಾಗ, "ಕುರುಡರ ಗುಂಪೊಂದು ಆನೆಯನ್ನು ಅರ್ಥೈಸಿದಂತೆ" ವಿವಿಧ ಸರಕಾರಿ ಇಲಾಖೆಗಳು, ಅಂಗವಿಕಲರ ಸಮಸ್ಯೆಗಳನ್ನು ಅರಿಯುವಲ್ಲಿ ಹಾಗೂ ಕಾಯ್ದೆಯ ಹಾಗೂ ತಮ್ಮದೇ ಸರ್ಕಾರದ ಪಾಲಿಸಿಗಳನ್ನು ಅರ್ಥೈಸುವಲ್ಲಿ ಅರಿತುಕೊಳ್ಳುವಲ್ಲಿ "ಜಾಣ ಕುರುಡು" "ಜಾಣ ಕಿವುಡು" ಪ್ರದರ್ಶಿಸಿ ಇಡೀ ಕಾರ್ಯಕ್ರಮಗಳನ್ನು ಗೊಂದಲದ ಗೂಡಾಗಿ ಪರಿವರ್ತಿಸಿದ್ದಾರೆ. ಮುಖ್ಯವಾಗಿ ಅಧಿಕಾರಶಾಹಿಯ ಕಪಟತನ, ನಿರ್ಲಕ್ಷ ಧೋರಣೆ, ಇಡೀ ಗೊಂದಲಗಳಿಗೆ ಪ್ರಮುಖ ಕಾರಣವಾಗಿದೆಯೆಂದರೆ ತಪ್ಪಿಲ್ಲ. ಜೊತೆಗೆ "ವಿಶ್ವಬ್ಯಾಂಕ್" ಹಾಗೂ ಐಎಂಎಫ್‌ಗಳ ಶರತ್ತುಗಳಿಗೆ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡಿರುವ ಆಳುವ ಸರ್ಕಾರಗಳು, ತಮ್ಮ ಹೊಣೆಗಾರಿಕೆಯನ್ನು ಖದೀಮ ಎನ್‌ಜಿಒಗಳ ಹೆಗಲಿಗೆ ವರ್ಗಾಯಿಸಿ, ಅಂಗವಿಕಲರ ಜೀವನದೊಂದಿಗೆ ಚೆಲ್ಲಾಟವಾಡುತ್ತಾ ಕಪಟ ಅನುಕಂಪ ಸೂಸುತ್ತ ಮೋಜು ನೋಡುತ್ತಿವೆ.

ಉದಾಹರಣೆಗೆ ಅಂಗವಿಕಲರ ಶಿಕ್ಷಣವನ್ನು ತೆಗೆದುಕೊಳ್ಳಿ. ಸರ್ಕಾರದಲ್ಲಿ ಅಂಗವಿಕಲರ ಶಿಕ್ಷಣಕ್ಕಾಗಿ ಒಂದು ಸಮಗ್ರ ನೀತಿಯೇ ಇಲ್ಲವಾಗಿವೆ. ಅಂಗವಿಕಲರ ಶಿಕ್ಷಣವು ಹತ್ತು ಹಲವು ಇಲಾಖೆಗಳಿಗೆ ಹರಿದು ಹಂಚಿ ಹೋಗಿ, ಎನ್‌ಜಿಒಗಳ ಪಾಲಾಗಿ, ಅದರ ತಲೆ ಬಾಲ ಯಾವುದೆಂದು ಅವರ ನೀತಿ ನಿರೂಪಕರಿಗೇ ಗೊಂದಲವಾಗಿರುವ ಮಟ್ಟ ತಲುಪಿದೆ.

ಐಇಡಿ ಶಿಕ್ಷಣ

(ಇಂಟಿಗ್ರೇಟೆಡ್ ಎಜುಕೇಷನ್ ಫಾರ್ ಡಿಸೇಬಲ್ಡ್) ಅಥವಾ ಅಂಗವಿಕಲ ಮಕ್ಕಳ ಸಮನ್ವಯ ಶಿಕ್ಷಣ ಎಂಬುದು, ಈ ಮೊದಲು ಡಿಪಿಇಪಿ ಅಥವಾ ಇಂದಿನ ಎಸ್‌ಎಸ್‌ಎ ಸರ್ವಶಿಕ್ಷಣ ಅಭಿಯಾನದಲ್ಲಿ ಅದರ ಭಾಗವಾಗಿ ಜಾರಿಯಲ್ಲಿರುವ ಒಂದು ಉಪಯೋಜನೆಯಾಗಿದೆ.

ಐಇಡಿ ಯೋಜನೆಯ ಅನುಷ್ಠಾನ ಮೊದಲಿಗೆ ಈಗಾಗಲೇ ಸೇವೆಯಲ್ಲಿರುವ ಸರ್ಕಾರಿ ಶಿಕ್ಷಕರಿಗೆ, ವಿಶೇಷ ತರಬೇತಿ ನಡೆಸಿ ಆ ಮೂಲಕ ಅಂಗವಿಕಲ ಮಕ್ಕಳಿಗೆ ಶಿಕ್ಷಣ ನೀಡುವ ಪ್ರಯತ್ನವಾಯಿತು. ಅತ್ಯಂತ ತಾಂತ್ರಿಕವಾದ ಅಂಗವಿಕಲರ ಶಿಕ್ಷಣದ ವಿಷಯಗಳನ್ನು ಗ್ರಹಿಸಲಾರದ ಶಿಕ್ಷಕರು, ತಲೆ ಚಚ್ಚಿಕೊಳ್ಳುತ್ತಾ, ಕಾಟಾಚಾರದ ಅನುಷ್ಠಾನ ಮಾಡಿ, ಮೇಲಾಧಿಕಾರಿಗಳ ಒತ್ತಡದಿಂದ ಇಲಾಖೆಗೆ ಪೂರಕ ವರದಿ ತಯಾರಿಕೆಯೇ ಮಹತ್ತರ ಸಾಧನೆ ಎಂದುಕೊಂಡು, ಅತ್ತ ದೈನಂದಿನ ಪಾಠಕ್ಕೂ ನ್ಯಾಯ ಒದಗಿಸದೇ ಐಇಡಿಗೂ ಪ್ರಯೋಜನವಾಗದೇ ಎಡಬಿಡಂಗಿಗಳಾಗಿ ಉಳಿದಿದ್ದಾರೆ.

ಇಂತಹ ಶಿಕ್ಷಕರನ್ನು ಇಂದು ಇಲಾಖೆಯಲ್ಲಿ ಐಇಆರ್‌ಟಿ ಎಂದು ಗುರುತಿಸುತ್ತಾರೆ. ಅಂದರೆ ಸಮನ್ವಯ ಶಿಕ್ಷಣದ ಸಂಪನ್ಮೂಲ ಶಿಕ್ಷಕರು, ಇಲಾಖೆಯ ತಿಳುವಳಿಕೆಯಲ್ಲಿ ಸದರಿ ಶಿಕ್ಷಕರು 15ರಿಂದ 25 ಗ್ರಾಮಗಳಿಗೆ ಗುರುತಿಸಲಾದ ಒಂದು ಕ್ಲಸ್ಟರ್‌ಗೆ 3 ಜನ ಐಇಆರ್‌ಟಿಗಳು. ಕ್ಲಸ್ಟರ್‌ನ ವಿವಿಧ ಶಾಲೆಗಳಲ್ಲಿರುವ ಅಂಗವಿಕಲ ಮಕ್ಕಳಿಗೆ ಸಂಚಾರಿ ಶಿಕ್ಷಣ ಸೇವೆ ನೀಡಬೇಕು. ಇವರು ಬ್ರೈಲ್ ಭಾಷೆಯಲ್ಲಿ ಸಂಜ್ಞೆ ಭಾಷೆಯಲ್ಲಿ ಹಾಗೂ ಬುದ್ಧಿಮಾಂದ್ಯತೆಯುಳ್ಳ ಮಕ್ಕಳಿಗೆ ಶಿಕ್ಷಣ ನೀಡುವ ವಿಶೇಷ ಸಂಪನ್ಮೂಲ ಶಿಕ್ಷಕರು ಎಂಬ ಭ್ರಮೆ ಸರ್ಕಾರದ್ದು. ಹಾಗಾಗಿ ಈ ಐಇಆರ್‌ಟಿಗಳೆಂಬ ಎಡಬಿಡಂಗಿಗಳು ಅಗಸರ ನಾಯಿಯಂತೆ, ಹಾಯಾಗಿ ಅಲೆದುಕೊಂಡಿದ್ದಾರೆ. ಆಯಿತಲ್ಲವೇ ಅಂಗವಿಕಲ ಮಕ್ಕಳ ಉದ್ಧಾರ!



1995ರಲ್ಲಿ ಐಇಡಿಸಿ ವಿಶ್ವಸಂಸ್ಥೆಯ, ಮಕ್ಕಳ ಹಕ್ಕುಗಳ ಅಂತರರಾಷ್ಟ್ರೀಯ ಒಪ್ಪಂದದ ಕರಾರಿಗೆ, ಸಹಿ ಮಾಡಿದ ಅಂದಿನ ನರಸಿಂಹರಾವ್ ಸರ್ಕಾರ, ಅಂತರರಾಷ್ಟ್ರೀಯ ಒತ್ತಡಕ್ಕೆ ಮಣಿದು ಒಪ್ಪಂದಕ್ಕೆ ಸಹಿ ಹಾಕಿದ ಮುಲಾಜಿಗೆ ಐಇಡಿಸಿ ಎಂಬ ಕೇಂದ್ರ ಸರ್ಕಾರದ ಪ್ರಾಯೋಜಿತ ಅಂಗವಿಕಲ ಮಕ್ಕಳ ಸಮನ್ವಯ ಶಿಕ್ಷಣ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಈ ಯೋಜನೆಯ ಜಾರಿಗಾಗಿ, ವಿಶ್ವಬ್ಯಾಂಕಿನ ನೆರವು ಪಡೆದ ಕರ್ಮಕ್ಕಾಗಿ ಈ ಯೋಜನೆಯ ಅನುಷ್ಠಾನವನ್ನು ಅಂದಿನ ಡಿಪಿಇಪಿ ಅಥವಾ ಇಂದಿನ ಎಸ್‌ಎಸ್‌ಎ ದ ಉಸ್ತುವಾರಿಯಲ್ಲಿ ಎನ್‌ಜಿಒಗಳ ಮೂಲಕ ಅನುಷ್ಠಾನಕ್ಕೆ ಉಪಕ್ರಮಿಸಿತು. ರೂ.3,300ರಿಂದ 6,000 ರೂ.ಗಳ ವೇತನ ಶ್ರೇಣಿಯಲ್ಲಿ ಕೇಂದ್ರದ ಅನುದಾನದಿಂದ ನೇಮಕಾತಿ ಮಾಡಿಕೊಂಡ ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ ಪಿ.ಜಿ. ಡಿಪ್ಲೋಮಾ ಹಾಗೂ ಬಿಇಡಿ ಪದವಿ ಪಡೆದ ಈ ವಿಶೇಷ ಶಿಕ್ಷಕರು, 1992ರಿಂದ ಇಂದಿನವರೆಗೆ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳೂ ಸೇರಿ ಇದುವರೆಗೆ 1,110 ಜನ ನೇಮಕಾತಿ ಹೊಂದಿದ್ದಾರೆ. ಸೋಜಿಗವೆಂದರೆ ಕೇಂದ್ರದ ಅನುದಾನ ಹಾಗೂ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಉಸ್ತುವಾರಿ ಇರುವ ನಿಗದಿತ ವೇತನ ಶ್ರೇಣಿ ಹಾಗೂ ತುಟ್ಟಿಭತ್ಯೆಗಳನ್ನು ಈ ಐಇಡಿಸಿ ಶಿಕ್ಷಕರಿಗೆ, ಅವರ ವೇತನದ ಅನುದಾನವನ್ನು ಮಾತ್ರ ಎನ್‌ಜಿಒಗಳಿಂದ ವಾರ್ಷಿಕವಾಗಿ ಪ್ರಸ್ತಾವನೆ ಪಡೆದು, ಬಿಡುಗಡೆ ಮಾಡುವ ಸರ್ಕಾರದ ಆಡಳಿತ ತರ್ಕವಾದರೂ ಏನು? ಇಲ್ಲಿ ಸ್ಪಷ್ಟವಾಗಿ ಎದ್ದು ಕಾಣುವ ಅಂಶವೆಂದರೆ ಎನ್‌ಜಿಒಗಳು ಶಿಕ್ಷಕರ ನಿಗದಿತ ಸಂಬಳದಲ್ಲಿ ಕದ್ದು ತಾವೂ ಇಷ್ಟು ಅಮೇಧ್ಯ ತಿಂದು, ನೌಕರಶಾಹಿಗೆ, ಇಷ್ಟು ಪರ್ಸೆಂಟೇಜನ್ನು ನೀಡುವ ಪಕ್ಕಾ ಭ್ರಷ್ಟಾಚಾರದ ಅರೇಂಜ್‌ಮೆಂಟ್ ಅಲ್ಲವೇ? ಇಲ್ಲವಾದರೆ, ವಿಶೇಷ ಶಿಕ್ಷಣದ ಗಂಧಗಾಳಿಯೂ ಇಲ್ಲದ ಅನೇಕ ಎನ್‌ಜಿಒ ಮುಖ್ಯಸ್ಥರು, ಐಇಡಿಸಿ ಶಿಕ್ಷಕರಿಗಿಂತ ಅತ್ಯಂತ ಕೆಳಮಟ್ಟದ ಶೈಕ್ಷಣಿಕ ಅರ್ಹತೆಯುಳ್ಳವರು, ಇಂತಹವರು ಅದಾವ ರೀತಿ, ಸಮನ್ವಯ ಶಿಕ್ಷಣದ ಸಮರ್ಪಕ ಜಾರಿಗೆ, ನ್ಯಾಯ ಒದಗಿಸಬಲ್ಲರು? ಈ ಎನ್‌ಜಿಒಗಳನ್ನು ಅತ್ಯಂತ ತಾಂತ್ರಿಕವಾದ ಐಇಡಿ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನ ಮಾಡಲು ಯೋಜನೆಗಳನ್ನು ಮಂಜೂರು ಮಾಡುವಾಗ ಸರ್ಕಾರ ಅನುಸರಿಸಿದ ಮಾನದಂಡಗಳೇನು? ಇಂತಹ ಯೋಜನೆ ಜಾರಿ ಏಜೆನ್ಸಿ) ಪಿಐಎ ಪ್ರೊಜೆಕ್ಟ್ ಇಂಪ್ಲಿಮೆಂಟಿಂಗ್ ಏಜೆನ್ಸಿಗಳ ಅರ್ಹತೆಗಳೇನು? ಅನುಭವವೆಷ್ಟು? ಇದಾವುದನ್ನೂ ಪಾಲಿಸದೆ, ಪರಿಗಣಿಸದೇ, ಒಂದೊಂದು ಇಡೀ ಜಿಲ್ಲೆಯ ಅಥವಾ ತಾಲ್ಲೂಕಿನ ಯೋಜನೆಗಳನ್ನು ಎನ್‌ಜಿಒಗಳಿಗೆ ಮಂಜೂರು ಮಾಡಿದ ಸರ್ಕಾರದ ಕ್ರಮ, ಸಮಗ್ರವಾಗಿ ತನಿಖೆಗೆ ಒಳಪಡುವ ಅಗತ್ಯವಿದೆ.

ಸರ್ವಶಿಕ್ಷಣ ಅಭಿಯಾನದ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರದ ನಿರ್ದೇಶನಗಳನ್ನು ರಾಜ್ಯ ಸರ್ಕಾರ ಈ ಪರಿಯಾಗಿ ನಿರ್ಲಕ್ಷಿಸಿದೆ.

ಸಂಪೂರ್ಣ ಅಂಗವಿಕಲರಿಗೆ, (ಸತ್ತ ಹೆಣಕ್ಕೆ) ಬಸ್‌ಪಾಸ್ ನೀಡಲು ಆದೇಶ ನೀಡಿದ್ದ ಸರಕಾರ !!!

ಈ ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗಿನ ಘಟನೆಯಿದು. ಕೃಷ್ಣರ ಸಂಪುಟ ಆಗಸ್ಟ್ 15ರ ಕೊಡುಗೆಯಾಗಿ 50 ಸಾವಿರ ಅಂಗವಿಕಲರಿಗೆ ಉಚಿತ ಬಸ್‌ಪಾಸ್ ನೀಡಲು ನಿರ್ಣಯ ಕೈಗೊಂಡಿತು. ನಂತರದ ಅಸೆಂಬ್ಲಿ ಎಲೆಕ್ಷನ್ ಮೇಲೆ ಕಣ್ಣಿಟ್ಟು ಮಾಡಿದ ಜನಪ್ರಿಯ ಘೋಷಣೆಯಿದು. ಈ ಘೋಷಣೆಗೆ ಪತ್ರಿಕೆಗಳಲ್ಲೆಲ್ಲಾ ಅಂಗವಿಕಲರ ಸಮಸ್ಯೆಗಳೆಲ್ಲ ಇನ್ನು ತೀರಿ ಹೋದವು ಎಂಬಂತೆ ಪ್ರಚಾರ ನೀಡಲಾಯ್ತು. ವಾಸ್ತವದಲ್ಲಿ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ 13 ಲಕ್ಷ ಅಂಗವಿಕಲರಿದ್ದು ಸರಕಾರ ನೀಡಿದ 50 ಸಾವಿರ ಪಾಸ್ ಯಾವ ಮೂಲೆಗೆ ಎಂಬ ವಿಮೋಚನೆಯೂ ಅವರಿಗಿರಲಿಲ್ಲ.

ಅದು ಹಾಗಿರಲಿ, ಕೃಷ್ಣರ ಕ್ಯಾಬಿನೆಟ್‌ನ ಸಾರಿಗೆ ಮಂತ್ರಿ ಸಗೀರ್ ಅಹಮದ್ ಹೊರಡಿಸಿದ ಆದೇಶ ಮಾತ್ರ ಅಂಗವಿಕಲರಿಗೆ ನುಂಗಲಾರದ ತುತ್ತಾಗಿತ್ತು. ಈ ಆದೇಶದ ಪ್ರಕಾರ "ಎರಡೂ ಕೈ ಹಾಗೂ ಎರಡು ಕಾಲುಗಳಿಲ್ಲದ ಸಂಪೂರ್ಣ ಅಂಗವಿಕಲರಿಗೆ ಉಚಿತ ಬಸ್‌ಪಾಸ್" ಎಂದು ಸ್ಪಷ್ಟವಾಗಿ ನಮೂದಿಸಲಾಗಿತ್ತು. ಬಸ್‌ಪಾಸ್ ಪಡೆಯಲು ರಾಜ್ಯದ ಎಲ್ಲಾ ಆರ್‌ಟಿಸಿ ಡಿಸಿ ಕಛೇರಿಗೆ ಹೋದ ಅಂಗವಿಕಲರಿಗೆ ಸಂಪೂರ್ಣ ಅಂದರೆ ಶೇ.100 ಎಂದು ಸರ್ಟಿಫಿಕೇಟ್ ಇದ್ದವರಿಗೆ ಮಾತ್ರ ಬಸ್‌ಪಾಸ್ ಎಂದು ಆರ್‌ಟಿಸಿ ಸಿಬ್ಬಂದಿ ಪಾಸ್ ನೀಡಲು ನಿರಾಕರಿಸಿ ಅಂಗವಿಕಲರನ್ನು ವಾಪಸ್ ಅಟ್ಟಲಾಯಿತು. ರಾಯಚೂರು ಜಿಲ್ಲಾ ಅಂಗವಿಕಲರ ಒಕ್ಕೂಟ ಈ ಆದೇಶದ ಪ್ರತಿ ಹಿಡಿದು ಜಿಲ್ಲೆಗೆ ಬಂದಿದ್ದ ಸಾರಿಗೆ ಮಂತ್ರಿ ಸಗೀರ್ ಅಹಮದ್ ಅವರನ್ನು ತರಾಟೆ ತೆಗೆದುಕೊಂಡು ಸ್ವಾಮಿ ಶೇಕಡಾ 40 ಹಾಗೂ ಅದಕ್ಕಿಂತ ಹೆಚ್ಚು ಪರ್ಸೆಂಟ್ ಅಂಗವಿಕಲತೆಯುಳ್ಳ ವ್ಯಕ್ತಿಗಳು ಸರ್ಕಾರದ ಸೌಲಭ್ಯಗಳಿಗೆ ಅರ್ಹರು ಎಂದು ಅಂಗವಿಕಲರ ಕಾಯ್ದೆಯಲ್ಲಿ ಹೇಳಿದೆ. ಮಾತ್ರವಲ್ಲ ತಮ್ಮದೇ ಸರ್ಕಾರದ ಆದೇಶವೂ ಇದೆ. ಶೇಕಡಾ ಶೇ.85 ಅಂಗವಿಕಲತೆ ಎಂದರೆ ಆ ವ್ಯಕ್ತಿಯ ಸ್ಥಿತಿ, ಜೀವಂತ ತರಕಾರಿಯಂತಿರುತ್ತದೆ. ಇದನ್ನು ವೈದ್ಯಕೀಯವಾಗಿ ತೀವ್ರ ಅಂಗವಿಕಲತೆ ಎಂದು ಪರಿಗಣಿಸಲಾಗುತ್ತದೆ. 85ಕ್ಕಿಂತ ಹೆಚ್ಚು ಅಥವಾ ಶೇ.100 ಅಂಗವಿಕಲತೆಯೆಂದರೆ ನಿರ್ಜೀವ ಸ್ಥಿತಿ ಅಥವಾ ಸತ್ತ ಮನುಷ್ಯ ಹೆಣ ಎಂದಾಗುತ್ತದೆ ಎಂದು ವಿವರಿಸಿದಾಗ, ತಪ್ಪಿಟ್ಟಾದ ಸಚಿವರು ಆದೇಶ ಸರಿಪಡಿಸುವುದಾಗಿ ಹೇಳಿದರು. ಆ ನಂತರ ಆದೇಶ ತಿದ್ದುಪಡಿಯೂ ಆಯಿತು.

ಶಿಕ್ಷಣದ ಕೇಸರೀಕರಣ........

ಪುಟ 2 ರಿಂದ

ಭಾಷಾ ಸಮಸ್ಯೆ : ವ್ಯವಸ್ಥಿತ ಕ್ರಮ

ಭಾಷಾನೀತಿ ಕುರಿತಾಗಿರುವ ಇತ್ತೀಚಿನ ಹೈಕೋರ್ಟ್ ತೀರ್ಪು, ಶಿಕ್ಷಣದ ಅಸಮಾನತೆಗೆ ಪೂರಕ ಎಂಬಂತಿದೆ. ಇಂಗ್ಲೀಷ್‌ನಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎನ್ನುವ ನ್ಯಾಯಮೂರ್ತಿಗಳ ವಿಚಾರವೂ ಹಾಸ್ಯಾಸ್ಪದ ಎಂದರಲ್ಲದೆ, ಚೀನಾದಲ್ಲಿ ಚೀನಿ ಭಾಷೆ ಇದೆ, ಜರ್ಮನಿಯಲ್ಲಿ ಅವರದೇ ಭಾಷೆಯಿದೆ, ಹೀಗಾಗಿ ನಮಗೂ ನಮ್ಮದೇ ಆದ ಭಾಷೆ ಇರಬೇಕು. ಭಾಷೆ ನಾಗರೀಕತೆಯ ಭಾಗವಾಗಿ ಮೈದಳೆದಿದ್ದು ವಿನಃ ವ್ಯಾಪಾರಕ್ಕಾಗಿ ಹುಟ್ಟಿಲ್ಲ. ಇಂದಿನ ಸರ್ಕಾರಗಳು ಖಾಸಗೀ ವ್ಯಕ್ತಿಗಳಿಗೆ ಮಣಿದು, ಭಾಷಾಗೊಂದಲ ಸೃಷ್ಟಿಮಾಡಿ ಶಿಕ್ಷಣವನ್ನು ಖಾಸಗೀಕರಣಕ್ಕೆ ನೀಡಿ, ಪರೋಕ್ಷವಾಗಿ ನೆಲದ ಭಾಷೆಯನ್ನು ಹುಟ್ಟಡಗಿಸುವ ವ್ಯವಸ್ಥಿತ ಯೋಜನೆಯನ್ನು ಮಾಡುತ್ತಿವೆ ಎಂದರು.

ಎಸ್‌ಎಫ್‌ಐ ನ ಕೇಂದ್ರ ಸಮಿತಿ ಜಂಟಿ ಕಾರ್ಯದರ್ಶಿ ಕಾಂ. ಪಿ.ಕೆ. ಬಿಜು ಮಾತನಾಡಿ 'ದೇಶದ 22 ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಎಸ್‌ಎಫ್‌ಐ 43 ಲಕ್ಷ ಸದಸ್ಯತ್ವ ಹೊಂದಿ ತನ್ನದೇ ಆದ ಸಿದ್ಧಾಂತ ಹಾಗೂ ಹೋರಾಟದ ಆಧಾರದ ಮೇಲೆ ಗಟ್ಟಿಗೊಳ್ಳುತ್ತಿರುವ ದೇಶದ ನಿರ್ಣಾಯಕ ವಿದ್ಯಾರ್ಥಿ ಸಂಘಟನೆಯಾಗಿದೆ. ರಾಜಕೀಯ, ಶೈಕ್ಷಣಿಕವಾಗಿ ಈ ಸಮಾವೇಶ ಬಹಳ ಮುಖ್ಯವಾಗಿದ್ದು, ಕೋಮುವಾದಿ ಅಪಾಯಗಳನ್ನು ತಿಳಿಸುವುದು, ತಿಳಿಯಬೇಕಾದುದು ಇಂದಿನ ಅಗತ್ಯವಾಗಿದೆ. ದಕ್ಷಿಣ ಭಾರತವನ್ನು ಗುಜರಾತ್ ಮಾದರಿಯ ರಾಜ್ಯವನ್ನಾಗಿ ಮಾಡಲು ಹೊರಟಿರುವ ಅಡ್ವಾಣಿಯಂತಹ ಅಪಾಯಕಾರಿ ವ್ಯಕ್ತಿಗಳನ್ನು ಹಾಗೂ ಅವರ ಸಂಘ ಪರಿವಾರ, ಆರ್‌ಎಸ್‌ಎಸ್ ಸಂಘಟನೆಗಳನ್ನು ನಾವುಗಳು ಧಿಕ್ಕರಿಸಬೇಕಿದೆ ಎಂದರು.

ಸಮಾವೇಶದ ಅಧ್ಯಕ್ಷತೆ ವಹಿಸಿ ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಬಿ.ರಾಜಶೇಕರಮೂರ್ತಿ ಮಾತನಾಡುತ್ತಾ 'ಕೇವಲ ಶೇ.34 ಜನರ ಮತವಿರುವ, ಶೇ.66 ಜನರ ವಿರೋಧದ ನಡುವೆಯೂ ಅಧಿಕಾರಕ್ಕೆ ಬಂದ ಸಂಘ ಪರಿವಾರದ ಮಂತ್ರಿಗಳೇ, ಅಭಿವೃದ್ಧಿ ಹೆಸರಿನಲ್ಲಿ ಶಿಕ್ಷಣದ ಕೇಸರೀಕರಣಕ್ಕೆ ಮುಂದಾದರೆ ಎಸ್‌ಎಫ್‌ಐ ಇಡೀ ರಾಜ್ಯ ಹಾಗೂ ದೇಶಾದ್ಯಂತ ನಿಮ್ಮ ವಿರುದ್ಧ ಬೀದಿಗಿಳಿಯುತ್ತದೆ' ಎಂದು ಸರ್ಕಾರದ ವಿರುದ್ಧ ಎಚ್ಚರಿಕೆ ನೀಡಿದರು.

ಪ್ರಾಥಮಿಕ ಹಾಗೂ ಅಂಗನವಾಡಿ ಶಿಕ್ಷಣದ ಖಾಸಗೀಕರಣ ನೀತಿಯನ್ನು ಸಮಾವೇಶ ಖಂಡಿಸಿತು.

- ಸರ್ವರಿಗೂ ಸಮಾನ ಶಿಕ್ಷಣ ದೊರೆಯಲು ಕೇಂದ್ರ ಸರ್ಕಾರ ಶೇ.10ರಷ್ಟನ್ನು, ರಾಜ್ಯ ಸರ್ಕಾರ ಶೇ.30ರಷ್ಟು ಹಣವನ್ನು ಬಜೆಟ್‌ನಲ್ಲಿ ಮೀಡಲಿಡುವಂತೆ
- ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಬೇಕೆಂದು
- ದಲಿತ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕೆಂದು ಹಾಗೂ
- ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ನಿಲ್ಲಿಸಬೇಕೆಂದು..

ಹೀಗೆ ವಿವಿಧ ಬೇಡಿಕೆಗಳಿಗೆ ಸಮಾವೇಶ ಒತ್ತಾಯಿಸಿತು.

ಈ ಮೊದಲು ಧ್ವಜಾರೋಹಣವನ್ನು ಸಂಘಟನೆಯ ರಾಜ್ಯಾಧ್ಯಕ್ಷ ಬಿ.ರಾಜಶೇಖರಮೂರ್ತಿ ನೆರವೇರಿಸಿದರು.

ವೇದಿಕೆ ಮೇಲೆ ಎಸ್‌ಎಫ್‌ಐ ರಾಜ್ಯ ಸಮಿತಿ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್ ರಾಜ್ಯ ಉಪಾಧ್ಯಕ್ಷ ಮುನಿವೆಂಕಟಪ್ಪ, ಕಾಂ. ವಿಜಯಕುಮಾರ್ ದೊಡ್ಡಮನಿ, ಹುಳ್ಳಿ ಉಮೇಶ್ ಉಪಸ್ಥಿತರಿದ್ದರು.

ಸಂಗಾತಿ ಅನಂತನಾಯಕ ಹಾಗೂ ಸಂಗಡಿಗರಿಂದ ಕ್ರಾಂತಿಗೀತೆಗಳು ಮೊಳಗಿದವು.

ವರದಿ : ಗವಿಸಿದ್ಧ ಬಿ. ಹೊಸಮನಿ

ಪಕ್ಷಗಳನ್ನೊಡೆಯುವ....

ಪುಟ 3 ರಿಂದ

ಪ್ರಯತ್ನದಿಂದಾಗಿಯೇ ಹಾಗೆ ಬಿಡಿಯಾಗಿ ಅಪಹರಿಸಲು ಪಕ್ಷಾಂತರ ನಿಷೇಧ ಕಾನೂನು ಅವಕಾಶ ಕೊಡುವುದಿಲ್ಲ, ಅಡ್ಡಿಯಾಗುತ್ತಿದೆ. ಆದರೆ 2/3ರಷ್ಟು ಶಾಸಕರನ್ನು ಈ ಪಕ್ಷಗಳಿಂದ ಕಿತ್ತುಕೊಳ್ಳುವುದು ಕಷ್ಟಸಾಧ್ಯ. ಇದಕ್ಕಾಗಿ ಜೆಡಿ(ಎಸ್) ಪಕ್ಷವನ್ನು ಇಡಿಯಾಗಿ, ಇಲ್ಲ 2/3ರಷ್ಟಾದರೂ 'ಅಪಹರಿಸಲು' ಬಿಜೆಪಿ ಯತ್ನ ನಡೆಸಿದ್ದು, ಈಗಲೂ ನಡೆದಿದೆ. ಇಂತಹ ಪ್ರಯತ್ನಕ್ಕೆ ಭಿನ್ನವಾಗಿ ಇನ್ನೊಂದು ತಂತ್ರವನ್ನು ಅನುಸರಿಸುವ ಮಾತುಗಳೂ ಇವೆ. ಅದೆಂದರೆ ಕಾಂಗ್ರೆಸ್, ಜೆಡಿ(ಎಸ್)ನಲ್ಲಿರುವ ಕೆಲವು ಶಾಸಕರನ್ನು ರಾಜೀನಾಮೆ ಕೊಡಿಸಿ ಬಿಜೆಪಿಯಿಂದ ಸ್ಪರ್ಧಿಸಿ ಆರಿಸಿಕೊಳ್ಳುವುದು. ಈ ದಿಶೆಯಲ್ಲಿ ಚಾಲನೆಯೂ ನೀಡಲಾಗಿದೆ. ಕಾಂಗ್ರೆಸ್‌ನ ವಿ.ಸೋಮಣ್ಣ, ಚಿಂತಾಮಣಿಯ ಸುಧಾಕರ್, ಜೆಡಿ(ಎಸ್)ನ ಬಾಲಕೃಷ್ಣ ಜಾರಕಿಹೊಳಿ ಸಹೋದರರು ಇತ್ಯಾದಿಗಳ ಹೆಸರುಗಳೂ ಕೇಳುಬರುತ್ತಿವೆ. ಪಕ್ಷ, ಸರ್ಕಾರದಲ್ಲಿ ....ಸ್ಥಾನಗಳು ಚುನಾವಣಾ ಸ್ಪರ್ಧೆಯ ಖರ್ಚುಗಳನ್ನು ಒಳಗೊಂಡು 'ಕಾಣಿಕೆ' ನೀಡುವ ಮಾತುಗಳೂ ಹರಿದಾಡುತ್ತಿವೆ. ಈ ಹಣ ಗಣಿ ಭೂಮಾಫಿಯಾಗಳ ಭ್ರಷ್ಟತನದ ಹಣವೂ ಆಗಿದೆ ಅಂದರೆ ಬಿಜೆಪಿ ಅಧಿಕಾರದಲ್ಲಿ ಉಳಿಯಲು ಅತ್ಯಂತ ಹೀನ, ಅನೈತಿಕ ಮಾರ್ಗಕ್ಕೆ ಸರ್ವಸನ್ನದ್ಧಗೊಂಡಿದೆ.

ಉದಾರೀಕರಣದ ಈ ದಿನಗಳಲ್ಲಿ ಎಲ್ಲವೂ ವ್ಯಾಪಾರ, ಲಾಭ ನಷ್ಟದ ಲೆಕ್ಕಾಚಾರವಾಗಿರುವಾಗ ರಾಜಕೀಯ ಅಧಿಕಾರವೂ ಅದರಿಂದ ತಪ್ಪಿಸಿಕೊಳ್ಳಲಾದೀತೆ? ಇಷ್ಟೆಲ್ಲಾ ಕಸರತ್ತು ಕೇವಲ ಅಧಿಕಾರಕ್ಕಾಗಿ. ಆ ಮೂಲಕ ರಾಜ್ಯದ ದೇಶದ ಸಂಪತ್ತಿನ ಲೂಟಿಗಾಗಿ. ದೊರೆತಿರುವ ಎಲ್ಲಾ ಅವಕಾಶಗಳನ್ನು ಬಳಸಿ ಕ್ರೋಡೀಕರಿಸಿಕೊಳ್ಳುವ ಹುನ್ನಾರದ ಕ್ರಮವೇ ಇದೆಲ್ಲಾ ಆಗಿದೆ. ಈ ಕುಕೃತ್ಯಗಳ ಬಗ್ಗೆ ಈಶ್ವರಪ್ಪನಂತಹವರು ಮಾತನಾಡಿದಾಗ ಬಾಯಿ ಮುಚ್ಚುವ ಕೆಲಸ ಆಗಬೇಕಿದೆ.

ಭಾಷಾ ಕಲಿಕೆ......

ಪುಟ 3 ರಿಂದ

ರಾಜ್ಯಗಳು ಅನಭಿವೃದ್ಧಿ ಅನುಭವಿಸುತ್ತಿವೆ. ಪ್ರಾದೇಶಿಕ ಅಸಮತೋಲನವಿದೆ. ಒಟ್ಟು ಒಕ್ಕಟ್ಟಿನಿಂದಾಗಿ ಬದುಕೇ ತತ್ತರಗೊಂಡಿದೆ. ಈ ಸ್ಥಿತಿಯಲ್ಲಿ ಕಳೆದುಹೋಗುತ್ತಿರುವ 'ತನ್ನತನ' ಕ್ಕಾಗಿ ಪ್ರತ್ಯೇಕತವಾದಿ ಚಳಿವಳಿಗಳೂ ನಡೆಯುತ್ತಿವೆ. ದೇಶದ ನಡೆ ಇಂತಹ ಸ್ಥಿತಿಯನ್ನೂ ಸಾಮ್ರಾಜ್ಯಶಾಹಿಗಳು, ಛಿದ್ರಕಾರಿ, ಭಾಷಾಂಧ ಶಕ್ತಿಗಳು ಬಳಸುತ್ತಿವೆ. ಇಷ್ಟೆಲ್ಲಾ ಸಮಗ್ರತೆಗೆ ಧಕ್ಕೆ ತರುತ್ತಿರುವುದನ್ನು ಗಂಭೀರವಾಗಿ ಗಮನಿಸಬೇಕಾಗಿದೆ.

ಶಿಕ್ಷಣ ಕಲಿಕಾ ಭಾಷಾ ಮಾಧ್ಯಮದ ಸಂಬಂಧ ಮಾತೃಭಾಷೆ ಕಲಿಕೆಯನ್ನು ಸಮರ್ಥಿಸಿ ಈಗಾಗಲೇ ಸರ್ವೋಚ್ಚ ನ್ಯಾಯಾಲಯದ ತೀರ್ಪಿದ್ದು ಅದಕ್ಕೆ ವ್ಯತಿರಿಕ್ತವಾದ ತೀರ್ಪನ್ನು ಹೈಕೋರ್ಟ್ ನೀಡಿದ್ದು ಸೂಕ್ತವಲ್ಲ. ಅದರಲ್ಲಿಯೂ ಕೇವಲ ಮೂರು ಜನ ನ್ಯಾಯಾಧೀಶರ ಪೀಠವೇ ವಿಚಾರಣೆ ಕಲಾಪ ನಡೆಸುವ ಬದಲು ಪೂರ್ಣ ಪೀಠವಾದರೂ ವಿಷಯವನ್ನು ಕೈಗೆತ್ತಿಕೊಳ್ಳಬೇಕಿತ್ತು.

ಹೀಗಾಗಿ ಕರ್ನಾಟಕ ಸರ್ಕಾರ ಕೇವಲ ಮೊಸಳೆಕಣ್ಣೀರು ಹಾಕುವ ಬದಲು ಸರ್ವೋಚ್ಚ ನ್ಯಾಯಾಲಯಕ್ಕೆ ತನ್ನ ನೀತಿಯನ್ನು ಗಣಿಸಲು ಮೇಲ್ಮನವಿ ಸಲ್ಲಿಸಬೇಕು. ಭಾಷೆ, ಸಂಸ್ಕೃತಿ, ಬದುಕು ಸೊರಗಿ ಕರಗುವುದರಲ್ಲಿ ಸರ್ಕಾರದ ನೀತಿಗಳೇ ಮುಖ್ಯ ಕಾರಣವಾಗಿವೆ ಎಂಬುದನ್ನು ಗಮನಿಸಿದಾಗ ಸರ್ಕಾರದಿಂದ ಪ್ರಾಮಾಣಿಕವಾದ ಪ್ರಯತ್ನಕ್ಕಾಗಿ ಜನತೆ ಆಗ್ರಹಿಸಬೇಕಿದೆ. ಅಗತ್ಯವಿದೆ. ಯಾವ ಜಾಗತೀಕರಣ, ಖಾಸಗೀಕರಣ ಉದಾರೀಕರಣಗಳು ನಾಡಿನ ರೈತರ ಗೋಣಿಗೆ ನೇಣು ಬಿಗಿಯುತ್ತಿದೆಯೋ, ಕೈಗಾರಿಕೆಗಳನ್ನು ಧ್ವಂಸಗೊಳಿಸಿ ಬದುಕು ಛಿದ್ರಗೊಳಿಸುತ್ತಿದೆಯೋ ಅದೇ ಗರಗಸಕ್ಕೆ ಭಾಷೆ, ಸಂಸ್ಕೃತಿಯ ...

ಯಡಿಯೂರಪ್ಪ ಹುಸಿ ಪ್ರೋಸು...

ಪುಟ 6 ರಿಂದ

ಜನರು 'ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಯೋಜಿಸಲಾಗಿತ್ತು.

ಗ್ರಾಮೀಣಾಭಿವೃದ್ಧಿ ಸಚಿವೆ ಶೋಭಾ ಕರಂದ್ಲಾಜೆಯವರಂತೂ ನಾವು 'ಹಿಂದಿನ ಕಾಲಕ್ಕೆ ಹೋಗಬೇಕು...' ಎಂದರಂತೆ. ಹಿಂದಿನ ಕಾಲಕ್ಕೆ ಹೋಗೋಣ. ಹಾಗೆ ಹೋಗುವಾಗ ಸ್ವಲ್ಪ 50-60 ದಶಕದಲ್ಲಿ ಏನಾಯ್ತು ಅಂತಾನೂ ನೋಡಬಹುದು. ದೇಶದಲ್ಲಿ ಜನಕ್ಕೆ ಅಗತ್ಯವಾದಷ್ಟು ಆಹಾರ ಉತ್ಪಾದನೆ ಆಗದೇ ಹಾಹಾಕಾರಗಳು ಎದ್ದ ಸಮಯ ಅದು. ಆಗಿನ್ನೂ 'ಹಸಿರುಕ್ರಾಂತಿ' ಆಗಿರಲಿಲ್ಲ. ರಸಗೊಬ್ಬರದ ಬಳಕೆ ಇಷ್ಟು ವ್ಯಾಪಕ ಆಗಿರಲಿಲ್ಲ. ಎಂಬುದನ್ನೂ ನೆನಪಿಸಿ ಕೊಳ್ಳಬಹುದು. ಇಲ್ಲಿ ಇನ್ನೊಂದು ಸಮಸ್ಯೆ ಇದೆ.

ಇವರು ಸಾವಯವ ಕೃಷಿ ಪ್ರತಿಪಾದಿಸುತ್ತಾರೆ. ಸಾವಯವ ಕೃಷಿಗೆ ಸಗಣಿ ಬೇಕು. ದನಕರುಗಳ ಹೆಚ್ಚಾಗಬೇಕು, ಅದಕ್ಕಾಗಿ ಕಸಾಯಿಖಾನೆ ಬೇಡ, ಗೋ ಹತ್ಯೆ ಬೇಡ ಅಂತ ನಿಷೇಧಿಸುವುದು, ಹಲವರ ಆಹಾರದ ಹಕ್ಕಿನ ಮೇಲೆ ಧಾಳಿ ಮಾಡುವುದು, ಸಮಾಜದಲ್ಲಿ ಕೋಮುವಾದಿ ಘರ್ಷಣೆ, ವಿಭಜನೆ ಹುಟ್ಟು ಹಾಕುವುದು ಮುಂತಾದ ಉದ್ದೇಶಕ್ಕೆ ಈ ಪ್ರಶ್ನೆಯನ್ನು ಬಳಸಬಹುದು. ಇಲ್ಲಿ ಅಪಾಯವಿದೆ. ಜೊತೆಗೆ ಸಾವಯವ ಕೃಷಿಗೆ ಬೆಂಬಲ, ದೇಶೀಯ ಪಶುಗಳ ತಳಿ ರಕ್ಷಣೆ, ಗೋಶಾಲೆ ಇತ್ಯಾದಿ ಇತ್ಯಾದಿಗಳಿಗೆ ಅಂತ ಸರ್ಕಾರದ ಹಣವನ್ನು ಈ ಕಡೆಗೆ ಹರಿಸುವ ಸಾಧ್ಯತೆ ಇದೆ. ಸಂಘ ಪರಿವಾರದ, ಸಂಘಪರಿವಾರಕ್ಕೆ ಹತ್ತಿರವಾದ ಹಲವಾರು ಮಠಾಧೀಶರು, ಸಂಘ ಸಂಸ್ಥೆಗಳು ಈಗಾಗಲೇ ಗೋಶಾಲೆ, ದೇಶಿಯ ತಳಿ ಸಂರಕ್ಷಣೆ ಅಂತ ಏನೇನೋ ಮಾಡಿಟ್ಟುಕೊಂಡಿದ್ದಾರೆ. ಜನರ ತೆರಿಗೆಯ ಹಣ ಹೀಗೆ ಆರೆಸ್ಸೆಸ್ ಮಡಿಲಿಗೆ ಹೋಗಿ ಬೀಳಲು ಸಾವಯವ ಕೃಷಿ ಎಂಬುದು ಒಂದು ರಹದಾರಿಯಾದರೆ ಎಂದು ನಿಜವಾಗಿಯೂ ಪ್ರಜ್ಞಾವಂತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಈ ಬಗೆಗೆ ಎಚ್ಚರ ಅಗತ್ಯವಾಗಿದೆ.

ಇಷ್ಟೆಲ್ಲಾ ಚರ್ಚೆ, ಚಿಂತನೆ, ಮಂಥನ ನಡೆದ ಮೇಲೆ ಅದರ ಫಲಿತಾಂಶ ಏನು ಅಂತ ಬಜೆಟ್ ಬರುವವರೆಗೆ ಕಾದು ನೋಡಬಹುದು. ಕೃಷಿಗೆ ಪ್ರತ್ಯೇಕ ಬಜೆಟ್ ಕಷ್ಟ. ಕೇಂದ್ರ ಸರ್ಕಾರ ಆ ರೀತಿ ಮಾಡಿದರೆ ನಾನೂ ಮಾಡುತ್ತೇನೆ ಅಂದರಂತೆ ಯಡಿಯೂರಪ್ಪ. ಪ್ರಾಂತ ರೈತ ಸಂಘ ಕೃಷಿಗೆ ಕನಿಷ್ಠ ಬಜೆಟ್ ಶೇ 10 ಮೀಸಲಿಡಿ ಅಂತ ಬೇಡಿಕೆ ಇಟ್ಟಿದೆ. ನೋಡೋಣ ಏನಾಗುತ್ತದೋ.

ಇಲ್ಲೊಂದು ವಿಷಯ ಹೇಳಬೇಕು. ಮಾಜಿ ಸಂಸದ, ವಯೋವೃದ್ಧ, ಇದೀಗ ಬಿಜೆಪಿ ಸೇರಿರುವ ಜಿ.ಮಾದೇಗೌಡರಿಗೆ ಏನಾಗಿದೆ? ಸಭೆಯಲ್ಲಿ ರೈತರ ಮೇಲೆ ಗೋಲಿಬಾರ್ ಆಯ್ತು ಅಂತ ಯಡಿಯೂರಪ್ಪನವರು ವ್ಯಾಕುಲರಾಗುವ ಅಗತ್ಯವಿಲ್ಲ. ರೈತರು ವಿಧಾನಸೌಧಕ್ಕೆ ನುಗ್ಗಲು ಬಂದರೆ ಸುಮ್ಮನೆ ಬಿಡಬೇಕೆ.... ಎಂಬ ದಾಟಿಯಲ್ಲಿ ಮಾತು ಶುರು ಹಚ್ಚಿಕೊಂಡರಂತೆ. ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ತೀವ್ರವಾಗಿ ಅದಕ್ಕೆ ಆಕ್ಷೇಪ ವೆತ್ತಿದ್ದಕ್ಕೆ ಅವರ ಮಾತಿಗೆ ತಡೆ ಬಿದ್ದಿದೆ. ಅಧಿಕಾರಸ್ಥರನ್ನು ಓಲೈಸೋದಕ್ಕೆ ಈ ವಯಸ್ಸಿನಲ್ಲಿ ಮಾದೇಗೌಡರು ಈ ವಟ್ಟಕ್ಕೆ ಇಳಿಯಬೇಕೆ?

ಬೆಲೆ ಏರಿಕೆ, ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳ ವಿರುದ್ಧ

ಸಂಘರ್ಷಕ್ಕೆ ಕಾರ್ಮಿಕ ವರ್ಗದ ನಿರ್ಧಾರ



ಆಗಸ್ಟ್ 20 ಸಾರ್ವತ್ರಿಕ ಮುಷ್ಕರ

ಕಾರ್ಮಿಕ ಸಂಘಗಳ ಪ್ರಾಯೋಗಿಕ ಸಮಿತಿ (ಜೆಸಿಟಿಯು) ಕರ್ನಾಟಕ ರಾಜ್ಯ ಸಮಾವೇಶವು ಜುಲೈ 5ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಬೆಳಿಗ್ಗೆ 10.00 ಜರುಗಿತು.

ಹೊಸ ಆರ್ಥಿಕ ನೀತಿಗಳು, ಖಾಸಗೀಕರಣ ಮತ್ತು ಜಾಗರೀಕರಣದಿಂದಾಗಿ ಇಂದು ಗಂಭೀರ ಪರಿಸ್ಥಿತಿಯಲ್ಲಿ ಭಾರತ ಇದೆ. ತಯಾರಿಕಾ ಮತ್ತು ಸೇವಾ ವಲಯಗಳಲ್ಲಿ ಉದ್ಯಮಗಳನ್ನು ಪುನರ್ ರಚಿಸುವುದು ಸ್ಪಷ್ಟವಾಗಿ ಕಾರ್ಮಿಕರ ವಿರೋಧಿಯಾಗಿದೆ.

ದಿನದಿಂದ ದಿನಕ್ಕೆ ಗಗನಕ್ಕೇರುವ ಆಹಾರ ಪದಾರ್ಥಗಳ ಬೆಲೆ ಏರಿಕೆ ಒಂದೆಡೆಯಾದರೆ ಅಸಂಘಟಿತ ಕಾರ್ಮಿಕರ ಬದುಕು ಉಳಿಯುವುದು ಪ್ರಶ್ನೆ ಇನ್ನೊಂದೇ ಆಗಿದೆ.

ಆಗಸ್ಟ್ 20ರಂದು ಕರ್ನಾಟಕ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಲು ಈ ಸಮಾವೇಶ ಯಶಸ್ವಿಯಾಗಿ ನಡೆಯಿತು.

ವಿವಿಧ ಸಂಘಟನೆಗಳ ಕಾರ್ಮಿಕ ಮುಖಂಡರು ಆಗಸ್ಟ್ 20 ರ ಹೋರಾಟ ಯಶಸ್ವಿಗೊಳಿಸಲು ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಸವಿಸ್ತಾರವಾಗಿ ವಿವರಿಸಿದರು.



ಎಐಟಿಯುಸಿ ಮುಖಂಡರಾದ ವಸಂತ ರೈ, ಹೆಚ್‌ಎಂಎಸ್‌ನ ರಾಘವೇಂದ್ರ, ಟಿಯುಸಿಸಿ ಪರವಾಗಿ ಶಿವಶಂಕರ, ಎಐಯುಟಿಯುಸಿ, ಕೆ. ವೇಣುಗೋಪಾಲ, ವಿಮಾ ನೌಕರರ ಸಂಘಟನೆಯಿಂದ ನಾಗರಾಜ್, ಎಐಡಿಎಫ್ ರವೀಂದ್ರ, ಕೇಂದ್ರ ಸರ್ಕಾರಿ ನೌಕರರ ಸಂಘದಿಂದ ಬಿ.ಪ್ರಸಾದ, ಸಿಐಟಿಯುನ ಮಾರುತಿ ಮಾನ್ಪಡೆ, ಟಿಯುಸಿಸಿಯಿಂದ ಕೆ.ಸಿ.ವೆಂಕಟೇಶ, ಕೇಂದ್ರ ಸರ್ಕಾರ ನೌಕರರ ಸಂಘಟನೆಯಿಂದ ಸೀತಾಲಕ್ಷ್ಮಿ, ಹೋರಾಟ ಯಶಸ್ವಿಗೊಳಿಸುವ ಬಗ್ಗೆ ಮಾತನಾಡಿದರು.

ಸಿಐಟಿಯು ಸಂಘಟನೆಯಿಂದ ಕೆ.ಎನ್. ಉಮೇಶ್‌ರವರು ಮಾತನಾಡಿ ಆಗಸ್ಟ್ 20ರಂದು ಫ್ಯಾಕ್ಟರಿಗಳನ್ನು ಶಾಸ್ತ್ರಕ್ಕಾಗಿ ಮುಚ್ಚಿದರೆ ಸಾಲದು, ಕಾರ್ಖಾನೆಯ ಹೊರಗಿನ ಜನರು ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದು ಕರೆ ನೀಡಿದರು.

ಸಿಐಟಿಯು ಸಂಘಟನೆಯ ಮುಖಂಡರಾದ ಬಿ.ಮಾಧವರವರು ಹಾಗೂ ಎಲ್‌ಐಸಿ ನಾಗೇಶ್‌ರವರು ಎಸ್.ವರಲಕ್ಷ್ಮಿಯವರು ಉಪಸ್ಥಿತರಿದ್ದರು.

ಸಿಐಟಿಯು ವಿನ ರಾಜ್ಯ ಅಧ್ಯಕ್ಷರಾದ ಕಾಂ. ಬಿ.ಮಾಧವ, ಶೇಕಾದ್ರಿ, ಎಐಟಿಯುಸಿ ಯ ಶಿವಶಂಕರ್, ಟಿಯುಸಿಸಿಯ ರವೀಂದ್ರನ್ ಪಿಳ್ಳೆ, ರಕ್ಷಣಾ ವಲಯ ನೌಕರರ ಸಂಘದ ನೀಲಪ್ಪ, ಕೇಂದ್ರ ಸರ್ಕಾರಿ ನೌಕರರ ಸಂಘಟನೆಯ ರಾಘವೇಂದ್ರ, ಎಚ್‌ಎಂಎಸ್ ಸಂಘಟನೆಯ ಪ್ರಕಾಶ್, ಎಐಯುಟಿಯುಸಿ ಸಂಘಟನೆ.. ಇವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯು ಸಮಾವೇಶವನ್ನು ನಡೆಸಿಕೊಟ್ಟಿತು. ಆರಂಭದಲ್ಲಿ ಎಐಟಿಯುಸಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಅನಂತಸುಬ್ಬರಾವ್‌ರವರು ಕರಡು ನಿರ್ಣಯವನ್ನು ಮಂಡಿಸಿದರು. ಈ ನಿರ್ಣಯವನ್ನು ಅನುಮೋದಿಸಿ ಸಿಐಟಿಯುವಿನ ರಾಜ್ಯ ಕಾರ್ಯದರ್ಶಿ ಕಾಂ. ಪ್ರಸನ್ನಕುಮಾರ್ ಮಾತನಾಡಿದರು.

ವರದಿ : ಮಾಲಿನಿ ಮೇಸ್ತ

ಒತ್ತಾಯ, ಆಗ್ರಹಗಳೇನು?

1. ಕೂಡಲೇ ಬೆಲೆ ಏರಿಕೆ ನಿಯಂತ್ರಣಕ್ಕೆ ಈ ಕ್ರಮಗಳನ್ನು ಅನುಸರಿಸಬೇಕು.

(ಅ) ದೇಶಾದ್ಯಂತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕರಣ ಗೊಳಿಸಿ ಆ ಮೂಲಕ ಎಲ್ಲಾ ಅಗತ್ಯ ವಸ್ತುಗಳನ್ನು ಪಡಿತರ ಅಂಗಡಿಗಳ ಮೂಲಕವೇ ವಿತರಿಸಬೇಕು.

(ಆ) ಜೀವನಾವಶ್ಯಕ ವಸ್ತುಗಳ ಮುಂಗಡ ವ್ಯಾಪಾರವನ್ನು ಎಲ್ಲಾ ರೀತಿಯಿಂದಲೂ ನಿಷೇಧಿಸಬೇಕು.

(ಇ) ಪೆಟ್ರೋಲ್-ಡಿಸೇಲ್ ಮೇಲಿನ ತೆರಿಗೆಯನ್ನು ಕಡಿತಗೊಳಿಸಬೇಕು.

(ಈ) ಕಪ್ಪು ಮಾರುಕಟ್ಟೆ ವ್ಯವಸ್ಥೆ ಮತ್ತು ಕಳ್ಳ ದಾಸ್ತಾನುದಾರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.

2. ಎಲ್ಲಾ ಕಾರ್ಮಿಕ ಕಾನೂನುಗಳನ್ನು ಕಡ್ಡಾಯ ವಾಗಿ ಜಾರಿಗೊಳಿಸಬೇಕು. ಮುಖ್ಯವಾಗಿ ಕನಿಷ್ಠ ಕೂಲಿ, ಕೆಲಸದ ಅವಧಿ, ಸಾಮಾಜಿಕ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಕಾನೂನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಗುತ್ತಿಗೀಕರಣ ಮತ್ತು ಹೊರಗುತ್ತಿಗೆಯನ್ನು ನಿಲ್ಲಿಸಬೇಕು.

3. ಸಂಸತ್ತಿನಲ್ಲಿ ಇನ್ನು ಇತ್ಯರ್ಥವಾಗದೇ ಉಳಿದಿರುವ ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಾಮಾಜಿಕ ಸುರಕ್ಷ ಮಸೂದೆ ವ್ಯಾಪ್ತಿಗೆ ಬಿಪಿಎಲ್-ಎಪಿಎಲ್ ಎನ್ನುವ ತಾರತಮ್ಯವಿಲ್ಲದೆ ಎಲ್ಲಾ ಅಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ಒಳಪಡಿಸಬೇಕು ಮತ್ತು ಈ ಸಂಬಂಧ ಅಸಂಘಟಿತ ವಲಯದ ಉದ್ದಿಮೆಗಳ ರಾಷ್ಟ್ರೀಯ ಆಯೋಗ ಮತ್ತು ಕಾರ್ಮಿಕರಿಗೆ ಸಂಬಂಧಿಸಿ ಸಂಸತ್ತಿನ ಸ್ಥಾಯಿ ಸಮಿತಿಗಳು ನೀಡಿರುವ ಎಲ್ಲಾ ಶಿಫಾರಸ್ಸುಗಳ ಜಾರಿಯನ್ನು ಖಾತ್ರಿಪಡಿಸಬೇಕು.

4. ರೈತರಿಗಾಗಿ ಜಾರಿ ಮಾಡಿರುವ ಸಾಲ ಮನ್ನಾ ಯೋಜನೆಯನ್ನು ಎಲ್ಲಾ ಖಾಸಗಿ ಲೇವಾದೇವಿಗಾರರ ಸಾಲಕ್ಕೂ ವಿಸ್ತರಿಸಬೇಕು ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳು ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಸಾಲ ಯೋಜನೆಯನ್ನು ವಿಸ್ತರಿಸಬೇಕು.

5. ಸರ್ಕಾರಿ ನೇಮಕಾತಿ ಮೇಲಿನ ನಿರ್ಬಂಧವನ್ನು ಹಿಂತೆಗೆಯಬೇಕು. 6ನೇ ವೇತನ ಆಯೋಗದಲ್ಲಿರುವ ಎಲ್ಲಾ ನಕರಾತ್ಮಕ ಮತ್ತು ತಾರತಮ್ಯ ಅಂಶಗಳನ್ನು ತೆಗೆದು, ಅದನ್ನು ಎಲ್ಲಾ ನೌಕರ ಸಂಘಗಳ ಜೊತೆ ಸಮಾಲೋಚನೆ ನಡೆಸಿದ ಬಳಿಕ ಜಾರಿಗೊಳಿಸಬೇಕು. ಗ್ರಾಮೀಣ ಅಂಚೆ ಸೇವಕರ ಸೇವೆಯನ್ನು ಖಾಯಂಗೊಳಿಸಿ ಅವರಿಗೆ ಪಿಂಚಣಿ ಮಂಜೂರು ಮಾಡಬೇಕು.

6. ಗುತ್ತಿಗೆ ಕಾರ್ಮಿಕರನ್ನು ಒಳಗೊಂಡಂತೆ ಕೇಂದ್ರ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಸಂಬಂಧಿಸಿದ ವೇತನ ಮಾತುಕತೆಯನ್ನು ಕೂಡಲೇ ಇತ್ಯರ್ಥಗೊಳಿಸಬೇಕು.

ಸಮಾವೇಶವು ಈ ಕೆಳಕಂಡ ಕಾರ್ಯಕ್ರಮಗಳನ್ನು ಸರ್ವಾನುಮತದಿಂದ ಕೈಗೊಂಡಿದೆ.

- ◎ 2008, ಜುಲೈ 15 ರೊಳಗಾಗಿ ರಾಜ್ಯ/ಜಿಲ್ಲೆ ಮತ್ತು ಕೈಗಾರಿಕಾವಾರು ಜಂಟಿ ಸಮಾವೇಶಗಳನ್ನು ನಡೆಸುವುದು.
- ◎ 2008 ಜುಲೈ 30 ಎಲ್ಲಾ ರಾಜ್ಯ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಸಾಮೂಹಿಕ ಬೃಹತ್ ಪ್ರದರ್ಶನ-ಧರಣಿ ನಡೆಸುವುದು.
- ◎ 2008 ಆಗಸ್ಟ್ 4, ಪ್ರದರ್ಶನದ ಮೂಲಕ ಮುಷ್ಕರದ ನೋಟಿಸ್‌ನ್ನು ನೀಡುವುದು.
- ◎ 2008, ಆಗಸ್ಟ್ 20 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸುವುದು.

ಇಂತಹ ಜಂಟಿ ಕಾರ್ಯಾಚರಣೆಗಳ ಮೂಲಕ ರಾಜ್ಯಾದ್ಯಂತ ಮುಷ್ಕರ, ಪ್ರತಿಭಟನೆ, ರ್‍ಯಾಲಿಗಳನ್ನು ನಡೆಸ ಬೇಕೆಂದು ಸಿಐಟಿಯು ಕರೆ ನೀಡಿದೆ.

ಸಮಾವೇಶದ ನಿರ್ಣಯ

ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿ ಮತ್ತೊಮ್ಮೆ ಕರೆ ನೀಡಿರುವ ಅಖಿಲ ಭಾರತ ಮುಷ್ಕರ ಮುಂಬರುವ ಆಗಸ್ಟ್ 20ರಂದು ನಡೆಯಲಿದೆ. ಕರ್ನಾಟಕದ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ಈ ಮುಷ್ಕರವನ್ನು ಯಶಸ್ವಿಗೊಳಿಸಬೇಕಾಗಿದೆ.

ಹೊಸ ಆರ್ಥಿಕ ನೀತಿಗಳು, ಖಾಸಗೀಕರಣ ಮತ್ತು ಜಾಗತೀಕರಣದಿಂದಾಗಿ ಇಂದು ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ತಯಾರಿಕಾ ಮತ್ತು ಸೇವಾ ವಲಯಗಳಲ್ಲಿ ಉದ್ಯಮಗಳನ್ನು ಪುನರ್ ರಚಿಸುವುದು ಸ್ಪಷ್ಟವಾಗಿ ಕಾರ್ಮಿಕರ ವಿರೋಧಿಯಾಗಿದೆ. ಈ ಪ್ರಕ್ರಿಯೆ ಸಂಘಟಿತ ಅಥವ ಅಸಂಘಟಿತ ಯಾವುದೇ ಕ್ಷೇತ್ರದಲ್ಲಾದರೂ ಕಾರ್ಮಿಕ ವಿರೋಧಿಯಾಗಿದೆ.

ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆ ಪ್ರಕಾರ ಕಾರ್ಮಿಕರ ಶ್ರಮದಿಂದ ಉತ್ಪನ್ನಗಳಿಗೆ ಹೆಚ್ಚಾಗುವ ಮೌಲ್ಯದಲ್ಲಿ ಜಾಗತೀಕರಣಕ್ಕೆ ಮೊದಲು ಕಾರ್ಮಿಕರ ಪಾಲು ಶೇ.33ರಷ್ಟು ಇದ್ದದ್ದು ಈಗ ಶೇ.17ಕ್ಕೆ ಕುಸಿದಿದೆ. ಹದಿನೈದು ವರ್ಷಗಳ ಜಾಗತಿಕ ದಶಾ ಅವಧಿಗೆ ಮೊದಲು ಕಾರ್ಮಿಕರ ಶ್ರಮದಿಂದ ಉತ್ಪನ್ನಗಳಿಗೆ ಹೆಚ್ಚುವ ಮೌಲ್ಯದಲ್ಲಿ ಮಾಲೀಕರ ಪಾಲು ಶೇ.12ರಷ್ಟು ಇತ್ತು. ಆದರೆ ಈಗ ಈ ಪಾಲು ಶೇ.45ಕ್ಕೆ ತಲುಪಿದೆ ಎಂಬುದನ್ನು ಈ ಸಮೀಕ್ಷೆ ತಿಳಿಸಿದೆ. ಕಾರ್ಮಿಕರು ಮತ್ತು ಸಾಮಾನ್ಯ ಜನತೆಯ ಹಿತದೃಷ್ಟಿಗೆ

ಪುಟ 14ಕ್ಕೆ

ದುಡಿಯುವ ವರ್ಗದ ಪಣ....

ಪುಟ 13 ರಿಂದ

ವಿರುದ್ಧವಾದ ಫಲಿತಾಂಶಗಳು ಉದಾರೀಕರಣ ನೀತಿಗಳಿಂದ ದೊರಕಿದೆ. ಸಂಘಟಿತ ವಲಯದಲ್ಲಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆಗೊಳಿಸುತ್ತಾ, ಅದೇ ಸಂದರ್ಭದಲ್ಲಿ ಅಸುರಕ್ಷಿತ ಕಾರ್ಮಿಕರ ಸಂಖ್ಯೆ ಹೆಚ್ಚಿಸುತ್ತಾ ಉದ್ಯಮಿಗಳು ತಮ್ಮ ಲಾಭ ಹೆಚ್ಚಿಸಿಕೊಂಡರು. ಗುತ್ತಿಗೆ ಆಧಾರಿತ, ಸಾಂದರ್ಭಿಕ ಕಾರ್ಮಿಕರನ್ನು ನೇಮಿಸಿಕೊಳ್ಳುವ ಹಾಗೂ ಹಲವಾರು ವರ್ಷ ಕಾಲ ತರಬೇತಿ ಅವಧಿ ಎಂತಲೇ ಮುಂದುವರೆಸಿಕೊಂಡು ಹೋಗುವ ತಂತ್ರಗಳನ್ನು ಉದ್ಯಮಗಳು ಅಳವಡಿಸಿಕೊಂಡಿವೆ. ದೇಶದೊಳಗಿನ ಕಾರ್ಮಿಕ ನೀತಿ ನಿಯಮಗಳಿಗೆ ವಿರುದ್ಧವಾಗಿಯೇ ಇಂತಹ ಕೃತ್ಯಗಳಲ್ಲಿ ತೊಡಗಿದ್ದಾರೆ.

ಇಂತಹ ಆರ್ಥಿಕ ಉದಾರೀಕರಣ ನೀತಿಗಳು ಜಗತ್ತಿನ ಜನಸಂಖ್ಯೆಯ ಶೇ.50ರಷ್ಟು ಜನಸಂಖ್ಯೆಯನ್ನು ಸಂಕಷ್ಟಕ್ಕೀಡು ಮಾಡಿದೆ. ಭಾರತದ ಶೇ,.70ರಷ್ಟು ಜನಸಂಖ್ಯೆಯ ಪ್ರತಿದಿನದ ಆದಾಯ ರೂ.20ಗಳಿಗಿಂತಲೂ ಕಡಿಮೆ ಎಂದು ಸರ್ಕಾರ ನೇಮಿಸಿದ್ದ ಸಮಿತಿ ನೀಡಿರುವ ಎನ್‌ಸಿಇಯುಎಸ್‌ನಲ್ಲಿ ವಿವರಿಸಿದೆ. ಇದಕ್ಕೆ ತದ್ವಿರುದ್ಧವಾಗಿ ಭಾರತದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು ಜಗತ್ತಿನ 10 ಮಂದಿಯಲ್ಲಿ 4 ಮಂದಿ ಭಾರತೀಯರಾಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗಷ್ಟೇ ಮುಕ್ತಯವಾದ ವಿಧಾನಸಭೆ ಚುನಾವಣೆಯಲ್ಲಿ ಹೊಸ ಶ್ರೀಮಂತರ ಹಣಬಲ ಪ್ರದರ್ಶನವಾಗಿದೆ. ಹಲವಾರು ಮಂದಿ ಅಭ್ಯರ್ಥಿಗಳು ನೂರಾರು ಕೋಟಿ ರೂ.ಸಂಪತ್ತು ಹೊಂದಿರುವುದನ್ನು ಚುನಾವಣೆ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ


ಎಸ್.ವರಲಕ್ಷ್ಮಿ

ಘೋಷಿಸಿದ್ದಾರೆ. ಈ ಎಲ್ಲಾ ಸಂಪತ್ತು ಹೊಸ ಆರ್ಥಿಕ ಉದಾರೀಕರಣ ನೀತಿಗಳ ಫಲವಾಗಿಯೇ ಕ್ರೋಢೀಕರಣವಾಗಿದೆ.

ಜಾಗತೀಕರಣ ಆರ್ಥಿಕತೆಯ ಮೇಲೆ ಭಯಾನಕ ದುಷ್ಪರಿಣಾಮ ಬೀರಿದೆ. ಜಾಗತೀಕರಣ ನೀತಿಗಳಿಗೆ ಮುನ್ನ 30 ಡಾಲರ್‌ನಷ್ಟದ ಪ್ರತಿ ಬ್ಯಾರಲ್ ಕಚ್ಚಾ ತೈಲದಲ್ಲಿ ಪ್ರಸ್ತುತ 140 ಡಾಲರ್‌ಗೆ ತಲುಪಿದೆ. ವಿದ್ಯುತ್ ದರಗಳನ್ನು ಹೆಚ್ಚಿಸುವ ದುರುದ್ದೇಶದಿಂದ ಅಮೆರಿಕಾದೊಂದಿಗೆ ಅಣು ಒಪ್ಪಂದದ ಮಾಡಿಕೊಳ್ಳಬೇಕೆಂದು ಒತ್ತಾಯಿಸುತ್ತಿರುವ ಬಂಡವಾಳಶಾಹಿಗಳ ಪರವಾಗಿ ಕೇಂದ್ರ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಇದರೊಂದಿಗೆ ಇರಾನ್-ಪಾಕಿಸ್ತಾನ ಪೈಪ್‌ಲೇನ್ ಮೂಲಕ ತೈಲ ಸಂಗ್ರಹಿಸುವ ಮಹತ್ವಕಾಂಕ್ಷಿ ಯೋಜನೆ ಈಡೇರುವ ಸಾಧ್ಯತೆಗಳನ್ನು ಬುಡಮೇಲು ಮಾಡುತ್ತಿದೆ.

ಕೇಂದ್ರದಲ್ಲಿ ಆಡಳಿತ ನಡೆಸಿದ ಎನ್‌ಡಿಎ ಸರ್ಕಾರ ಸಹ ಯುಪಿಎ ಅನುಸರಿಸುತ್ತಿರುವ ಖಾಸಗೀಕರಣ ನೀತಿಗಳನ್ನೇ ಅನುಸರಿಸುತ್ತಾ ಬಂದು ವಿದ್ಯುತ್ ವಲಯದ ಮೇಲೆ ಖಾಸಗಿ ಏಕಸ್ವಾಮ್ಯಕ್ಕೆ ಉತ್ತೇಜನ ನೀಡಿತ್ತು. ತೈಲ ವಲಯವನ್ನು ಖಾಸಗೀಕರಣಗೊಳಿಸಿದ್ದರ ಪರಿಣಾಮವಾಗಿ ಖಾಸಗಿ ಏಕಸ್ವಾಮ್ಯ ಕಂಪನಿಗಳಾದ ರಿಲಯೆನ್ಸ್ ಪೆಟ್ರೋಲಿಯಂ ನಮ್ಮ ಭೂಮಿಯಲ್ಲಿ ಪ್ರತಿ ಬ್ಯಾರಲನ್ನು ಅತಿ ಕಡಿಮೆ ವೆಚ್ಚದಲ್ಲಿ ಅಂದರೆ 30 ಡಾಲರ್‌ಗೆ ಉತ್ಪಾದಿಸಿ ನಮಗೇ ಜಾಗತಿಕ ಮಾರುಕಟ್ಟೆ ದರ 140 ಡಾಲರ್‌ನಂತೆ ಮಾರಾಟ ಮಾಡುತ್ತಿದೆ. ಕಳೆದ ವರ್ಷ ರಿಲಯನ್ಸ್ ಕಂಪನಿಯೊಂದೇ ತೈಲ ಉತ್ಪಾದನೆಯಿಂದ 6,500 ಕೋಟಿ ರೂ. ಲಾಭ ಗಳಿಸಿದೆ. ಯುಪಿಎ ಸರ್ಕಾರವಾಗಲಿ ಅಥವಾ ಮುಂದೆ ಆಡಳಿತ ನಡೆಸಲು ತುದಿಗಾಲಲ್ಲಿ ನಿಂತಿರುವ ಬಿಜೆಪಿಗಳು ಈ ಭಾರೀ ಲಾಭದ ಮೇಲೆ ತೆರಿಗೆ


ಹೆಚ್.ವಿ.ಅನಂತಸುಬ್ಬರಾವ್

ಹೇರಬೇಕೆಂಬ ಎಡ ಪಕ್ಷಗಳ ಒತ್ತಾಯಕ್ಕೆ ಸಮ್ಮತಿ ಸೂಚಿಸುತ್ತಿಲ್ಲ. ಇಂತಹ ಲಾಭದ ಮೇಲೆ ಅಮೆರಿಕ ಸರ್ಕಾರ ಸಹ ತೆರಿಗೆ ವಿಧಿಸಿದೆ ಎಂಬುದನ್ನು ತಿಳಿದುಕೊಳ್ಳುವಲ್ಲಿ ಅವರು ವಿಫಲರಾಗಿದ್ದಾರೆ. ಭಾರತದಲ್ಲಿನ ಆಡಳಿತ ವರ್ಗಗಳ ಮೈತ್ರಿ ದೇಶದ ಜನತೆಯನ್ನು ಲೂಟಿ ಮಾಡುತ್ತಿರುವ ಬೃಹತ್ ಕಂಪನಿಗಳ ಮೇಲೆ ತೆರಿಗೆ ವಿಧಿಸುವುದರ ವಿರುದ್ಧವಾಗಿವೆ.

ಬೆಲೆ ಏರಿಕೆಯಿಂದ ಜನತೆ ತತ್ತರಿಸುತ್ತಿದ್ದಾರೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರಗಳು, ಏರಿಕೆಯಾಗಿವೆ ಎಂದು ಹೇಳಿ ಕೇಂದ್ರ ಸರ್ಕಾರ ದರಗಳನ್ನು ಹೆಚ್ಚಿಸಿದೆ. ಸಾಮಾನ್ಯ ಜನ ಪಾವತಿಸುವ ಪೆಟ್ರೋಲ್ ಡೀಸೆಲ್ ದರದಲ್ಲಿ ಶೇ.50ಕ್ಕೂ ಹೆಚ್ಚು ಹಣವನ್ನು ಸರ್ಕಾರ ತೆರಿಗೆ ರೂಪದಲ್ಲಿ ಸಂಗ್ರಹಿಸುತ್ತಿದೆ. ತೆರಿಗೆ ಪದ್ಧತಿಯನ್ನು ಪುನರ್ ರೂಪಿಸಲು ಅಥವಾ ಖಾಸಗಿ ಕಂಪನಿಗಳು ಗಳಿಸುವ ಲಾಭದ ಮೇಲೆ ತೆರಿಗೆ ವಿಧಿಸುವ ಸರ್ಕಾರ ತಿರಸ್ಕರಿಸಿದೆ. ಇಂಧನ ದರಗಳನ್ನು ಹೆಚ್ಚಿಸಿದ್ದು ಹಣದುಬ್ಬರ ಏರಿಕೆಗೆ ಕಾರಣವಾಗಿದ್ದು ಮೇ 17ಕ್ಕೆ ಕೊನೆಗೊಂಡ ವಾರದಲ್ಲಿ ಶೇ.13.05ಕ್ಕೆ ತಲುಪಿದೆ.

ಕೇಂದ್ರ ಸರ್ಕಾರ ಇರಾನ್‌ನೊಂದಿಗಿನ ಅನಿಲ ಕೊಳವೆ ಒಪ್ಪಂದ ತಿರಸ್ಕರಿಸಿದ್ದು ಭಾರತ ದೀರ್ಘಕಾಲೀನದಲ್ಲಿ ತೈಲ ಕ್ಷೇತ್ರದಲ್ಲಿ ಸ್ವಾವಲಂಬನೆಗಳಿಸುವಲ್ಲಿ ಭಾರಿ ಅಡ್ಡಿಯಾಗಲಿದೆ. ಅಮೆರಿಕಾ ಒತ್ತಡದಿಂದಾಗಿ ಇರಾನ್ ನೊಂದಿಗೆ ಅನಿಲಕೊಳವೆ ಒಪ್ಪಂದ ಮಾಡಿಕೊಳ್ಳದಿರುವುದು ದೇಶದ ವಿದ್ಯುತ್ ವಲಯಕ್ಕೆ ಮಾತ್ರ ಧಕ್ಕೆಯಾಗುವುದಿಲ್ಲ. ರಸಗೊಬ್ಬರ ತಯಾರಿಕೆ ಮೇಲೂ ಗಂಭೀರ ಪರಿಣಾಮ ಬೀರಲಿದೆ. ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಒಂದಾದ ನಾಪ್ತಾವನ್ನು ರಸಗೊಬ್ಬರ ತಯಾರಿಕೆಯಲ್ಲಿ ಕಚ್ಚಾ ಉತ್ಪನ್ನವಾಗಿ ಬಳಕೆ ಮಾಡಲಾಗುತ್ತದೆ.

ಹೊಸ ಜಾಗತೀಕರಣ ನೀತಿಗಳು ರಸಗೊಬ್ಬರ ವಲಯದ ಮೇಲೆ ಗಂಭೀರ ಪರಿಣಾಮ ಬೀರಿದೆ. ಇಷ್ಟು ಮಾತ್ರವಲ್ಲದೆ ರಸಗೊಬ್ಬರ ಉತ್ಪಾದನೆ ಮತ್ತು ಸರಬರಾಜಿಗೆ ನೀಡುತ್ತಿದ್ದ ಸಹಾಯಧನ ಕಡಿತಗೊಳಿಸಿದ್ದರಿಂದ ಹಲವಾರು ರಾಸಾಯನಿಕ ಗೊಬ್ಬರ ತಯಾರಿಕೆ ಕಾರ್ಖಾನೆಗಳು ರೋಗಗ್ರಸ್ತವಾಗಿವೆ. ರಾಜ್ಯದಲ್ಲಿ ರಸಗೊಬ್ಬರ ಸಮರ್ಪಕವಾಗಿ ದೊರೆಯದಿರಲು ಕಾರಣ ಯಾರು ಎಂಬುದರ ಕುರಿತು ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ಕಿತ್ತಾಟಕ್ಕೆ ರಾಜ್ಯ ವಿಧಾನಸಭೆ ವೇದಿಕೆಯಾಯಿತು. ಯುಪಿಎ ಮತ್ತು ಎನ್‌ಡಿಎ ಎರಡೂ ಸರ್ಕಾರಗಳು ಈ ಬಿಕ್ಕಟ್ಟಿಗೆ ಕಾರಣವಾಗಿದ್ದು ಸಾಮಾನ್ಯ ಜನ ಮತ್ತು ರೈತರು ಬಲಿಪಶುಗಳಾಗಿದ್ದಾರೆ.

ಹೊಸದಾಗಿ ಅಧಿಕಾರಕ್ಕೆ ಬಂದ ಸರ್ಕಾರವು ರಾಜ್ಯದ ರೈತರ ಮೇಲೆ ಗೋಲಿಬಾರ್ ನಡೆಸಿದೆ. ಹಾಗೂ ಈ ಸರ್ಕಾರ ಬಂದ ನಂತರ ರೈತರ ಆತ್ಮಹತ್ಯೆ ಜಾಸ್ತಿಯಾಗಿದೆ. ಈ ಸಾವುಗಳಿಗೆ ಪ್ರಮುಖ ಕಾರಣ ಎಂದರೆ ಹೊಸ ಆರ್ಥಿಕ ನೀತಿಗಳು, ಕೃಷಿಗೆ ಅಗತ್ಯವಾದ, ಕಚ್ಚಾ ಉತ್ಪನ್ನಗಳ ದರಗಳನ್ನು ಇಚ್ಛಾನುಸಾರ ನಿಗದಿಪಡಿಸುವುದುದಾಗಿದೆ. ರೈತರು ತಾವು ಮಾಡುತ್ತಿರುವ ವೆಚ್ಚ ಎಷ್ಟೆಂಬುದನ್ನು ಅರಿಯಲು ಸಹ ವಿಫಲರಾಗಿದ್ದಾರೆ. ಇದರಿಂದಾಗಿ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಇಂತದೇ ಶಕ್ತಿಗಳು ಕಾರ್ಮಿಕರ ವೇತನ ಕುಂಠಿತವಾಗಲು ಕಾರಣವಾಗಿವೆ. ಕಾರ್ಮಿಕ ಕಾಯ್ದೆಗಳನ್ನು ಸಮರ್ಪಕವಾಗಿ ಜಾರಿಗೊಳಿಸದಿರುವುದರಿಂದ ಕಾರ್ಮಿಕರ ಬದುಕು ದುಸ್ತರವಾಗುತ್ತಿದೆ. ಕಾರ್ಮಿಕ ಸಂಘಟನೆಗಳನ್ನು ಹೊಸಕಿ ಹಾಕುವುದು ಮತ್ತು ಕೃಷಿ ವಲಯವನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಮೂಲಕ ಆಳುವ ವರ್ಗಗಳು ಬಂಡವಾಳಶಾಹಿಗಳಿಗೆ ಅನುಕೂಲ ಕಲ್ಪಿಸುವಂತೆ ಕಾರ್ಯಮಗ್ನವಾಗಿವೆ.

ಕಾರ್ಮಿಕ ವರ್ಗ ಇಂತಹ ಏಕಸ್ವಾಮ್ಯ ಶಕ್ತಿಗಳು ಮತ್ತು ಎಲ್‌ಪಿಜಿ ನೀತಿಗಳನ್ನು ಅನುಸರಿಸುವುದರ ವಿರುದ್ಧ ಹೋರಾಟ ನಡೆಸಲು ಮುಂದಾಗಬೇಕು. ಕಾರ್ಮಿಕರು, ರೈತರು, ವಿದ್ಯಾರ್ಥಿ, ಯುವಜನರು, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗಗಳು ಐಕ್ಯ ಕಾರ್ಯಾಚರಣೆ ನಡೆಸಬೇಕೆಂದು ಕರೆ ನೀಡಲಾಗುತ್ತಿದೆ.

ಕೇಂದ್ರ ಸಾರ್ವಜನಿಕ ಉದ್ದಿಮೆಗಳು ಸೇರಿದಂತೆ ವಿಮಾ ಮತ್ತು ಬ್ಯಾಂಕಿಂಗ್ ವಲಯದ ಸಿಬ್ಬಂದಿ ವೇತನ ಹೆಚ್ಚಿಸುವಲ್ಲಿ ವಿಳಂಬಗೊಳಿಸಲಾಗುತ್ತಿದೆ. ಇದರಿಂದಾಗಿ ಕೇವಲ ಈ ವೇತನವನ್ನೇ ಅವಲಂಬಿಸಿರುವ ಕಾರ್ಮಿಕರು ಜೀವನ ಸಾಗಿಸಲು ಹೆಣಗಾಡುವಂತಾಗಿದೆ.


ಆರನೇ ವೇತನ ಆಯೋಗ ಅಪಾರ ಪ್ರಮಾಣದ ಕೇಂದ್ರ ಸರ್ಕಾರಿ ನೌಕರರಿಗೆ ನ್ಯಾಯ ಕಲ್ಪಿಸುವಲ್ಲಿ ವಿಫಲವಾಗಿದೆ. ಈ ಅನ್ಯಾಯವನ್ನು


ಎಸ್.ಪ್ರಸನ್ನಕುಮಾರ್

ಸರಿಪಡಿಸಬೇಕೆಂದು ಒತ್ತಾಯಿಸಲಾಗುತ್ತಿದೆ. ಪಿಂಚಣಿ ಪಡೆಯುತ್ತಿರುವ ಸರ್ಕಾರಿ ನೌಕರರನ್ನು ಕೊಡುಗೆ ಮಾದರಿಯ ಪಿಂಚಣಿ ಯೋಜನೆಗೆ ಒಳಗಾಗುವಂತೆ ಒತ್ತಡ ಹೇರಲಾಗುತ್ತಿದೆ.

5ನೇ ವೇತನ ಆಯೋಗದ ಸಂದರ್ಭದಲ್ಲೂ ರಾಜ್ಯ ಸರ್ಕಾರಿ ನೌಕರರು ಸಮರ್ಪಕವಾದ ಸೌಲಭ್ಯಗಳನ್ನು ಪಡೆದಿರಲಿಲ್ಲ. ಸರ್ಕಾರಿ ನೌಕರರನ್ನು ದಿನೇ ದಿನೇ ಕಡಿಮೆಗೊಳಿಸುತ್ತಿರುವುದು ಯುವಜನತೆಯಲ್ಲಿ ಅಮೂಲ್ಯ ಮಾನವ ಸಂಪನ್ಮೂಲವನ್ನು ವ್ಯರ್ಥ ಮಾಡುತ್ತಿದೆ ಮತ್ತು ಗ್ರಾಮೀಣ ಪ್ರದೇಶದ ಯುವಜನತೆ ಮೇಲೆ ಇದು ಮಾರಕ ಪರಿಣಾಮ ಬೀರಿದೆ. ಎಲ್‌ಪಿಜಿ ನೀತಿಗಳಿಂದಾಗಿ ಸರ್ಕಾರಗಳು ಸ್ವಯಂಸೇವೆ ಮಾದರಿಯ ನೇಮಕಾತಿ ಮತ್ತು ಗುತ್ತಿಗೆ ಆಧಾರಿತ ನೇಮಕಾತಿಯನ್ನು ಮಾಡಿಕೊಳ್ಳುತ್ತಿವೆ. ಗುತ್ತಿಗೆ ಪದ್ಧತಿ, ಪೌರಕಾರ್ಮಿಕರು, ಆರೋಗ್ಯವಲಯ ಮತ್ತು ಇತರ ಸೇವಾ ವಲಯದ ಸಿಬ್ಬಂಧಿ ಮೇಲೆ ಗಂಭೀರ ಪರಿಣಾಮ ಬೀರಿದೆ. ಅಂಗನವಾಡಿ, ಅಕ್ಷರದಾಸೋಹ ಮತ್ತಿತರ ಸರ್ಕಾರಿ ಯೋಜನೆಗಳಿಗೆ 'ಸ್ವಯಂಸೇವೆ' ಆಧಾರಿತವಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಈ ಪದ್ಧತಿ ಸಂವಿಧಾನದ ಮೂಲ ಆಶಯವಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಸಿದ್ಧಾಂತಕ್ಕೆ ವಿರುದ್ಧವಾಗಿದೆ.

ಮೇಲೆ ಪ್ರಸ್ತಾಪಿಸಿರುವ ಹಲವಾರು ಬೇಡಿಕೆಗಳೊಂದಿಗೆ ಬೆಲೆ ಏರಿಕೆ ನಿಯಂತ್ರಣ, ಕಾರ್ಮಿಕ ಕಾನೂನುಗಳ ರಕ್ಷಣೆ, ಅಸಂಘಟಿತ ವಲಯದ ಕಾರ್ಮಿಕರ ವೇತನ ಕಾಯ್ದೆ ಅಳವಡಿಸಬೇಕು. ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ


ಕೆ.ಎನ್.ಉಮೇಶ್

ಸಲೀಸಾಗಿ ಸಾಲ ದೊರೆಯುವಂತೆ, ರಸಗೊಬ್ಬರ, ಬಿತ್ತನೆ ಬೀಜ ಮತ್ತಿತರ ಕೃಷಿಗೆ ಬಳಸುವ ಕಚ್ಚಾ ಉತ್ಪನ್ನಗಳನ್ನು ಸಮರ್ಪಕವಾಗಿ ಪೂರೈಸಬೇಕೆಂದು ಒತ್ತಾಯಿಸಬೇಕಾಗಿದೆ. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಬೇಕು. ರೈತರು ಕಬ್ಬನ್ನು ಸರಬರಾಜು ಮಾಡಿದ ತಕ್ಷಣ ಹಣ ಪಾವತಿಸಬೇಕು ಎಂದು ಒತ್ತಾಯಿಸಲಾಗುತ್ತಿದೆ.

ನಗರ ಪ್ರದೇಶದ ಬಡವರು ಮನೆ ಕಟ್ಟಿಕೊಳ್ಳಲು ಸರ್ಕಾರ ಉಚಿತವಾಗಿ ನಿವೇಶನ ನೀಡಬೇಕು, ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು, ಉಚಿತವಾಗಿ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕಲ್ಪಿಸಬೇಕು. ಸರ್ಕಾರಿ ಶಾಲೆಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಹಿಸಬಾರದು. ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವುದರೊಂದಿಗೆ ಪಡಿತರ ವ್ಯವಸ್ಥೆಯನು ಸಾರ್ವತ್ರೀಕರಣಗೊಳಿಸಬೇಕು.

ಎಲ್ಲೆಲ್ಲಿ ಸಾಧ್ಯವಾದರೆ ಅಲ್ಲೆಲ್ಲ ವಿದ್ಯಾರ್ಥಿಗಳು, ಕಾರ್ಮಿಕರು, ಯುವಜನರು, ರೈತರು, ಮಹಿಳಾ ಕಾರ್ಮಿಕರನ್ನು ಒಳಗೊಂಡಂತೆ ಸಮಿತಿಗಳನ್ನು ರಚಿಸುವ ಮೂಲಕ ಪ್ರತಿಭಟನೆಗಳನ್ನು ಯಶಸ್ವಿಗೊಳಿಸಲು ಜೆಸಿಟಿಯು ಕರೆ ನೀಡಿದೆ. ಕಲಾವಿದರು ಮತ್ತು ಇತರ ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ಸಹ ಮುಷ್ಕರದಲ್ಲಿ ಭಾಗವಹಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸಂಘಟಿಸಿರುವ ಜೆಸಿಟಿಯು ಸಮಾವೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಜುಲೈ 30ರಂದು ರಾಜ್ಯಾದ್ಯಂತ ರ್‍ಯಾಲಿ, ಪ್ರತಿಭಟನೆ, ಮುಷ್ಕರಗಳನ್ನು ಸಂಘಟಿಸಬೇಕು. ಎಲ್‌ಪಿಜಿ ನೀತಿಗಳನ್ನು ವಿರೋಧಿಸುವ ಕಾರ್ಮಿಕರ ಹಕ್ಕುಗಳು, ಸಾಮಾನ್ಯ ಜನರ ಜೀವನವನ್ನು ರಕ್ಷಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಸಂಘಟನೆಗಳ ಬೆಂಬಲ ಪಡೆಯಬೇಕು.

ಈ ಹಿನ್ನೆಲೆಯಲ್ಲಿ ದೇಶದ ಕಾರ್ಮಿಕವರ್ಗಕ್ಕೆ ಬಾಧಿಸುತ್ತಿರುವ ಈ ಕೆಳಕಂಡ ಜ್ವಲಂತ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸಿ ದೇಶವ್ಯಾಪಿ ಚಳುವಳಿ ನಡೆಸಬೇಕೆಂದು ಕರೆ ನೀಡಿದೆ.

ಫೋಟೋ: ವೆಂಕಟೇಶ್.ಜಿ, ಕೆ.ಆರ್.ಪುರಂ

ಅಮೆರಿಕಾಕ್ಕೆ ನ್ಯುಮೋನಿಯಾ ಭಾರತಕ್ಕೆ ಲಕ್ವಾ

ನೋಟ



ಜಿ. ಭಾಸ್ಕರ ಮಯ್ಯ

ಮೇರಿಕಾಕ್ಕೆ 'ನೆಗಡಿ'ಯಾದರೆ ಭಾರತಕ್ಕೆ ೋನಿಯಾ ಎಂಬುದು ಹಳೆಯ ಗಾದೆ. ಆದರೆ ು ಅಮೇರಿಕಾಕ್ಕೆ 'ನ್ಯುಮೋನಿಯಾ', ಹಾಗಿದ್ದರೆ ರತಕ್ಕೆ ಏನು? ಪ್ರಾಯಶಃ ಲಕ್ವಾ ಡೆದಿರಬಹುದೋ ಏನೋ? ಈ ಮಾತನ್ನು ುವ ಕಾರಣವೆಂದರೆ ಸದ್ಯದ ಆರ್ಥಿಕ ಬಿಕ್ಕಟ್ಟು ್ಯಾಪಿ. ಇದಕ್ಕೆ ಹಲವಾರು ಕಾರಣಗಳಿದ್ದರೂ ಗಳೆಲ್ಲದರ ಮುಖ್ಯ ಕೇಂದ್ರೀಯ ಕಾರಣ ೇರಿಕಾವೇ ಆಗಿದೆ.

ಇವತ್ತು ಎಲ್ಲರಿಗೂ ತಿಳಿದಿರುವಂತೆ ಹಣದುಬ್ಬರ 1 ಗಿಂತ ಹೆಚ್ಚಾಗಿದೆ (ಅದು ಗ್ರಾಹಕರ ಮಟ್ಟದಲ್ಲಿ 2 ಕ್ಕಿಂತ ಹೆಚ್ಚು) ಬೆಲೆಯೇರಿಕೆ ಗಗನ ಯಾಗುತ್ತಿದೆ. ಇಡೀ ವಿಶ್ವದ 3 ಬಿಲಿಯನ್ ರ ಮುಖ್ಯ ಆಹಾರ ಅಕ್ಕಿ. ಆದರೆ ಅವರಲ್ಲಿ ರನೇಯ ಒಂದಷ್ಟು ಜನರ ದಿನದ ಆಧಾರ ು ಡಾಲರಿಗಿಂತ ಕಡಿಮೆ. ಅಂದರೆ, ಇದರ ಸರ್ಕಾರಗಳು ಒಂದು ಬಿಲಿಯ ಜನರನ್ನು ಯೇ ಸಾಯಲು ಬಿಟ್ಟಿದೆ. ಖಾದ್ಯಾನ್ನಗಳ ಬೆಲೆ ರಿಂದೀಚೆಗೆ ಶೇ.40 ರಷ್ಟು ಹೆಚ್ಚಿದೆ. ಜಗತ್ತಿನ ದೇಶಗಳು ಊಹಿಸಲಾರದಷ್ಟು ಹಸಿವಿನಿಂದ ುತ್ತಿವೆ. ಹೈಟಿ ದೇಶದ ಜನತೆ ಹಸಿವು ಸಿಕೊಳ್ಳಲು ಕೆಸರಿನಲ್ಲಿ ಸಿಗುವ ಒಂದು ಬಗೆಯ ಾದ್ಯ (ತಿನ್ನಲಾಗದ) ಗಡ್ಡೆಯನ್ನು ಯೋಗಿಸುತ್ತಿದ್ದಾರೆ. ಕೆಲವೇ ವರ್ಷಗಳ ಹಿಂದೆ ಕೋ, ಇಂಡೋನೇಶಿಯಾ, ಯುವನ್, ೈನ್ಸ್, ಸೆನೆಗಲ್, ಉಜೆಬೆಕಿಸ್ತಾನ್, ಈಜಿಪ್ಟ್, ಾ, ಬೊಲಿವಿಯಾ ಆಹಾರದ ವಿಷಯದಲ್ಲಿ ಲಂಬಿಗಳಾಗಿದ್ದುವು. ಇಂದು ಅವುಗಳು ಆಹಾರ ರ್ಥಗಳನ್ನು ಆಮದು ಮಾಡಿಕೊಳ್ಳುವ ತಿಯಲ್ಲಿವೆ. ಅಂತೆಯೇ, ಒಂದು ಕಾಲದಲ್ಲಿ ಲಂಬಿಯಾಗಿದ್ದ ಭಾರತ ಇಂದು ತನ್ನ ಆಹಾರ ಗಳನ್ನು ಆಮದು ಮಾಡಿಕೊಳ್ಳುವ ತಿಯನ್ನು ಸೃಷ್ಟಿಸಿದೆಯಲ್ಲದೆ ಜನರ ಬದುಕಿನ ಅದಕ್ಕೆ ಯಾವುದೇ ಕಾಳಜಿಯಿಲ್ಲ. ಕಚ್ಚಾ ತೈಲ ೇರುತ್ತಿದ್ದರೆ, ಏನು ಮಾಡಬೇಕು ಎಂಬ ಬಗ್ಗೆ ಕ್ಷಗಳು ಸಾಕಷ್ಟು ಪರಿಹಾರೋಪಾಯಗಳನ್ನು ಮತ್ತೆ ಮತ್ತೆ ಸಾರಿ ಸಾರಿ ಹೇಳಿದ್ದವು. ಆದರೆ, ಅದು ಕಿವಿಗೊಡುತ್ತಿಲ್ಲ. ಹಣದುಬ್ಬರಕ್ಕೆ ಕಾರಣಗಳೇನು, ಪರಿಹಾರೋಪಾಯ ವೇನು? ಯಾರಿಗೆ ಬೇಕಾಗಿದೆ! ಮೊದಲು 'ಅಣು' ಒಪ್ಪಂದಕ್ಕೆ ಸಹಿ ಹಾಕಿ. ನಿಮಗೆ ಸ್ವರ್ಗವನ್ನೇ ನಾವು ಭೂಮಿಗೆ ತಂದು ಬಿಡುತ್ತೇವೆ ಎನ್ನುತ್ತಾರೆ. ಆದರೆ ಇವರು ಸ್ವರ್ಗವನ್ನು ಭೂಮಿಗೆ ತರುವಾಗ ಈ ಭೂಮಿ ಒಂದು ಭಯಾನಕ ನರಕವಾಗಿ ಮಾರ್ಪಟ್ಟಿರುತ್ತದೆ ಎಂಬುದನ್ನು ಯೋಚಿಸಲಿಕ್ಕೂ ಕೂಡ ಈ 'ಪ್ರಭುತ್ವ' ದ ಜನರು ಸಿದ್ದವಿಲ್ಲ. ಇರಲಿ, ಈ ಬಗ್ಗೆ ಮತ್ತೆ ವಿಸ್ತಾರವಾಗಿ ಚರ್ಚಿಸುವ, ಸದ್ಯ 'ಅಮೇರಿಕಾ' ಕ್ಕೆ ತಗಲಿದ ಕಾಯಿಲೆ ಏನು? ಶೇರು ಮಾರುಕಟ್ಟೆಯಲ್ಲಿ ಪ್ರತಿನಿತ್ಯ ಸಂಭವಿಸುವ ಭೂಕಂಪಗಳಿಗೆ ಅಮೇರಿಕಾವನ್ನು ಬೊಟ್ಟು ಮಾಡಿ ತೋರಿಸುವುದೇತಕ್ಕೇ? -ಈ ಬಗ್ಗೆ ಸ್ಥೂಲವಾಗಿ ಚಿಂತಿಸುವ :

ಅಮೇರಿಕಾ ಇಂದು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿರುವುದು ಅಲ್ಪಸ್ವಲ್ಪ ರಾಜಕೀಯ ಅರ್ಥಶಾಸ್ತ್ರ ತಿಳಿದವರಿಗೂ ಗೊತ್ತಿರುವ ವಿಚಾರ. ಪ್ರತಿಯೊಂದು ಬಾರಿ ಬರುವ ಆರ್ಥಿಕ ಬಿಕ್ಕಟ್ಟು ಹಿಂದಿನ ಬಿಕ್ಕಟ್ಟಿಗಿಂತ ತೀವ್ರವೂ ಜಟಿಲವೂ ಆಗಿರುತ್ತದೆ. 1930ರಲ್ಲಿನ ಬಿಕ್ಕಟ್ಟು ಕೊನೆಗೊಳ್ಳದ ಬಿಕ್ಕಟ್ಟಾಗಿತ್ತು. ಆದಾಗ್ಯೂ ಕೇನ್ಸಿಯನ್ ಗುಳಿಗೆಗಳಿಂದ ಕೆಲ ಕಾಲ ಹಾಗೂ ಹೀಗೂ ತಳ್ಳಲಾಗಿತ್ತು. 1970 ರಲ್ಲಿ ಮತ್ತೆ ತೀವ್ರತಮ ಬಿಕ್ಕಟ್ಟು ಆವರಿಸಿತು. ಇದರಿಂದ ಬಚಾವಾಗಲು ಕಚ್ಚಾ ಮಾಲು ಮತ್ತು ಅತೀ ಕಡಿಮೆ ಕೂಲಿಯಲ್ಲಿ ಮೂರನೇಯ ಜಗತ್ತನ್ನು ಹಿಂಡಿ ಹಿಪ್ಪೆ ಮಾಡಿ ಅಮೇರಿಕಾ ಸಾವರಿಸಿಕೊಂಡಿತು. ಅಂತೆಯೇ ಬಲಿಷ್ಠವೂ ಆಯಿತು. 1990 ರ ದಶಕವು ಇಡೀ ಜಗತ್ತನ್ನೇ ಅದರ ಮಾರುಕಟ್ಟೆಗಾಗಿ ತೆರೆಯಲ್ಪಟ್ಟಿತು. ಇಂಟರ್‌ನೆಟ್ ವ್ಯಾಪಾರವೂ ತನ್ನ ತುತ್ತತುದಿಯನ್ನು ಮುಟ್ಟಿತ್ತು. 2001ರಲ್ಲಿ ಇಂಟರ್‌ನೆಟ್ ಆದಾಯ ಕುಸಿಯುತ್ತಿದ್ದಂತೆಯೇ ಅದು ಸಾಲ ಹಾಗೂ ಸಟ್ಟಾ ವ್ಯಾಪಾರಕ್ಕೆ ತೊಡಗಿತು.

ಈಗಿನ ಅದರ ಬಿಕ್ಕಟ್ಟು 'ಸಬ್ ಪ್ರೈಂ' (ಅಪ್ರಧಾನ ಸಾಲ ಬಿಕ್ಕಟ್ಟು) ಕಡಿಮೆ ಅಪಾಯವಿರುವ (ವಸೂಲಾತಿಯ ದೃಷ್ಟಿಯಿಂದ) ಸಾಲಗಳನ್ನು 'ಪ್ರೈಂ' ಎಂದು ಕರೆಯುತ್ತಾರೆ. ಇದಕ್ಕಿಂತ ಹೆಚ್ಚಿನ ಅಪಾಯವಿರುವ ಸಾಲಗಳನ್ನು 'ಆಲ್ಟ್-ಐ' ಎಂದು ಕರೆಯುತ್ತಾರೆ. ದಸ್ತಾವೇಜುಗಳ ಬಗ್ಗೆ ಹೆಚ್ಚಿನ ಮಹತ್ವ ಕೊಡದ, ಅತೀ ಹೆಚ್ಚಿನ ಬಡ್ಡಿದರದ ಮತ್ತು ಅತೀ ಹೆಚ್ಚಿನ ರಿಸ್ಕ್ ಇರುವ 'ಸಬ್ ಪ್ರೈಂ' ಸಾಲಗಳು ಇಂದು ಹೆಚ್ಚಾಗಿವೆ. ಅಮೇರಿಕಾಕ್ಕೆ ಇಂದು ತೀವ್ರವಾದ ನಷ್ಟವುಂಟಾಯಿತು. ಒಟ್ಟಿನಲ್ಲಿ ಸಬ್ ಪ್ರೈಂ ಮಾರುಕಟ್ಟೆ 15 ಆಗಸ್ಟ್ 2007ಕ್ಕೆ ಸಂಪೂರ್ಣ ನೆಲಕಚ್ಚಿತು.

ಸಬ್ ಪ್ರೈಂ ಮಾರುಕಟ್ಟೆ ಅಮೇರಿಕಾದ ಮಾರುಕಟ್ಟೆಯನ್ನು ತನ್ನ ಕಬಂಧಬಾಹುಗಳಿಂದ ಜರ್ಜರಿತ ಗೊಳಿಸಿದೆ. ಆದರೆ, ಇದರಲ್ಲಿ ಸಟ್ಟಾ ಜೂಜಿನೋಪಾದಿಯಲ್ಲಿ ಲಾಭವನ್ನು ಗಳಿಸುವ ಬೆರಳೆಣಿಕೆಯ ಸಾಮ್ರಾಜ್ಯಪತಿಗಳ ಲಾಭಕ್ಕೇನೂ ಕೊರತೆಯಾಗಿಲ್ಲ. 2006ರಲ್ಲಿ ಅತ್ಯಂತ ಶ್ರೀಮಂತ ಶೇ.1(ಒಂದು) ಅಮೇರಿಕನ್ನರ ಬಳಿ ಅಮೇರಿಕಾದ ಒಟ್ಟು ಆದಾಯದ ಶೇ.22 ಭಾಗ ಕೇಂದ್ರೀಕೃತವಾಗಿದ್ದು ಇಂದಿಗೂ ಅದು ಹೆಚ್ಚುತ್ತಿದೆಯೆ ಹೊರತು ಕಡಿಮೆಯಾಗಿಲ್ಲ. ಆದರೆ, ಬಹುಸಂಖ್ಯಾತ ಅಮೇರಿಕನ್ನರ ಆದಾಯದಲ್ಲಿ ತೀವ್ರ ಇಳಿಮುಖವುಂಟಾಗಿದೆ.

ಇನ್ನೊಂದೆಡೆಯಲ್ಲಿ, ರೈತರಿಗೆ ಜೈವಿಕ ಇಂಧನ ಬೆಳೆಯಲು ವಿಶೇಷ ಪ್ರೋತ್ಸಾಹಕೊಟ್ಟು, ಸ್ವತಃ ಖರೀದಿಸಿ(ಬೀಜ, ರಸಗೊಬ್ಬರ ಒದಗಿಸಿ) ಖಾದ್ಯ ಸಾಮಗ್ರಿಗಳ ಉತ್ಪಾದನೆಯನ್ನು ಕಡೆಗಣಿಸಲಾಯಿತು. ಅಮೇರಿಕಾದ ರೈತರು ತಮ್ಮ ಉತ್ಪಾದನೆಯಲ್ಲಿ ಶೇ.30ನ್ನು ಕೇವಲ ಇಥೆನಾಲ್ ಉತ್ಪಾದಿಸುವ ಬೆಳೆಗಳಲ್ಲೇ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಸಾಂಕ್ರಾಮಿಕ ರೋಗವನ್ನು ಸಾಮ್ರಾಜ್ಯಶಾಹಿಗಳು ವಿಶ್ವದಾದ್ಯಂತ ಹರಡುತ್ತಿದ್ದಾರೆ. ಇದರ ಒಂದು ಬಹು ಮುಖ್ಯ ಪರಿಣಾಮವೆಂದರೆ ಆಹಾರ ಧಾನ್ಯಗಳ ಕೊರತೆ. ಇನ್ನೊಂದೆಡೆಯಲ್ಲಿ ಆಹಾರದ ಖರೀದಿ ಮತ್ತು ಮಾರಾಟವೂ ಬಹುರಾಷ್ಟ್ರೀಯ ಕಂಪನಿಗಳ ಏಕಸ್ವಾಮ್ಯಕ್ಕೆ ಒಳಪಟ್ಟಿರುವುದು. ರಿಟೇಲ್ ಕ್ಷೇತ್ರಕ್ಕೆ ಲಗ್ಗೆಯಿಟ್ಟು ದೈತ್ಯರ ಬಗ್ಗೆ ಈ ಹಿಂದೆ ಹೇಳಲಾಗಿದೆ. ಇದು ಭಾರತೀಯರನ್ನು ಹಸಿವಿನಿಂದ ಸಾಯಿಸಿದರೆ ಅಮೇರಿಕಾವನ್ನು ಬಿಕ್ಕಟ್ಟಿಗೆ ತಳ್ಳಿದೆ.(ಇಲ್ಲಿ 'ಅಮೇರಿಕಾ' ಎಂದರೆ ಬಹುಸಂಖ್ಯಾತ ಅಮೇರಿಕಾದ ಜನತೆಯೆಂದು ಅರ್ಥಮಾಡಿಕೊಳ್ಳಬೇಕೇ ಹೊರತು ಅಮೇರಿಕಾ ಎಂದಾಕ್ಷಣ 'ಸಾಮ್ರಾಜ್ಯಶಾಹಿ' ಎಂದರ್ಥ ಮಾಡಿಕೊಳ್ಳುವುದಲ್ಲ).

ಶ್ರೀಮಂತರ ಕೈಯಲ್ಲಿ ಆದಾಯದ ಕೇಂದ್ರೀಕರಣಕ್ಕೆ ಮುಖ್ಯಕಾರಣ ಶ್ರೀಮಂತರಿಗೆ, ಶ್ರೀಮಂತ ನಿಗಮಗಳಿಗೆ ಕೊಡುವ ಕರ ವಿನಾಯಿತಿ ಮತ್ತು ಸಟ್ಟಾ ಬಾಜಿ. ಬುಶ್ ಎಂಬ 'ಕ್ಷುದ್ರ' ತನ್ನ ಮೊದಲ ಕಾರ್ಯಕಾಲದಲ್ಲಿ ಸುಮಾರು ನೂರು ಸಾವಿರ ಮಿಲಿಯ ಡಾಲರ್ ವಿನಾಯಿತಿ ಕೊಟ್ಟರೆ, ಎರಡನೆಯ ಕಾರ್ಯ ಘಟ್ಟದಲ್ಲಿ 10 ಸಾವಿರ ಮಿಲಿಯ ಡಾಲರ್ ವಿನಾಯಿತಿ ಕೊಟ್ಟು ಇದರ ಶೇ.80 ಲಾಭ ಶ್ರೀಮಂತರಿಗೇ ದಕ್ಕಿತು. ಇನ್ನೊಂದೆಡೆ ಸಾಮ್ರಾಜ್ಯ ಶಾಹಿಗಳ ಮಹಾನೀಚ ಪ್ರತಿನಿಧಿ ಬುಶ್ ಯುದ್ಧೋನ್ಮಾದದ ನಶೆಯಲ್ಲಿದ್ದಾನೆ. ಇದೂ ಅಮೇರಿಕಾ ಹಾಗೂ ವಿಶ್ವದ ಬಿಕ್ಕಟ್ಟಿಗೆ ಪ್ರಮುಖ ಕಾರಣ.

ದಿನದಿಂದ ದಿನಕ್ಕೆ ಕುಸಿಯುತ್ತಿರುವ ಡಾಲರ್ ಬೆಲೆಯನ್ನು ಸರಿದೂಗಿಸಲಿಕ್ಕೆ ಅಮೇರಿಕಾ ಹೆಣಗುತ್ತಿದ್ದರೆ,ಕುಸಿದ ಡಾಲರ್ ಬೆಲೆಗೆ ಹೆಚ್ಚಿನ ರೂಪಾಯಿ ಮೌಲ್ಯಕೊಟ್ಟು ರಫ್ತು ಮಾಡುವವರು ಬಿಕ್ಕಟ್ಟಿಗೆ ಸಿಲುಕಿದ್ದಾರೆ. ಆಹಾರ ಧಾನ್ಯಗಳೂ ಸಟ್ಟಾ ವ್ಯಾಪಾರಕ್ಕೆ ಒಳಗಾಗಿ ಮಾನವರ ಮಾರಣಹೋಮಕ್ಕೆ ವೇದಿಕೆ ಇಂದು ಸಜ್ಜಾಗಿದೆ.

ಕೊನೆಯಲ್ಲಿ ಅಮೇರಿಕಾದ ಅರ್ಥವ್ಯವಸ್ಥೆಯ ಪರಿಣಾಮದ ಕುರಿತು ಎರಡು ಮಾತು. ಮಾರ್ಚ್ ತಿಂಗಳಲ್ಲಿ 83 ಸಾವಿರ ಮಂದಿ ಅಮೇರಿಕಾದಲ್ಲಿ ನೌಕರಿ ಕಳೆದುಕೊಂಡರು. ಏಪ್ರಿಲ್‌ನಲ್ಲಿ 20,000 ಮಂದಿ ಮನೆಗೆ ತೆರಳಬೇಕಾಯಿತು. ಕಳೆದ 4 ತಿಂಗಳಲ್ಲಿನಷ್ಟವಾದ ನೌಕರಿಗಳ ಸಂಖ್ಯೆ 2,60,000. 2007ರಲ್ಲಿ 3,20,000 ಜನ ನೌಕರಿ ಕಳೆದುಕೊಂಡಿದ್ದಾರೆ. ಅಮೇರಿಕಾದ 'ಸೆಂಟರ್ ಫಾರ್ ಎಕನಾಮಿಕ್ ಪಾಲಿಸಿ ಇನ್‌ಸ್ಟಿಟ್ಯೂಟ್'ವರದಿಯ ಪ್ರಕಾರ ಅಮೇರಿಕಾದಲ್ಲಿ ಮೂರು ಕೋಟಿ 70 ಲಕ್ಷ ಜನ ಬಡತನದ ರೇಖೆಯಲ್ಲಿ ಕೂಲಿ ಪಡೆಯುತ್ತಿದ್ದಾರೆ.

ಒಂದೆಡೆಯಲ್ಲಿ ಊಹಿಸಲು ಸಾಧ್ಯವಾದಷ್ಟು ಸಂಪತ್ತಿನ ಶೇಖರಣೆ, ಇನ್ನೊಂದೆಡೆ ಕಿತ್ತು ತಿನ್ನುವ ಬಡತನ ಮತ್ತು ಸಾವು. ಬರೇ ಆರು ಜನರಿರುವ ಅಂಬಾನಿಯ ಮುಂಬೈ ಮನೆ 27 ಮಹಡಿಗಳಿಂದ ಕೂಡಿದೆ. (ಆರು ಮಹಡಿಗಳೂ ಕೇವಲ ಅವನ ನೌಕರ ಚಾಕರರ ಕಾರ್ ಪಾರ್ಕ್ ಮಾಡಲು!) ಇತ್ತ ಇಲ್ಲಿಯ ರೈತ ಪೋಲೀಸರ ಗುಂಡಿಗೆ ಬಲಿಯಾಗುತ್ತಾನೆ; ಅಥವಾ ವಿಷ ಕುಡಿದು ಸಾಯುತ್ತಾನೆ!

ಕೇಂದ್ರ, ರಾಜ್ಯ ಸರ್ಕಾರಗಳೆಲ್ಲಾ, ಸಾಮ್ರಾಜ್ಯಶಾಹಿಯ ಬಾಲ ಬಡುಕರಂತಾಗುತ್ತಾ ನಡೆದಿದ್ದಾರೆ. ಇಲ್ಲಿ ರಿಲಯನ್ಸ್, ಅಲ್ಲಿ ವಾಲ್ ಮಾರ್ಟ್! ಇಲ್ಲಿ ಟಾಟಾ ಬಿರ್ಲಾ, ಅಲ್ಲಿ ಫೋರ್ಡ್, ಮೊನ್‌ಸೆಂತೊ, ಡು ಪೋಂಟ್, ಸಿನ್‌ಜೆಂಡಾ! ○

ಪೋಲಿಯೋ 'ಪಾಲಿಟಿಕ್ಸ್......'

16 ರಿಂದ

ಲಿಯೋ ತಡೆಗಟ್ಟುವುದು" ಎಂಬುದಾಗಿ ಾಯಿಸಿದೆ.

ೋಲಿಯೋ ರೋಗ ಅನೈರ್ಮಲ್ಯ ಹಾಗೂ ್ಚಿಕತೆಯ ವಾತಾವರಣದಲ್ಲಿ ವೃದ್ಧಿಯಾಗುತ್ತದೆ. ಈ ಎರಡು ಗುರಿಸಾಧಿಸಲು ಪೋಲಿಯೋ ನಿರ್ಮೂಲನೆಗೆ ನೀರಿನಿಂದ ಹರಡುವ ರಡುವ ರೋಗಕ್ಕಿಂತ ಗಾಳಿಯಿಂದ ಹರಡುವ ರೋಗಗಳಿಗೆ ಲಸಿಕೆಗಳು ಹೆಚ್ಚು ಪರಿಣಾಮಕಾರಿ ಎಂಬ ಸತ್ಯ ಹೊಸದೇನಲ್ಲ. ನೀರಿನಿಂದ ಹರಡುವ ರೋಗವನ್ನು ನೈರ್ಮಲ್ಯ ಸಾಧನೆಯಿಂದ ಹತೋಟಿಗೆ ತರಬಹುದು. ಆದರೆ ತಂತ್ರಜ್ಞಾನ ಆಧಾರಿತ ಲಸಿಕೆಗಳಿಗೆ ಒತ್ತುಕೊಡುತ್ತ ವಾಸ್ತವಾಂಶವನ್ನೇ ಕಡೆಗಣಿಸಲಾಗಿದೆ. ಈಗೇನು ಮಾಡಬಹುದಾಗಿದೆ.



ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆದರೆ ಕ್ರಮೇಣ ಆ ಕಾರ್ಯಕ್ರಮವನ್ನು ನಿಲ್ಲಿಸಬೇಕು. ಪರಿಸರ ನೈರ್ಮಲ್ಯಕ್ಕೆ ಹೆಚ್ಚಿನ ಗಮನ ಹರಿಸಬೇಕು. ನೈರ್ಮಲ್ಯ ಸಾಧನೆಗೆ ಹೆಚ್ಚು ಹಣ ಮೀಸಲಿಡಬೇಕು. ಹನಿರೂಪದ ಪೋಲಿಯೋ ಲಸಿಕೆಯಿಂದ ಅನೇಕರಿಗೆ ಲಕ್ವಾ ಉಂಟಾಗಿದೆ. ಅವರಿಗೆ ಸರಕಾರ ಪರಿಹಾರ ನೀಡಬೇಕು. ಚುಚ್ಚುಮದ್ದು ರೂಪದ ಪೋಲಿಯೋ ಲಸಿಕೆ ಪರಿಣಾಮಕಾರಿ. ಅದನ್ನು ತಯಾರಿಸಲು ಪ್ರಯತ್ನಗಳಾಗಬೇಕು. ಸಾರ್ವಜನಿಕ ಔಷಧಿ ಕಂಪನಿಗಳು ಆ ಲಸಿಕೆ ತಯಾರಿಸಲು ಮುಂದಾದಲ್ಲಿ, ಲಸಿಕೆ ಬೆಲೆ ಕಡಿಮೆಯಾಗುವ ಸಾಧ್ಯತೆ ಇದೆ.

ಪಲ್ಸ್ ಪೋಲಿಯೋ ಕಾರ್ಯಕ್ರಮ ದಂತಹ ಕಾರ್ಯಕ್ರಮಗಳಲ್ಲಿ ಅಂತರಾಷ್ಟ್ರೀಯ ಒತ್ತಡ, ಅಧಿಕಾರಿಗಳ ದಿಕ್ಕು ತಪ್ಪಿಸುವ ಕೃತ್ಯಗಳು ಸ್ಪಷ್ಟವಾಗಿದೆ. ರೋಗ ಚಿಕಿತ್ಸೆ ಹಾಗೂ ಪ್ರತಿಭಟನೆ. ವೈಜ್ಞಾನಿಕ ಆಧಾರದ ಮೇಲೆ ರೂಪುಗೊಂಡು ಸ್ಥಳೀಯ ವಾಸ್ತವಾಂಶ ಹಣಕಾಸು ಇತರೆ ಮುಖ್ಯ ವಿಷಯಗಳನ್ನು ಕಡೆಗಣಿಸಬಾರದು. ಜನಾರೋಗ್ಯ ಸಾಧನೆಗೆ ತಂತ್ರಜ್ಞಾನ ತಳಹದಿಯಾಗಬೇಕು.ಬೇರೇನೋ ಅಲ್ಲ. ○

ಪೋಲಿಯೋ 'ಪಾಲಿಟಿಕ್ಸ್'

ನಾವು ಪೋಲೀಯೋ ಲಸಿಕೆ ಹಾಕಿಸುವ ಬಗೆಗೆ ಮಾತ್ರ ತಿಳಿದುಕೊಂಡರೆ ಸಾಲದು, ಅದರ ಹಿಂದಿನ 'ರಾಜಕೀಯ'ವನ್ನೂ ತಿಳಿದುಕೊಳ್ಳಬೇಕು.

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಈಗ ಪೋಲಿಯೋ ರೋಗವನ್ನು ಹತೋಟಿಗೆ ತರಲಾಗಿದೆ. ಆದರೆ ಭಾರತ ಮತ್ತು ಪಾಕಿಸ್ತಾನದಲ್ಲಿ ಈ ರೋಗ ಈಗಲೂ ಕಂಡುಬರುತ್ತಿದೆ. ಒಂದು ದಶಕದಿಂದ ಈ ರೋಗವನ್ನು ನಿರ್ಮೂಲನೆ ಮಾಡುವ ಕಾರ್ಯಕ್ರಮ ಭಾರತದಲ್ಲಿ ಜಾರಿಯಲ್ಲಿದೆ. 2001ನೇ ಇಸವಿಯವರೆಗೆ ಆ ಕಾರ್ಯಕ್ರಮ ಯಶಸ್ಸು ಕಂಡಿತ್ತಾದರೂ ನಂತರ 2002ರಿಂದ ಆ ಕಾರ್ಯಕ್ರಮ ಯಶಸ್ಸು ಕಾಣದೇ ಪೋಲಿಯೋ ಹೆಚ್ಚುತ್ತಲಿದೆ. ಪೋಲಿಯೋ ವೈರಸ್‌ನಿಂದ ಉಂಟಾಗುವ ರೋಗ. ಪೋಲಿಯೋ ರೋಗದಿಂದ ಕೈಕಾಲುಗಳು ಊನವಾಗುತ್ತದೆ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯ. ಪೋಲಿಯೋ ರೋಗದಿಂದ ಉಸಿರಾಟದ ತೊಂದರೆಯೂ, ಸಾವೂ ಸಂಭವಿಸಬಹುದು. ಪೋಲಿಯೋ ರೋಗವನ್ನು ಗುಣಪಡಿಸಲಾಗದು. ಆದರೆ ತಡೆಗಟ್ಟಬಹುದಾಗಿದೆ. ಹೋದವರ್ಷ (2007) ಈ ರೋಗ ತಡೆಗಟ್ಟಲು 1300 ಕೋಟಿಗಳಷ್ಟು ಖರ್ಚಾಗಿದೆ. ಆದರೂ ಈ ರೋಗ ಹತೋಟಿಗೆ ಬರದಿದ್ದುದರಿಂದ ಕೇಂದ್ರ ಆರೋಗ್ಯ ಮಂತ್ರಿಗಳು ಇತ್ತೀಚೆಗೆ ಈ ಕಾರ್ಯಕ್ರಮದ ಪರಿಶೀಲನೆ ನಡೆಸಿದ್ದಾರೆ. (ಅ) ಪೋಲಿಯೋ ನಿರ್ಮೂಲನೆ ಕಾರ್ಯಕ್ರಮದಲ್ಲೇನು ನಡೆಯುತ್ತಿದೆ. ಪೋಲಿಯೋ ತಡೆಗಟ್ಟಲು ಹನಿರೂಪದ (ಸೇಬಿನ್) ಲಸಿಕೆಯನ್ನು ಉಪಯೋಗಿಸುತ್ತಿದ್ದಾರೆ. ಒಂದು ವರ್ಷದೊಳಗೆ ಮೂರು ಬಾರಿ ಈ ಲಸಿಕೆಯನ್ನು ಹಾಕುವ ಕಾರ್ಯಕ್ರಮ 78, 79ರಿಂದ ಜಾರಿಯಲ್ಲಿದೆ. ಇದರ ಪರಿಣಾಮವಾಗಿ ಪೋಲಿಯೋ ಪ್ರಮಾಣ 80ರಷ್ಟು ಕಡಿಮೆಯಾಗಿತ್ತು (1998, 24,257 ರೋಗಿಗಳು : 1994 ರಿಂದ 4793 ರೋಗಿಗಳು) ಈ ಹಂತದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಜಾರಿಗೆ ಬಂದಿತು. ರಾಷ್ಟ್ರದಲ್ಲಿ ಒಂದೇ ದಿನ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲ ಮಕ್ಕಳಿಗೂ ಪೋಲಿಯೋ ಹನಿಗಳನ್ನು ಹಾಕುವುದೇ ಪಲ್ಸ್ ಪೋಲಿಯೋ ಕಾರ್ಯಕ್ರಮ. ಪಲ್ಸ್ ಪೋಲಿಯೋವನ್ನು ನಿಗದಿಪಡಿಸಿದ ದಿನದಂದು ವರ್ಷಕ್ಕೆ ಎರಡು ಬಾರಿ ಹಾಕಲಾಗುತ್ತದೆ. ಅದಲ್ಲದೆ ಕೆಲವು ಕಡೆಗಳಲ್ಲಿ ಅನೇಕ ಬಾರಿ ಹಾಕುವ ಪರಿಪಾಠವೂ ರೂಢಿಯಾಗಿದೆ.

ಆ) ಪಲ್ಸ್ ಪೋಲಿಯೋ ಕಾರ್ಯಕ್ರಮದಿಂದ ಪೋಲಿಯೋ ನಿರ್ಮೂಲನೆಯಾಗುತ್ತದೆಯೇ?

ಕೆಲವು ವರ್ಷಗಳಿಂದ ಪಲ್ಸ್‌ಪೋಲಿಯೋ ಕಾರ್ಯಕ್ರಮದ ಉಪಯೋಗ ಪಡೆಯಲು ತಂದೆ ತಾಯಂದಿರಿಗೆ ಮನವಿ ಮಾಡಲಾಗುತ್ತಿದೆ. ಟಿ.ವಿ/ರೇಡಿಯೋದಲ್ಲಿ ಚಿತ್ರನಟರು ಭಾವನಾತ್ಮಕ ಶೈಲಿಯಲ್ಲಿ ಪೋಲಿಯೋ ಹನಿಯನ್ನು ಹಾಕಿಸಲು ಒತ್ತಾಯಿಸುತ್ತಿದ್ದಾರೆ. ಹಿಂದೆ ಸ್ಮಾಲ್ ಪಾಕ್ಸ್ ರೋಗವನ್ನು ಹತೋಟಿ ಮಾಡಿದಂತೆ ಪೋಲಿಯೋ ರೋಗವನ್ನು ನಿರ್ಮೂಲನ ಮಾಡಲು ಪೋಲಿಯೋ ಹನಿಗಳನ್ನು ಹಾಕಿಸಲು ಮನವಿ ಮಾಡಲಾಗುತ್ತದೆ.

ಆದರೆ ಪೋಲಿಯೋ ಹನಿಗಳಿಂದ ಪೋಲಿಯೋ ನಿರ್ಮೂಲನೆ ಮಾಡಲು ಸಾಧ್ಯವಿಲ್ಲವೆಂದು 20 ವರ್ಷಗಳ ಹಿಂದೆಯೇ ತಿಳಿದುಬಂದಿದೆ. ತಜ್ಞರು ಪೋಲಿಯೋ ಹನಿಗಳಿಂದ ಪೋಲಿಯೋ ನಿರ್ಮೂಲನೆ ಮಾಡಬಹುದೆಂದು ತಿಳಿಸುತ್ತ ಸರ್ಕಾರವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಮೊದಲು ಪೋಲಿಯೋವನ್ನು 2000 ಇಸವಿಯ ಹೊತ್ತಿಗೆ ನಿರ್ಮೂಲನ ಮಾಡುವುದಾಗಿ ಹೇಳಲಾಗಿತ್ತು. ಆದರೆ ಅದನ್ನು 2015ಕ್ಕೆ ಮುಂದೂಡಲಾಗಿದೆ.

ಇ) ಪೋಲಿಯೋ ನಿರ್ಮೂಲನೆ ಮಾಡಲು ಯಾವ ವೈಜ್ಞಾನಿಕ ಆಧಾರವಿಲ್ಲದಿದ್ದರೂ ಯಾಕೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ?

1995ರಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಪ್ರಾರಂಭವಾಗಲು ಅಂತರಾಷ್ಟ್ರೀಯ ಒತ್ತಡವೇ ಕಾರಣ. ವಿಶ್ವ ಆರೋಗ್ಯ ಸಂಸ್ಥೆಯೂ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಒತ್ತಡ ಹೇರಿತ್ತು. ಮುಂದುವರೆದ ರಾಷ್ಟ್ರಗಳು ತಾವು ತಯಾರಿಸಿದ, ಪೋಲಿಯೋ ಹನಿಯನ್ನು ಭಾರತಕ್ಕೆ ಮಾರಲು ಮುಂದಾದರು. ಭಾರತದ ತಜ್ಞರು ಸರಕಾರಕ್ಕೆ ತಪ್ಪು ದಾರಿ ಹಿಡಿಸಿದರು. ಇದನ್ನು ಬಿಟ್ಟರೆ ಈ ಕಾರ್ಯಕ್ರಮಕ್ಕೆ ಯಾವ ವೈಜ್ಞಾನಿಕ ಆಧಾರವೂ ಇಲ್ಲ. ಆದರೆ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಸರಕಾರ ಅಪಾರ ಹಣ ಖರ್ಚು ಮಾಡಬೇಕಾಯಿತು.



ಈ) ಪಲ್ಸ್ ಪೋಲಿಯೋಗೆ ಎಷ್ಟು ಖರ್ಚಾಯಿತು, ಇತರೆ ಲಸಿಕೆಗಳಿಗೆಷ್ಟು ಖರ್ಚು

ಸರಕಾರ ಪೋಲಿಯೋ ಕಾರ್ಯಕ್ರಮಕ್ಕೆ 2007ರಲ್ಲಿ 1300 ಕೋಟಿ ರೂಪಾಯಿ ಖರ್ಚು ಮಾಡಿದೆ. ಈ ಹಣ ಅಂತರ್ರಾಷ್ಟ್ರೀಯ ಕಂಪನಿಗಳಿಂದ ಸಾಲದ ರೂಪದಲ್ಲಿ ಬಂದಿದೆ. ಪ್ರಾರಂಭದಲ್ಲಿ ಭಾರತದ ರೋಟರಿ ಸಂಸ್ಥೆ ಸ್ವಲ್ಪ ಖರ್ಚು ಮಾಡಿದೆ. ಹಾಗೂ ಅಪಾರ ಹೆಸರು ಗಳಿಸಲು ಮುಂದಾಗಿದೆ. ಆದರೆ ನಂತರದ ದಿನಗಳಲ್ಲಿ ಈ ಕಾರ್ಯಕ್ರಮಕ್ಕೆ ರೋಟರಿ ಸಂಸ್ಥೆ ಹಣ ಖರ್ಚು ಮಾಡಿಲ್ಲ. ಆದರೆ ಭಾರತ ಸರ್ಕಾರ ಎಲ್ಲ ಖರ್ಚನ್ನು ವಹಿಸಿಕೊಂಡಿದೆ.

ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ 1300 ಕೋಟಿ ರೂ.ಗಳು

ಇತರೇ ಲಸಿಕಾ ಕಾರ್ಯಕ್ರಮಕ್ಕೆ 327 ಕೋಟಿ ರೂ.ಗಳು

ಕ್ಷಯ ರೋಗ ಹತೋಟಿಗೆ 184 ಕೋಟಿ

ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಗಮನಹರಿಸಿ, ಇತರೆ ಲಸಿಕಾ ಕಾರ್ಯಕ್ರಮಗಳನ್ನು ನಿರ್ಲಕ್ಷಿಸಲಾಗಿದೆ. ಭಾರತದ ಪ್ರಮುಖ ಆರೋಗ್ಯ ಸಮಸ್ಯೆಯಾದ ಕ್ಷಯರೋಗವನ್ನೂ ಕಡೆಗಣಿಸಲಾಗಿದೆ.

ಪೋಲಿಯೋ ರೋಗ	ಕ್ಷಯ ರೋಗ
20,000 ರೋಗಿಗಳು	1.5 ಕೋಟಿ ರೋಗಿಗಳು
500 ಸಾವುಗಳು	4 ಲಕ್ಷ ಸಾವುಗಳು

ಕ್ಷಯರೋಗ, ಮಲೇರಿಯಾ, ಶಿಶಿಮರಣ, ಮಾತೃಮರಣಗಳನ್ನು ಕಡೆಗಣಿಸಿ, ಪೋಲಿಯೋ ನಿರ್ಮೂಲನೆ ಮಾಡಲು ಮುಂದಾಗಿರುವುದು ವಿಪರ್ಯಾಸವಲ್ಲವೇ?



ಡಾ. ಪ್ರಕಾಶ್ ಸಿ ರಾವ್
ಅಧ್ಯಕ್ಷರು,
ಜನಾರೋಗ್ಯ ಆಂದೋಲನ

ಉ) ಮುಂದುವರೆದ ರಾಷ್ಟ್ರಗಳಲ್ಲಿ ಪೋಲಿಯೋ ನಿರ್ಮೂಲನೆ ಸಾಧ್ಯವಾಗಿದೆ. ಭಾರತದಲ್ಲೂ ಸುಮಾರು ಎಲ್ಲ ಜಿಲ್ಲೆಗಳಲ್ಲೂ ಪೋಲಿಯೋ ನಿರ್ಮೂಲನೆಯಾಗಿದೆ. ಅಂದರೆ ನಾವು ಗುರಿ ಸಾಧನೆ ಮಾಡಿದಂತಲ್ಲವೇ?

ಮುಂದುವರೆದ ಕೆಲವು ರಾಷ್ಟ್ರಗಳಲ್ಲಿ ಪೋಲಿಯೋ ನಿರ್ಮೂಲನೆಯಾಗಿದೆ. ಇದಕ್ಕೆ ಕಾರಣ ನೈರ್ಮಲ್ಯ, ಪೌಷ್ಟಿಕ ಆಹಾರದೊಂದಿಗೆ ಲಸಿಕೆಗಳು. ವಿಶ್ವ ಆರೋಗ್ಯ ಸಂಸ್ಥೆ ಪೋಲಿಯೋ ನಿರ್ಮೂಲನೆ ಬಗ್ಗೆ ತೆಗೆದುಕೊಂಡ ಕ್ರಮ ಪರಿಣಾಮಕಾರಿಯಾಗಿಲ್ಲದ್ದರಿಂದ, ಈಗ ಆಲ್ಬೇನಿಯಾ, ನೆದರ್‌ಲ್ಯಾಂಡ್, ಫಿಲಿಫೈನ್ಸ್, ಈಜಿಪ್ಟ್, ನಮೀಬಿಯಾ ಮುಂತಾದ ದೇಶಗಳಲ್ಲಿ ಪೋಲಿಯೋ ಮರುಕಳಿಸಿದೆ.

ಅನೇಕ ಜಿಲ್ಲೆಗಳಲ್ಲಿ ಪೋಲಿಯೋ ನಿರ್ಮೂಲನೆ ಯಾಗಿದೆ ನಿಜ. ಆದರೆ ಸಾವಿರಾರು ಜನರು ಈ ರೋಗಾಣುವನ್ನು ದೇಹದಲ್ಲಿ ಹೊಂದಿರುವುದು ಕಂಡುಬಂದಿದೆ. ಪೋಲಿಯೋ ನಿರ್ಮೂಲನೆ ಯಾದಂತೆಲ್ಲ ಕೆಲವು ಮಕ್ಕಳು ಉಗ್ರ ಪೋಲಿಯೋ ವೈರಸ್ಸನ್ನು ಹರಡುತ್ತಿದ್ದಾರೆ. ಪೋಲಿಯೋ ಹನಿಗಳಲ್ಲಿರುವ ಸಾಮಾನ್ಯ ವೈರಸ್ಸು ಕರುಳಿನಲ್ಲಿ ಬದಲಾವಣೆಯಾಗಿ ಉಗ್ರ ಪೋಲಿಯೋ ವೈರಸ್ ಆಗುತ್ತದೆಂದು 50ನೇ ದಶಕದಲ್ಲಿ ಕಂಡುಬಂದಿದೆ. ಇದೇ ಲಕ್ವಾ ಜಂಟುಮಾಡಲು ಕಾರಣ.

ಊ) ಪೋಲಿಯೋ ರೋಗಿಗಳ ಸಂಖ್ಯೆ 5000 (1994) ರಿಂದ 66, (2005)ಕ್ಕೆ ಇಳಿದಿದೆಯಲ್ಲವೇ? ಭಾರತ ಕ್ರಮೇಣ ಪೋಲಿಯೋ ಮುಕ್ತ ರಾಷ್ಟ್ರವಾಗ ಬಹುದಲ್ಲವೇ?

ಈ ಅಂಕಿಸಂಖ್ಯೆಗಳು ದಿಕ್ಕು ತಪ್ಪಿಸುತ್ತವೆ. ಪಲ್ಸ್ ಪೋಲಿಯೋ ಕಾರ್ಯಕ್ರಮ ಪ್ರಾರಂಭವಾದಾಗಿನಿಂದ ಲಸಿಕೆಯಿಂದಾದ ರೋಗಿಗಳ ಸಂಖ್ಯೆ ಹೆಚ್ಚಿದೆ.

500/2002 1645/2005

ಪೋಲಿಯೋ ಹತೋಟಿ ಭಾಗಶಃ ಸಾಧ್ಯವಾದರೂ, ಸಂಪೂರ್ಣ ನಿರ್ಮೂಲನೆ ಸಾಧ್ಯವಿಲ್ಲ ಕಾರಣ ಉಗ್ರ ಪೋಲಿಯೋ ವೈರಸ್‌ಗಳಿಂದ. ಭಾಗಶಃ ಹತೋಟಿಗೆ ನಾವು ಮಾಡಿದ ಖರ್ಚು ಅಪಾರ. ಉಗ್ರ ಪೋಲಿಯೋಗೆ ಕಾರಣ ಮೇಲೆ ಏರ್ಪಡಿಸಿದ ಪಲ್ಸ್ ಪೋಲಿಯೊ ಎಲ್ಲಾದರೂ ಒಂದು ಪೋಲಿಯೋ ರೋಗಿ ವರದಿಯಾದರೆ ಕೂಡಲೇ ಅಧಿಕಾರಿಗಳು ಪಲ್ಸ್ ಪೋಲಿಯೋ ಏರ್ಪಡಿಸುತ್ತಾರೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ 10 ಬಾರಿ ಪಲ್ಸ್ ಪೋಲಿಯೋ ಕೊಡಲಾಗಿದೆ.

ಕ್ಯೂಬಾ ದೇಶದಲ್ಲಿ ವರ್ಷಕ್ಕೆ ಕೇವಲ ಎರಡು ಬಾರಿ ಮಾತ್ರ ಪಲ್ಸ್ ಪೋಲಿಯೋ ಕಾರ್ಯಕ್ರಮ ಇರುತ್ತದೆ ಹಾಗೂ ಪಲ್ಸ್ ಪೋಲಿಯೋ ಕಾರ್ಯಕ್ರಮ ಯಶಸ್ವಿಯಾಗಿದೆ.

ಋ) ಪೋಲಿಯೋ ನಿರ್ಮೂಲನೆಗೆ ಇತರೆ ವಿಧಾನವಾವುದೂ ಇಲ್ಲವೇ?

ಸಾಲ್ಕ ಕಂಡು ಹಿಡಿದ ಚುಚ್ಚು ಮದ್ದು ರೂಪದ ಪೋಲಿಯೋ ಲಸಿಕೆ ಪೋಲಿಯೋ ಹತೋಟಿಗೆ ಪರಿಣಾಮಕಾರಿ ಲಸಿಕೆ. ಇದು ರಕ್ತದಲ್ಲಿ ರೋಗ ತಡೆಗಟ್ಟುವ ಶಕ್ತಿ ಹೆಚ್ಚಿಸುತ್ತದೆ. ಆದರೆ ಈ ಚುಚ್ಚುಮದ್ದು ದುಬಾರಿ. ಮುಂದುವರೆದ ರಾಷ್ಟ್ರಗಳು ಹನಿ ರೂಪದ ಪೋಲಿಯೋ ಲಸಿಕೆ ಬದಲು ಚುಚ್ಚುಮದ್ದು ರೂಪದ ಲಸಿಕೆಯನ್ನು ಉಪಯೋಗಿಸುತ್ತಿದ್ದಾರೆ.

ಈ ಚುಚ್ಚುಮದ್ದನ್ನು ಭಾರತದಲ್ಲೂ ತಯಾರಿಸ ಬಹುದಾಗಿದೆ. ಆ ಪ್ರಯತ್ನವನ್ನು ಮಾಡಲಾಗಿತ್ತು. ಆದರೆ ಆ ಪ್ರಯತ್ನವನ್ನು ಕೈಬಿಡಲಾಯಿತು. ಕಾರಣ ಸ್ಪಷ್ಟವಾಗಿಲ್ಲ.

ಪೋಲಿಯೋ ನಿರ್ಮೂಲನೆ ಹನಿಗಳಿಂದ ಸಾಧ್ಯವಿಲ್ಲವೆಂದು ಗೊತ್ತಾದ ನಂತರ ವಿಶ್ವ ಆರೋಗ್ಯ ಸಂಸ್ಥೆ "ಪೋಲಿಯೋ ನಿರ್ಮೂಲನೆ" ಕೈಬಿಟ್ಟು

ಪುಟ 15ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ು ಕರೆ ನೀಡಿ.
ಲ್.ಜಿ, ಕೆ.ಆರ್.ಪುರ